# ನಿಗಮನ ತರ್ಕಶಾಸ್ತ್ರ

## ಪ್ರಥಮ ಪಿ.ಯು.ಸಿ.

## ಪಠ್ಯ ಪುಸ್ತಕ

**2015 - 2016**


## ಪದವಿಪೂರ್ವ ಶಿಕ್ಷಣ ಇಲಾಖೆ

**ಮಲ್ಲೇಶ್ವರಂ, ಬೆಂಗಳೂರು – 12**

www.pue.kar.nic.in

***First Edition - May 2013***

***Revised Edition - May 2014***

©***Department of Pre-University Education 2014.***

**All Rights Are Reserved**

No part of this publication may be reproduced, stored in a retrieval system or transmitted, in any form or by any means, electronic, mechanical, photo copying, recording or otherwise without the prior permission of the publisher.

This book is sold subject ot the condition that it shall not, by way of trade, be lent, resold, hired out or otherwise disposed of, without the publisher's consent, in any form of binding or cover other than that in which it is published.

The correct price of this publication is the price printed on this page/cover page. Any revised price indicated by a rubber stamp or by a sticker or by any other means is incorrect and should be unacceptable.

# ನಿರ್ದೇಶಕರ ಸಂದೇಶ

**ಆತ್ಮೀಯ ವಿದ್ಯಾರ್ಥಿಗಳೇ,**

ಪ್ರತಿ ವಿದ್ಯಾರ್ಥಿಯು ಮಹತ್ತರವಾದ ಕನಸು ಕಾಣಲು ಹಾಗೂ ಆ ಕನಸುಗಳನ್ನು ಸಾಕಾರಗೊಳಿಸಿಕೊಂಡು ಎತ್ತರದ ಸ್ಥಾನಕ್ಕೇರಲು ಮತ್ತು ಜೀವನದ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸಲು ಸಮರ್ಥನಾಗುವಂತೆ ಮಾಡಲು ಅಗತ್ಯವಾದ ಎಲ್ಲಾ ಸಾಧನಗಳನ್ನು ಪೂರೈಸಲು ಕರ್ನಾಟಕದ ಪದವಿ ಪೂರ್ವ ಶಿಕ್ಷಣ ಇಲಾಖೆಯು ಶ್ರಮಿಸುತ್ತಿದೆ. ಈ ಹಿನ್ನೆಲೆಯಲ್ಲಿ **"ವ್ಯಕ್ತಿ ತಾನು ಸ್ವಾವಲಂಬಿಯಾಗಲು ಸಮರ್ಥನಾಗುವಂತೆ ಮಾಡುವುದೇ ನಿಜವಾದ ಶಿಕ್ಷಣ"** ಎಂಬ ಸ್ವಾಮಿ ವಿವೇಕಾನಂದರ ಮಾತು ಸೂಕ್ತವಾಗಿದೆ.

ಈ ಪಠ್ಯಪುಸ್ತಕದಲ್ಲಿ ಅಳವಡಿಸಲಾಗಿರುವ ವಿಷಯಗಳು ಮುಂದಿನ ಹಂತದ ಅಧ್ಯಯನಕ್ಕೆ ನಿಮ್ಮನ್ನು ಸಜ್ಜುಗೊಳಿಸುವ ಉದ್ದೇಶದಿಂದ ರಚಿಸಲಾಗಿದೆ.

ನಿಮ್ಮ ವಿದ್ಯಾಭ್ಯಾಸದ ಪಯಣವು ಸುಗುಮವಾಗಿ ಸಾಗಿ, ನೀವು ರಾಷ್ಟ್ರದ ಜವಾಬ್ದಾರಿಯುತ ಪ್ರಜೆಯಾಗಿ ಹೊರಹೊಮ್ಮಿ ಸಮಾಜದ ಏಳಿಗೆಗಾಗಿ ಕಾಣಿಕೆಯನ್ನು ಹಿಂತಿರುಗಿಸುವ ಸ್ಥಾನದಲ್ಲಿ ನಿಮ್ಮನ್ನು ನೋಡಲು ಇಚ್ಛಿಸುತ್ತೇನೆ.

ಶುಭಾಶಯಗಳೊಂದಿಗೆ,

**ಸಹಿ/-**
**ಸಿ.ಶಿಖಾ,** ಭಾ.ಆ.ಸೇ.,
ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ
ಬೆಂಗಳೂರು

# ಮುನ್ನುಡಿ

ವಿದ್ಯಾಭ್ಯಾಸದ ಸರ್ವಶ್ರೇಣಿಗಳಲ್ಲಿಯೂ ಮಾತೃಭಾಷೆ ಶಿಕ್ಷಣ ಮಾಧ್ಯಮವಾಗಬೇಕಾದುದು ಅತ್ಯವಶ್ಯ. ರಾಷ್ಟ್ರದ ಸರ್ವತೋಮುಖ ಪ್ರಗತಿ ಮತ್ತು ವಿದ್ಯಾರ್ಥಿಗಳ ಸರ್ವಾಂಗೀಣ ವಿಕಾಸದ ದೃಷ್ಟಿಯಿಂದ ಇದು ಅವಶ್ಯಕ. ಎಲ್ಲ ಹಂತಗಳಲ್ಲಿಯೂ ಕನ್ನಡವನ್ನು ಶಿಕ್ಷಣ ಮಾಧ್ಯಮವನ್ನಾಗಿ ಬಳಸಬೇಕೆಂಬ ನೀತಿಗನುಗುಣವಾಗಿ ಪದವಿಪೂರ್ವ ಶಿಕ್ಷಣ ಇಲಾಖೆ ಕನ್ನಡ ಮಾಧ್ಯಮವನ್ನು ಒದಗಿಸುವುದರ ಜೊತೆಗೆ ಕನ್ನಡದಲ್ಲೇ ಉತ್ತರಿಸುವ ಸೌಲಭ್ಯವನ್ನು ಒದಗಿಸಿದೆ. 1969–70ರಲ್ಲಿ ಕೇಂದ್ರ ಸರ್ಕಾರ ಪ್ರಾದೇಶಿಕ ಭಾಷೆಗಳ ಅಭಿವೃದ್ಧಿ ಯೋಜನೆಯನ್ನು ಜಾರಿಗೆ ತಂದಿದೆ. ಅಂದಿನಿಂದ ಇಂದಿನವರೆಗೆ ಕನ್ನಡದಲ್ಲಿ ವಿಜ್ಞಾನ ಮತ್ತು ಮಾನವಿಕ ಪಠ್ಯ ಪುಸ್ತಕಗಳು, ಆಕಾರ ಗ್ರಂಥಗಳನ್ನು ಹೊರತರುವ ಉದ್ದೇಶವನ್ನು ಹಾಕಿಕೊಂಡಿದೆ.

ಈ ಪುಸ್ತಕವನ್ನು ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಮಾನ್ಯ ಮಾಡಿದ ಹೊಸ ಪಠ್ಯಕ್ರಮಕ್ಕನುಗುಣವಾಗಿ ರಚಿಸಲಾಗಿದೆ. ತರ್ಕಶಾಸ್ತ್ರವನ್ನು ಪರಿಚಯಿಸಿಕೊಳ್ಳುವ ಆಸಕ್ತ ಓದುಗರಿಗೂ ಇದು ಉತ್ತಮ ಮಾರ್ಗದರ್ಶನ ಗ್ರಂಥವಾಗಿದೆ. ಪಾರಿಭಾಷಿಕ ಪದಗಳನ್ನು ಸಾಮಾನ್ಯ ಪರಿಭಾಷೆಯ ಪದಗಳೊಂದಿಗೆ ಹೊಂದಿಕೆಯಾಗುವಂತೆ ರೂಪಿಸಲಾಗಿದೆ. ವಿಷಯ ವಿವರಣೆಯಲ್ಲಿ ವಿಚಾರದ ಮಂಡನೆಗೆ ಅವಶ್ಯವೆಂದು ಕಂಡುಬಂದಲ್ಲಿ ಹೊಸ ಪದ ಪ್ರಯೋಗಗಳನ್ನು ಮಾಡಲಾಗಿದೆ. ಕನ್ನಡ ಭಾಷೆ ಸಮೃದ್ಧವಾಗಿ ಬೆಳೆಯುತ್ತಿರುವ ಈ ಸಂದರ್ಭದಲ್ಲಿ ಪ್ರಯೋಗಶೀಲತೆ ಅಗತ್ಯ. ತರ್ಕಶಾಸ್ತ್ರವನ್ನು ಅಧ್ಯಯನಿಸಲು ಆರಂಭಿಸುವ ವಿದ್ಯಾರ್ಥಿಗಳು ಈ ಕ್ಷೇತ್ರದಲ್ಲಿ ಹೆಚ್ಚಿನ ಅಧ್ಯಯನ ಕೈಗೊಳ್ಳಲು ಈ ಪುಸ್ತಕ ಆಸಕ್ತಿಯುಂಟು ಮಾಡಬಲ್ಲದು ಎಂಬ ವಿಶ್ವಾಸವಿದೆ.

ಈ ಪುಸ್ತಕವನ್ನು ಸಿದ್ಧಪಡಿಸಲು ಸಹಕರಿಸಿದ ಪದವಿಪೂರ್ವ ಶಿಕ್ಷಣ ಇಲಾಖೆಯ ನಿರ್ದೇಶಕರು ಹಾಗೂ ಅಧಿಕಾರಿಗಳಿಗೆ ಧನ್ಯವಾದಗಳು.

ಈ ಪಠ್ಯಪುಸ್ತಕವನ್ನು ಸಿದ್ಧಪಡಿಸಲು ಶ್ರೀಮತಿ ಕೃಪಾ ಎಂ. ಎಂ.ರವರು ಬಹಳಷ್ಟು ನೆರವನ್ನು ನೀಡಿರುತ್ತಾರೆ.

ಈ ಪಠ್ಯಪುಸ್ತಕದ ಸಿದ್ಧತೆಯಲ್ಲಿ ಅನೇಕರು ಸಲಹೆ ಸೂಚನೆ, ನೀಡಿದ್ದಾರೆ, ಪರಾಮರ್ಶನ ಗ್ರಂಥ ಕರ್ತೃಗಳಿಗೆ ವಿಷಯ ತಜ್ಞರಿಗೆ, ತಮ್ಮ ಜ್ಞಾನ, ಕೌಶಲ್ಯ, ಸಾಮರ್ಥ್ಯವನ್ನು ಧಾರೆ ಎರೆದ ಎಲ್ಲಾ ಪಠ್ಯ ಪರಿಷ್ಕರಣಾ ಸಮಿತಿಯ ಸದಸ್ಯರುಗಳಿಗೆ ಕಂಪ್ಯೂಟರಿನಲ್ಲಿ ಅಚ್ಚುಕಟ್ಟಾಗಿ ಡಿ.ಟಿ.ಪಿ. ಮಾಡಿದ ಗಣಕ ತಜ್ಞರಿಗೆ ಅಂದವಾಗಿ ಮುದ್ರಿಸಿಕೊಟ್ಟ ಮುದ್ರಕರಿಗೆ, ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಸಹೃದಯಿಗಳಿಗೆ ಮನಪೂರ್ವಕವಾಗಿ ಕೃತಜ್ಞತೆ ಸಲ್ಲಿಸುತ್ತೇನೆ.

ರಾಮಕೃಷ್ಣ ಬಿ.ಜಿ.
ಅಧ್ಯಕ್ಷರು
ತರ್ಕಶಾಸ್ತ್ರ ಪಠ್ಯಪುಸ್ತಕ ರಚನಾ ಸಮಿತಿ
ಪದವಿಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು

## ಪಠ್ಯಪುಸ್ತಕ ರಚನಾ ಸಮಿತಿ

**ಅಧ್ಯಕ್ಷರು :** **ರಾಮಕೃಷ್ಣ ಬಿ.ಜಿ.**
ಆಯ್ಕೆ ಶ್ರೇಣಿ ಉಪನ್ಯಾಸಕರು,
ಸರ್ಕಾರಿ ಪದವಿಪೂರ್ವ ಕಾಲೇಜು,
ಕುಂದಾಪುರ, ಉಡುಪಿ ಜಿಲ್ಲೆ.

**ಸಂಚಾಲಕರು :** **ಹಮೀದ ಮುಖ್ತಾರಿ ಸಿದ್ಧಿಖಾ**
ಸರ್ಕಾರಿ ಪದವಿಪೂರ್ವ ಕಾಲೇಜು,
ಮಲ್ಲೇಶ್ವರಂ, ಬೆಂಗಳೂರು.

**ಸದಸ್ಯರು :** **ಭಾರತಿ ವಿ.ಎಸ್.**
ಪ್ರಾಂಶುಪಾಲರು,
ಮಾತೃ ಮಂಡಳಿ ಮಹಿಳಾ ಕಾಲೇಜು, ಮೈಸೂರು

**ಮಲ್ಲಿಕಾರ್ಜುನಸ್ವಾಮಿ ಎಂ.**
ಪ್ರಾಂಶುಪಾಲರು,
ಸರ್ಕಾರಿ ಪದವಿಪೂರ್ವ ಕಾಲೇಜು,
ಬೆಟ್ಟಂಪಾಡಿ, ಪುತ್ತೂರು, ದಕ್ಷಿಣ ಕನ್ನಡ.

**ಗೀತಾ ಕೆ.ಆರ್.**
ತರ್ಕಶಾಸ್ತ್ರ ಉಪನ್ಯಾಸಕರು,
ಡಿ.ವಿ.ಎಸ್. ಸ್ವತಂತ್ರ ಪದವಿಪೂರ್ವ
ಕಾಲೇಜು, ಶಿವಮೊಗ್ಗ.

**ಡಾ॥ ಖಂಡೋಬಾ ಎಸ್. ಹೆಚ್.**
ತರ್ಕಶಾಸ್ತ್ರ ಉಪನ್ಯಾಸಕರು,
ಸರ್ಕಾರಿ ಪದವಿಪೂರ್ವ ಕಾಲೇಜು,
ವೀರಾಜಪೇಟೆ, ಕೊಡಗು ಜಿಲ್ಲೆ.

**ದಾಕ್ಷಾಯಣಮ್ಮ**
ತರ್ಕಶಾಸ್ತ್ರ ಉಪನ್ಯಾಸಕರು,
ಸರ್ಕಾರಿ ಪದವಿಪೂರ್ವ ಕಾಲೇಜು,
ಕೊಪ್ಪ, ಚಿಕ್ಕಮಗಳೂರು ಜಿಲ್ಲೆ.

## ಪರಿಶೀಲನಾ ಸಮಿತಿ

1. **ಶ್ರೀ ಶಿವಯೋಗಿ ಪ್ಯಾಟಿ ಶೆಟ್ಟರ್**
   ನಿವೃತ್ತ ಉಪನ್ಯಾಸಕರು,
   ಎಸ್.ಜಿ. ಪದವಿ ಪೂರ್ವ ಕಾಲೇಜು,
   ಬಳ್ಳಾರಿ.

2. **ಶ್ರೀ ನಾಗಭೂಷಣ ಸಿ.**
   ನಿವೃತ್ತ ಉಪನ್ಯಾಸಕರು,
   ಸರ್ಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜು,
   13ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು

3. **ಶ್ರೀ ಜನಾರ್ಧನ ಸಿ.ಟಿ.**
   ನಿವೃತ್ತ ಪ್ರಾಂಶುಪಾಲರು,
   ಎಸ್.ಜೆ.ಪಿ.ಜೆ.ಸಿ. ಪದವಿ ಪೂರ್ವ ಕಾಲೇಜು,
   ಹುಣಸಮಾರನಹಳ್ಳಿ, ಬೆಂಗಳೂರು

## ಪೀಠಿಕೆ

## Unexamined life is not worth living –Socretes

## "ಪರೀಕ್ಷಿಸದ (ಪ್ರಶ್ನಿಸದ) ಜೀವನ ಬದುಕಲು ಯೋಗ್ಯವಲ್ಲ" – *ಸಾಕ್ರಟಿಸ್*

### "Cogito ergo sum"- I doubt therefore I understand–Descartes

## "ನಾನು ಸಂದೇಹಿಸುತ್ತೇನೆ ಅದರಿಂದ ನಾನು ತಿಳಿದುಕೊಳ್ಳುತ್ತೇನೆ"– *ಡೇಕಾರ್ಟ್*

ಯಾವುದೇ ವ್ಯಕ್ತಿ ಒಂದು ವಿಷಯವನ್ನು ಅಭ್ಯಸಿಸಲು ಪ್ರಾರಂಭಿಸಿದಾಗ ಆತನಗೆ ಪ್ರಾರಂಭದಲ್ಲಿಯೇ ಎದುರಾಗುವ ಪ್ರಶ್ನೆಗಳು "ಈ ವಿಷಯದ ನರೂಪಣೆ ಏನು?', 'ಅದರ ಸ್ವರೂಪ ಏನು?', 'ಅದರ ವ್ಯಾಪ್ತಿ ಎಷ್ಟು?', ಅದರ ಉಪಯುಕ್ತತೆ ಎಷ್ಟು?' ಎನ್ನುವ ಹತ್ತಾರು ಪ್ರಶ್ನೆಗಳು ಆತನ/ಅವಳ ತಲೆಯಲ್ಲಿ ಸುಳಿಯುವುದು ಸ್ವಾಭಾವಿಕ. ವಿಚಿತ್ರವೆಂದರೆ ಯಾವುದೇ ವಿಷಯದ ಬಗ್ಗೆ ಏನನ್ನೂ ತಿಳಿದುಕೊಳ್ಳದೇ ಅವುಗಳ ನಿರೂಪಣೆ, ವ್ಯಾಪ್ತಿ, ಪ್ರಯೋಜನಗಳ ಬಗ್ಗೆ ಆರಂಭದಲ್ಲಿಯೇ ತಿಳಿಯವುದು ಸೂಕ್ತವಾಗಲಾರದಾದರೂ, ನಮ್ಮ ಪಠ್ಯ ಕ್ರಮಗಳ ಪ್ರಕಾರ ತಿಳಿದುಕೊಳ್ಳಲೇಬೇಕಾದ ಅನಿವಾರ್ಯತೆ ಇದೆ.

ಮಹಾಸ್ಫೋಟದ ಪರಿಣಾಮವಾಗಿ ಜನ್ಮತಳೆದ ಭೂಮಿಯಲ್ಲಿ ಕಾಲಕ್ರಮೇಣ ಲಕ್ಷಾಂತರ ಜೀವಿಗಳು ರೂಪಾಂತರಗೊಂಡವುಗಳಲ್ಲಿ ಮಾನವ ಜೀವಿಯೂ ಒಂದು, ಬುದ್ಧನು ಹೇಳಿದಂತೆ ಬದಲಾವಣೆ ಜಗತ್ತಿನ ನಿಯಮ. ಈ ಬದಲಾವಣೆ ಅಥವಾ ಮಾರ್ಪಾಟು ಕ್ರಿಯೆಯಿಂದ ಏಕ ಜೀವಿಯಿಂದ ಮಾನವ ರೂಪ ತಾಳಲು ಎಷ್ಟು ವರ್ಷ ತೆಗೆದುಕೊಂಡ? ಲಕ್ಷವರ್ಷವೋ ಕೋಟಿ ವರ್ಷವೋ? ಹೀಗೆ ರೂಪಾಂತರಗೊಂಡ ಎಲ್ಲಾ ವಿಧದ ಜೀವಿಗಳಲ್ಲಿಯೂ ಮಾನವ ಜೀವ ಮಾತ್ರ ಅತ್ಯಂತ ಶ್ರೇಷ್ಠ/ವಿಶಿಷ್ಟವಾದುದಾಗಿದೆ. ಈ ಶ್ರೇಷ್ಠತೆಗೆ ಕಾರಣ ಅವನಲ್ಲಿರುವ ಪ್ರಮುಖ ಲಕ್ಷಣವಾದ ಆಲೋಚಿಸುವ ಶಕ್ತಿಯಾಗಿದೆ.

ಮಾನವ ಪದದ ಉತ್ಪತ್ತಿ **'ಮನ್'** ಎಂಬ ಧಾತುವಿನಂದಾಗಿದ್ದು, **'ಮನ್'** ಎಂದರೆ **'ಆಲೋಚಿಸು', 'ಚಿಂತಿಸು', 'ವಿಚಾರಮಾಡು'** ಎಂದಾಗಿದೆ. ಆದ್ದರಿಂದಲೇ ಮಾನವನನ್ನು **'ವೈಚಾರಿಕ ಪ್ರಾಣಿ'** ಎಂದು ಬಣ್ಣಿಸುವುದುಂಟು. ಮಾನವನಿಗೆ ವಿಚಾರಿಸುವ, ಆಲೋಚಿಸುವ ಗುಣ ನಿಸರ್ಗದತ್ತವಾಗಿ ಬಂದಿದೆ. ಈ ಆಲೋಚನೆಯೇ ಮಾನವನಲ್ಲಿ ಕುತೂಹಲಕ್ಕೆ ಕಾರಣವಾಗಿದೆ. ಈ ಕುತೂಹಲದಿಂದಾಗಿ ಹಲವಾರು ಶಾಸ್ತ್ರಗಳ, ದರ್ಶನಗಳ, ಜ್ಞಾನ ಹಾಗೂ ವಿಜ್ಞಾನಗಳ ಆವಿರ್ಭಾವಕ್ಕೆ ನಾಂದಿಯಾಗಿರುವುದನ್ನು ಇತಿಹಾಸದಿಂದ ತಿಳಿದಿದ್ದೇವೆ. ಪ್ರಾಣಿಗಳಲ್ಲಿ ವಿಚಾರಶೀಲತೆ ಇಲ್ಲದ ಕಾರಣ ಅವುಗಳ ಜೀವನ ಕ್ರಮದಲ್ಲಿ ಯಾವುದೇ ಬದಲಾವಣೆ ಕಾಣದಾಗಿದೆ. **"ಆಹಾರ, ನಿದ್ರೆ, ಭಯ. . . ."** ಮೊದಲಾದ ನೈಸರ್ಗಿಕ ಅವಶ್ಯಕತೆಗಳನ್ನು ಪೂರೈಸುವಲ್ಲಿಯೇ ಪ್ರಾಣಿಗಳ ಜೀವನ ಮುಗಿದುಹೋಗುತ್ತದೆ. ಆದರೆ ಮಾನವ ಹಾಗಲ್ಲ. ನಿಸರ್ಗದಲ್ಲಿನ ಕುತೂಹಲ ಹುಟ್ಟಿಸುವ ಘಟನೆಗಳನ್ನು ನೋಡಿ ಅವುಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾ ಬಂದಿದ್ದಾನೆ. ಆತನಿಗೆ ಕೇವಲ ಭೌತಿಕ ಅವಶ್ಯಕತೆಗಳ ಪೂರೈಕೆ ಸಂತೃಪ್ತಿಯನ್ನು ತರದು. ಹಲವಾರು ಘಟನೆಗಳನ್ನು, ವಿಷಯಗಳನ್ನು ತಿಳಿದುಕೊಳ್ಳುವ ಅಭೀಪ್ಸೆ ಹೊಂದಿದ್ದಾನೆ. ಅದೇ ಮನುಷ್ಯನ ವೈಶಿಷ್ಟವಾಗಿದೆ. ಆದುದರಿಂದಲೇ ನೈಸರ್ಗಿಕ ಶಕ್ತಿಗಳ ಅಧ್ಯಯನ ಮೂಲಕ ನೈಸರ್ಗಿಕವಾಗಿ ಎದುರಾಗುವ ಶಕ್ತಿಗಳ ಹಾಗೂ

ಅವುಗಳಿಂದುಂಟಾಗುವ ಸಮಸ್ಯೆಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಾನೆ. ಆ ಸಮಸ್ಯೆಗಳ ಪರಿಹಾರಕ್ಕೆ ಮಾರ್ಗೋಪಾಯಗಳ ಬಗ್ಗೆ ಆಲೋಚಿಸುತ್ತಾನೆ. ಹೀಗೆ ಹಲವಾರು ನೈಸರ್ಗಿಕ ಸಮಸ್ಯೆಗಳನ್ನು ಪರಿಹರಿಸುವುದರ ಜೊತೆಗೆ ಅವುಗಳನ್ನು ನಿಯಂತ್ರಿಸಲು ಪ್ರಯತ್ನಿಸುತ್ತಾ ಬಂದಿದ್ದಾನೆ. ಮಾನವನ ವೈಚಾರಿಕತೆ ಬೆಳೆದಂತೆ ನೈಸರ್ಗಿಕ ಸಮಸ್ಯೆಗಳಲ್ಲದೇ ತನ್ನ ಜೀವನದಲ್ಲಿನ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಶ್ರಮಪಟ್ಟಿದ್ದಾನೆ. ದೈನಂದಿನ ಜೀವನದಲ್ಲಿ ಎದುರಾಗುವ ಹಲವು ವಿಧವಾದ ಸಾಂಸಾರಿಕ, ಸಾಮಾಜಿಕ, ರಾಜಕೀಯ, ಆರ್ಥಿಕ ಮತ್ತು ಧಾರ್ಮಿಕ ಸಮಸ್ಯೆಗಳ ಬಗ್ಗೆ ಆಲೋಚಿಸುತ್ತ ಅವುಗಳನ್ನು ಬಗೆಹರಿಸಿಕೊಂಡಿದ್ದಾನೆ. ಇದರಿಂದ ಹಲವು ಸಂಸ್ಕೃತಿ ಹಾಗೂ ನಾಗರೀಕತೆಗಳನ್ನು ಕಟ್ಟಿ ಬೆಳಸಿದ್ದಲ್ಲದೆ ಅವುಗಳ ನಾಶಕ್ಕೆ ಕಾರಣವಾಗಿದ್ದಾನೆ. ಈ ಎಲ್ಲಾ ಪ್ರಕ್ರಿಯೆಗಳಿಗೆ ಆಲೋಚನೆ ಮೂಲಭೂತವಾದುದು. ತನ್ನ ಜೀವನದ ಮಟ್ಟ ಸುಧಾರಿಸಿಕೊಳ್ಳಲು ತಾನೇ ಹತ್ತಾರು ಆದರ್ಶಗಳನ್ನು ರೂಪಿಸಿಕೊಂಡು ಅದರಂತೆ ಜೀವಿಸಲು ಪ್ರಯತ್ನಿಸುತ್ತಾ ತನ್ನ ಬಾಳಿಗೊಂದು ಅರ್ಥವನ್ನು ಕಲ್ಪಿಸಿಕೊಂಡಿದ್ದಾನೆ. ವಿಚಾರ ಎಲ್ಲಾ ವಿಧವಾದ ಜ್ಞಾನದ ಮೂಲವಾಗಿದೆ. ಆಲೋಚಿಸುವ ಶಕ್ತಿ ಮಾನವನಿಗೆ ನಿಸರ್ಗದತ್ತವಾಗಿ ಬಂದಿದ್ದರೂ ಸಹ ಎಲ್ಲಾ ಸಂದರ್ಭಗಳಲ್ಲಿಯೂ ಸಮರ್ಥವಾಗಿ ಆಲೋಚಿಸುತ್ತಾನೆ ಎಂದು ಹೇಳಲಾಗದು. ಒಂದೇ ವಿಷಯದ ಬಗ್ಗೆ / ಘಟನೆಯ ಬಗ್ಗೆ ಒಬ್ಬೊಬ್ಬರು ಒಂದೊಂದು ವಿಧದಲ್ಲಿ ವಿವರಿಸುತ್ತಾರೆ. ಕೆಲವೊಮ್ಮೆ ತದ್ವಿರುದ್ಧವಾದ ವಿವರಣೆಗಳೂ ಕಾಣಿಸಿಕೊಳ್ಳುತ್ತವೆ. ಅಂದರೆ ಆಲೋಚಿಸುವ ವಿಧಾನದಲ್ಲಿಯೂ ಕೂಡ ಹಲವಾರು ಅಡತಡೆಗಳಿರುತ್ತವೆ. ಅವುಗಳಲ್ಲಿ ಪ್ರಮುಖವಾಗಿ ನಮ್ಮ ರಾಗ–ದ್ವೇಷ ಭಾವನೆಗಳು, ಘಟನೆಯ ಬಗೆಗಿನ ಅಪರಿಪೂರ್ಣ ತಿಳುವಳಿಕೆ, ಅವುಗಳನ್ನು ಅರ್ಥೈಸಿಕೊಳ್ಳುವಲ್ಲಿನ ವ್ಯತ್ಯಾಸ ಕಾರಣವಾಗುತ್ತವೆ. ಇವುಗಳಿಂದ ನಮ್ಮ ವಿಚಾರಗಳಲ್ಲಿ ದೋಷಗಳುಂಟಾಗುತ್ತವೆ. ಆಲೋಚನೆಯಲ್ಲಿ, ಸ್ಪಷ್ಟತೆ, ನಿಖರತೆ, ಸಾಧ್ಯವಾಗದಿರಬಹುದು. ಈ ಅಡಚಣೆಗಳಿಂದ ಹೊರಬರಲು ಸಮಂಜಸ ಆಲೋಚನೆಯ ಸ್ವರೂಪವೇನು? ಅದಕ್ಕೆ ಸಂಬಂಧಿಸಿದ ನಿಯಮಗಳಾವುವು ಎನ್ನುವುದನ್ನು ವ್ಯವಸ್ಥಿತವಾಗಿ ಅಭ್ಯಸಿಸುವ ಶಾಸ್ತ್ರಕ್ಕೆ 'ತರ್ಕಶಾಸ್ತ್ರ' ಎನ್ನುತ್ತಾರೆ. ಮಾನವನ ವಿಚಾರದಲ್ಲಿ ಉಂಟಾಗುವ ದೋಷಗಳನ್ನು ನಿವಾರಿಸುವಲ್ಲಿ ಈ ನಿಯಮಗಳ ಪಾತ್ರ ಮುಖ್ಯವಾಗಿದೆ.

**ತರ್ಕಶಾಸ್ತ್ರದ ಉಗಮ ಹಾಗೂ ಇತಿಹಾಸ**

ಪ್ರಾಚೀನ ಜಗತ್ತಿನಲ್ಲಿ ತರ್ಕಶಾಸ್ತ್ರದ ಉಗಮವು ಭಾರತದಲ್ಲಿ ಹಾಗೂ ಗ್ರೀಕ್ ರಾಷ್ಟ್ರದಲ್ಲಿ ಆಗಿದೆಯೆಂದು ದಾರ್ಶನಿಕರು ಹೇಳುತ್ತಾರೆ. ಪ್ರಾಚೀನ ಗ್ರೀಕ್ ದೇಶದಲ್ಲಿ 'ಸೋಫಿಷ್ಟರು' ವಾಗ್ಮಿಗಳನ್ನು ತಯಾರಿಸುವ ತರಬೇತಿ ಕೊಡುತ್ತಿದ್ದರು. ಅವರ ಮೂಲ ಉದ್ದೇಶವು ವ್ಯಕ್ತಿಯು ವಾದದಲ್ಲಿ ಜಯಪಡೆಯುವುದಾಗಿತ್ತು. ವಾದದಲ್ಲಿ ಜಯಗಳಿಸುವುದು ಅವರ ಗುರಿ (aim) ಹಾಗೂ ವಿಧಾನ (Method) ಆಗಿತ್ತು. ಇದು ಸತ್ಯಾನ್ವೇಷಣೆಗೆ ಸಹಕಾರಿಯಾಗಿರಲಿಲ್ಲ. ಆ ಕಾಲದ 'ಸಾಕ್ರೆಟೀಸ್' ಎನ್ನುವ ತತ್ವಜ್ಞಾನಿ ಸೋಫಿಷ್ಟರ ಈ ತರ್ಕವನ್ನು ಖಂಡಿಸಿದ ಪ್ರಥಮ ವ್ಯಕ್ತಿಯಾಗಿದ್ದ. ವಾದದ ಉದ್ದೇಶ ಕೇವಲ ಜಯಗಳಿಸುವುದಲ್ಲ, ಅದು ಸತ್ಯಾನ್ವೇಷಣೆಯಾಗಿರಬೇಕೆಂದು ಪ್ರತಿಪಾದಿಸಿದ. ಇಲ್ಲವಾದರೆ ವಾದ ವಿವಾದವಾಗುತ್ತದೆ. ಕಾರಣ ವಾದದ ಗುರಿ ಹಾಗೂ ವಿಧಾನಗಳೆರಡೂ ಒಂದಕ್ಕೊಂದು ಪೂರಕವಾಗಿರಬೇಕೆಂದನು. ಸಾಕ್ರೇಟಿಸ್ ಏನನ್ನೂ ಬರೆಯಲಿಲ್ಲ. ಆತನ ಶಿಷ್ಯ ಪ್ಲೇಟೋ ಸಾಕ್ರೆಟಿಸ್‌ನ ವಿಚಾರಧಾರೆಯಿಂದ ಪ್ರಭಾವಿತಗೊಂಡು 'ಸಂವಾದ' (Dialogue) ಎನ್ನುವ ಪುಸ್ತಕ ರೂಪದಲ್ಲಿ ತಂದಾಗ ಪ್ಲೆಟೋನ ಶಿಷ್ಯ ಅರಿಸ್ಟಾಟಲ್ ಈ ವಿಚಾರಕ್ಕೆ ಒಂದು ವ್ಯವಸ್ಥಿತ ರೂಪ ಕೊಟ್ಟನು. ಆದ್ದರಿಂದಲೇ ಅರಿಸ್ಟಾಟಲ್‌ನನ್ನು "ಪಾಶ್ಚಿಮಾತ್ಯ ತರ್ಕದ ಜನಕ" ಎಂದು ಹೇಳುತ್ತಾರೆ. ಅರಿಸ್ಟಾಟಲ್‌ನಿಂದ ಪ್ರಾರಂಭವಾದ ಈ ತರ್ಕಶಾಸ್ತ್ರದ ಭಾಗಕ್ಕೆ 'ನಿಗಮನ' (Deductive) ತರ್ಕಶಾಸ್ತ್ರವೆನ್ನುತ್ತಾರೆ.

ತರ್ಕಶಾಸ್ತ್ರವನ್ನು ಆಂಗ್ಲಭಾಷೆಯಲ್ಲಿ ಲಾಜಿಕ್ (Logic) ಎಂದು ಕರೆಯುತ್ತಾರೆ.ಈ ಲಾಜಿಕ್ (Logic) ಎಂಬ ಪದವು ಗ್ರೀಕ್ ಭಾಷೆಯ ಲೋಗೊಸ್ (Logos) ಎಂಬ ಪದದಿಂದ ಉತ್ಪತ್ತಿಗೊಂಡಿದೆ. Thought or Reason Discourse ಎಂದರೆ ಅಲೋಚನೆ ಅಥವಾ ಸಂವಾದ. ಹಲವು ಶತಮಾನಗಳವರೆಗೆ ಇದೇ ಸಾಂಪ್ರದಾಯಕ (Traditional) ತರ್ಕಶಾಸ್ತ್ರವಾಗಿ ಅಭ್ಯಸಿಸಲ್ಪಡುತ್ತಿತ್ತು. ಈ ತಾರ್ಕಿಕ ಪದ್ಧತಿಯಲ್ಲಿ ವಿಚಾರದ ವಸ್ತುವಿಗಿಂತ (Matter) ರೂಪಕ್ಕೆ (Form) ಹೆಚ್ಚು ಪ್ರಾಧಾನ್ಯತೆಯನ್ನು ಕೊಡಲಾಗುತ್ತಿತ್ತು. ಯಾವುದೇ ಒಂದು ತೀರ್ಮಾನ ತೆಗೆದುಕೊಳ್ಳುವಲ್ಲಿ ಆಧಾರ ವಾಕ್ಯಗಳಿರುವುದು ಅವಶ್ಯಕವಾಗಿತ್ತು. ಉದಾ.: 'ರಾಮನು ಮರ್ತ್ಯನು' ಎಂದು ತೀರ್ಮಾನಿಸಬೇಕೆಂದರೆ 'ಎಲ್ಲಾ ಮಾನವರು ಮರ್ತ್ಯರು', 'ರಾಮ ಒಬ್ಬ ಮಾನವ', 'ಆದ್ದರಿಂದ ರಾಮ ಮರ್ತ್ಯನು' ಎಂದು ಹೇಳಬೇಕಾಗಿತ್ತು. ಆ ವಾದ ಸರಣಿಯನ್ನು ಪಾಶ್ಚಾತ್ಯದೇಶಗಳಲ್ಲಿ ಬೈಬಲ್ ಗ್ರಂಥದ ಸಮರ್ಥನೆಗೆ ಪ್ರಮುಖವಾಗಿ ಉಪಯೋಗಿಸುತ್ತಿದ್ದರು. 'ನವೋದಯ' (Renaisance) ಕಾಲದ ಪ್ರಾರಂಭದವರೆಗೂ ತನ್ನ ಹೆಗ್ಗಳಿಕೆ ಉಳಿಸಿಕೊಂಡಿದ್ದ ಈ ತರ್ಕ ಪದ್ಧತಿಯನ್ನು ಶಬ್ಧ ಪ್ರಮಾಣ/ ರೂಪಾತ್ಮಕತೆಯ ಪ್ರಭಾವವನ್ನು ಪ್ರಶ್ನಿಸಲಾಯಿತು. ಪ್ರತ್ಯಕ್ಷ ಪ್ರಮಾಣಕ್ಕೆ ಮಹತ್ವ ಕೊಡುವ ಹೊಸದಾದ ತರ್ಕಪದ್ಧತಿಯ ಉಗಮವಾಯಿತು. ಫ್ರಾನ್ಸಿಸ್ ಬೇಕನ್ 'ಶಬ್ಧಪ್ರಮಾಣವು ಅತೀಂದ್ರಿಯ ವಿಷಯಗಳನ್ನು ತಿಳಿದುಕೊಳ್ಳುವ ಸಾಧನವಾದರೆ, ಪ್ರತ್ಯಕ್ಷ ಪ್ರಮಾಣ ಜಗತ್ತಿನ ನಿಶ್ಚಿತ ಜ್ಞಾನ' ದೊರಕಿಸುವ ಸಾಧನವೆಂದು ಪ್ರತಿಪಾದಿಸಿದ. ಆಧುನಕ ವೈಜ್ಞಾನಿಕ ವಿಧಾನದ (Modern Scientific Method) ಜನಕನಾದ. ಬೇಕನ್ ಬರೆದ 'ನೋವಮ್ ಆರ್ಗ್ಯಾನಮ್' ಎಂಬ ಗ್ರಂಥವು ಅನುಗಮನ/ವಿಗಮನ ತರ್ಕಶಾಸ್ತ್ರದ ಬುನಾದಿಯಾಯಿತು. ಮುಂದೆ ಅನುಭವವಾದದ ಪ್ರವರ್ತಕರಾದ ಜಾನ್ ಲಾಕ್, ಡೆವಿಡ್ ಹ್ಯೂಮ್, ಕಾರ್ವೆಥ್ ರೀಡ್ ಮುಂತಾದ ದಾರ್ಶನಿಕರು ವಿಗಮನ (Inductive Logic) ತರ್ಕದ ಬೆಳವಣಿಗೆಗೆ ಶ್ರಮಿಸಿದರು. 19ನೇ ಶತಮಾನದಲ್ಲಿ ಇಂಗ್ಲೆಂಡಿನ ದಾರ್ಶನಿಕ ಜೆ.ಎಸ್.ಮಿಲ್ ಈ ವಿಧಾನಕ್ಕೆ ಒಂದು ವ್ಯವಸ್ಥಿತ, ಸ್ಪಷ್ಟ ರೂಪ ನೀಡುವಲ್ಲಿ ಸಫಲನಾದ. ಮಾನವ ತನ್ನ ಅನುಭವಕ್ಕೆ ಬರುವ ಘಟನೆಗಳನ್ನು ವಿಷಯಗಳನ್ನು ವಿಶ್ಲೇಷಿಸಿ ಅದರ ಆಧಾರದಿಂದ ವಾಸ್ತವಿಕ ಸತ್ಯತೆಯನ್ನು ಹೊಂದಿದ ಸಾಮಾನ್ಯ ನಿಯಮಗಳನ್ನು ತನ್ನ 'ಪ್ರಾಯೋಗಿಕ ಪದ್ಧತಿ' (Experimental Methods or Inductive Method) ಗಳನ್ನು ಪ್ರಸ್ತಾಪಿಸಿದ್ದರಿಂದ ವಿಗಮನ ತರ್ಕ ವಿಧಾನಕ್ಕೆ ವೈಜ್ಞಾನಿಕ ಕ್ಷೇತ್ರ/ರಂಗ ದಲ್ಲಿ ಪ್ರಾಮುಖ್ಯತೆ ದೊರೆಯಿತು. ಮಿಲ್‌ನ ನಂತರ ಬಂದ ವೇವಲ್ಸ್, ಜೇವೋನ್ಸ್ ಮೊದಲಾದ ಪಂಡಿತರು ವಿಗಮನ ತರ್ಕದ ವಿಕಾಸಕ್ಕೆ ಸಾಕಷ್ಟು ಶ್ರಮಿಸಿದ್ದಾರೆ.

ನಂತರ ಇಪ್ಪತ್ತನೆಯ ಶತಮಾನದಲ್ಲಿ ತರ್ಕಶಾಸ್ತ್ರದ ಬೆಳವಣಿಗೆ/ವಿಕಾಸದಲ್ಲಿ ಮತ್ತೊಂದು ಮಜಲು ಪ್ರಾರಂಭವಾಯಿತು. ಗಣಿತಶಾಸ್ತ್ರದ ಲಕ್ಷಣಗಳನ್ನು ಹೊಂದಿದ ಈ ತರ್ಕಕ್ಕೆ ಸಾಂಕೇತಿಕ ತರ್ಕಶಾಸ್ತ್ರ (Symbolic Logic) ಅಥವಾ ಗಣಿತ ತರ್ಕಶಾಸ್ತ್ರ (Mathematical Logic) ಎಂದು ಕರೆಯಲ್ಪಡುತ್ತದೆ. ನಿಗಮನ ವಿಧಾನದಲ್ಲಿ ಸುಧಾರಣೆ ಮಾಡಿ ಅದರ ಮೂಲಭೂತ ತತ್ವಗಳ ಪ್ರಾಮುಖ್ಯತೆಯನ್ನು ಈ ವಿಧಾನವು ಪ್ರಸ್ತುತಪಡಿಸಿತು. ಈ ವಿಧಾನವನ್ನು ಪ್ರತಿಪಾದಿಸಿ, ಬೆಳೆಸುವಲ್ಲಿ ಪ್ರಮುಖರಾದವರೆಂದರೆ ಡಿ.ಮಾರ್ಗನ್, ವ್ಹೇನ, ಭೂಲ, ಶ್ರೋಡರ್, ಫ್ರೀಜ್, ರಸೆಲ್, ವೈಟ್‌ಹೆಡ್, ಪೀಯರ್ಸ್, ಕಾರ್ನಪ್ ಮುಂತಾದ ದಾರ್ಶನಿಕರು.

ಪಾಶ್ಚಿಮಾತ್ಯ ತರ್ಕದಷ್ಟೇ ಪ್ರಾಚೀನವಾದುದು ಭಾರತೀಯ ತರ್ಕ. ಭಾರತೀಯ ತಾರ್ಕಿಕ ಪದ್ಧತಿಯಲ್ಲಿ ಲಾಜಿಕ್ (Logic) ಎನ್ನುವುದು ಅನ್ವೀಕ್ಷಕಿ, ನ್ಯಾಯ, ವಿಸ್ತಾರ, ತರ್ಕಶಾಸ್ತ್ರ ಪದಾರ್ಥ ವಿಜ್ಞಾನ, ನ್ಯಾಯದರ್ಶನ, ಪ್ರಮಾಣಶಾಸ್ತ್ರ, ಹೇತುವಿದ್ಯೆ ಎಂಬ ಮುಂತಾದ ಹೆಸರುಗಳಿಂದ ಕರೆಯುತ್ತಿದ್ದುದನ್ನು ಕಾಣುತ್ತೇವೆ. ಭಾರತೀಯ

ತರ್ಕಶಾಸ್ತ್ರದ ಜನಕನೆಂದು "ಆಚಾರ್ಯ ಗೌತಮರನ್ನು" ಗುರುತಿಸುತ್ತಾರೆ. ಅವರಿಗಿಂತಲೂ ಪೂರ್ವದಲ್ಲಿ 'ವಿಚಾರ' (Reflection) ವಿವೇಚನೆ (Reasoning, Discrimination)ಗಳ ಪ್ರಾಮುಖ್ಯತೆಯನ್ನು ಭಾರತೀಯ ಆಚಾರ್ಯರು, ಋಷಿಗಳು, ಪ್ರತಿಪಾದಿಸುತ್ತಾ ಬಂದಿದ್ದರೂ ಅದಕ್ಕೊಂದು ವ್ಯವಸ್ಥಿತ ರೂಪ ಕೊಟ್ಟವರು ಆಚಾರ್ಯ ಗೌತಮರು. ಇವರ 'ನ್ಯಾಯ ಸೂತ್ರ' ಭಾರತೀಯ ತರ್ಕಶಾಸ್ತ್ರದ ಪ್ರಮಾಣ ಶಾಸ್ತ್ರಗಳು ಸತ್ಯ ಶೋಧನೆಯ ಮಾರ್ಗಗಳು. ನ್ಯಾಯಕ್ಕಾಗಿ ನ್ಯಾಯವಲ್ಲ, ತರ್ಕಕ್ಕಾಗಿ ತರ್ಕವಲ್ಲ, ಅವೆಲ್ಲ ಸತ್ಯಾನ್ವೇಷಣೆಯಲ್ಲಿ ಸಾಧನಗಳು ಎನ್ನುವುದು ಅವರ ಅಭಿಪ್ರಾಯವಾಗಿತ್ತು. ಜನಕ ರಾಜನ ಆಸ್ಥಾನದಲ್ಲಿ ಮೈತ್ರೈಯಿ, ಗಾರ್ಗಿ ಮುಂತಾದ ಹಲವಾರು ವಿದ್ವಾಂಸರು ಸತ್ಯಾನ್ವೇಷನೆಯನ್ನು ಆಧರಿಸಿ ಸಂವಾದಗಳನ್ನು ನಡೆಸುತ್ತಿದ್ದ ಬಗ್ಗೆ ಉಲ್ಲೇಖವಿದೆ. ಇದರ ರೂಪುರೇಷೆಗಳನ್ನು ನ್ಯಾಯ ಹಾಗೂ ವೈಶೇಷಿಕರಲ್ಲಿ ಕಾಣುತ್ತೇವೆ. ಅವೈಧಿಕ ಧರ್ಮಗಳಾದ ಜೈನ, ಬುದ್ಧ ಹಾಗೂ ಚಾರ್ವಾಕರು ಬೆಳವಣಿಗೆಯನ್ನು ತಡೆಯಲು ಈ ಮಾರ್ಗವನ್ನು ಉಪಯೋಗಿಸುತ್ತಿದ್ದುದಾಗಿ ಕಂಡು ಬರುತ್ತದೆ. 'ಸತ್ಯ' (Truth) ಕೇವಲ ಪಾರಮಾರ್ಥಿಕ ತತ್ವಕ್ಕೆ ಸಂಬಂಧಿಸಿದ್ದೆಂದು ತಿಳಿಯದೇ ವ್ಯವಹಾರಿಕವಾಗಿಯೂ ಅದು ಸುಸಂಗತೆಯನ್ನು ಹೊಂದಿರಬೇಕೆಂದು ಪ್ರತಿಪಾದಿಸುತ್ತಿದ್ದರು. ಅಂದರೆ ತರ್ಕವು ಕೇವಲ ವಿಚಾರದ ರೂಪ/ಆಕಾರಕ್ಕೆ (Form) ಸಂಬಂಧಪಡದೇ ವಸ್ತುವಿಗೂ (Matter) ಸಂಬಂಧಪಟ್ಟಿದೆ. ಅನುಮಾನ ಎಂದರೆ ಕೇವಲ ನಿಗಮನವಷ್ಟೆ ಅಲ್ಲ, ಅದು ವಿಗಮನ/ಅನುಗಮನವೂ ಆಗಿದೆ. ಭಾರತೀಯ ಈ ವಿಶಿಷ್ಟ ತರ್ಕಪದ್ಧತಿಯನ್ನು ಬೆಳೆಸುವಲ್ಲಿ ಪ್ರಮುಖರಾದವರು ವಾತ್ಸಾಯನ, ಉದ್ಯೋತಕ, ವಾಚಸ್ಪತಿ, ಉದಯನ, ಅಣ್ಣಂಬಟ್ಟ, ಗಂಗೇಶ, ಜಯಂತ, ಮೊದಲಾದ ಪ್ರತಿಪಾದಕರು ಕಾರಣರಾಗಿದ್ದಾರೆ. ವೈಶೇಷಿಕರಾದ ಪ್ರಶಸ್ತಪಾದ, ಶ್ರೀಧರ, ವ್ಯೊಮಶಿವ, ಭೌದ್ಧ ತಾರ್ಕಿಕನಾದ ನಾಗಾರ್ಜುನ, ದಿಜ್ಞಾಗ, ಧರ್ಮಕೀರ್ತಿ, ಜೈನ ತಾರ್ಕಿಕ ಸಪ್ತಭಂಗೀನಯ ಮತ್ತು ಸ್ಯಾದ್ವಾದ ಇವರುಗಳ ಕೊಡುಗೆ ಭಾರತೀಯ ತಾರ್ಕಿಕ ಪರಂಪರೆಗೆ ಅಪಾರವಾದುದು.

ಇಂಗ್ಲಿಷ್ ಶೈಕ್ಷಣಿಕ ಪದ್ಧತಿಯು ಭಾರತದಲ್ಲಿ ಪ್ರಾರಂಭವಾದಂದಿನಿಂದ ಭಾರತೀಯ ತರ್ಕಪದ್ಧತಿಯ ವ್ಯಾಸಂಗವು ಉಪೇಕ್ಷಿಸಲ್ಪಟ್ಟಿತು. ಆದ್ದರಿಂದ ಬೆಳವಣಿಗೆಯೂ ಕೂಡ ಕುಂಠಿತಗೊಂಡಿತು. ಹಿಂದೆ ಸಾಧಿಸಿದ ಈ ಜ್ಞಾನವು ಕೆಲವೇ ಸಂಸ್ಕೃತ ಪಂಡಿತರ ಖಾಸಗಿ ಆಸ್ತಿಯಾಗಿ ಉಳಿಯಿತು. ಹೀಗಾಗಿ ಪಾಶ್ಚಿಮಾತ್ಯ ತರ್ಕದಲ್ಲಿ ಆದ ಬೆಳವಣಿಗೆ ಭಾರತೀಯ ತರ್ಕದಲ್ಲಿ ಆಗದೇ ಹೋಯಿತು. ಭಾರತೀಯ ತರ್ಕದ ಬೆಳವಣಿಗೆ ಕುಂಠಿತವಾಗಲು ಇನ್ನೊಂದು ಕಾರಣವನ್ನು ವಿಶ್ಲೇಷಿಸಲಾಗುತ್ತಿದೆ. ಅದೆಂದರೆ ಪಾಶ್ಚಿಮಾತ್ಯರಲ್ಲಿ ತರ್ಕವು ಸ್ವತಂತ್ರ ವಿದ್ಯೆಯಾಗಿ ಬೆಳೆಯಿತು. ಆದರೆ ಭಾರತೀಯರಲ್ಲಿ ಎಲ್ಲಾ ಶಾಸ್ತ್ರಗಳು, ದರ್ಶನಗಳು, ಪ್ರಮಾಣಶಾಸ್ತ್ರಗಳು 'ಮೋಕ್ಷ'ದ ಗುರಿ ಸಾಧನೆಯ ಮಾರ್ಗಗಳಾಗಿದ್ದ ಕಾರಣ ತರ್ಕವು ಭಾರತಿಯರಲ್ಲಿ ದರ್ಶನಶಾಸ್ತ್ರಗಳ ಒಂದು ಭಾಗವಾಗಿಯೇ ಉಳಿಯಿತೇ ಹೊರತು ಪಾಶ್ಚಿಮಾತ್ಯರಲ್ಲಾದ ಸ್ವತಂತ್ರ ಬೆಳವಣಿಗೆ ಭಾರತದಲ್ಲಿ ಆಗಲಿಲ್ಲ.

## ಪಠ್ಯಕ್ರಮ – ಪ್ರಥಮ ಪಿ.ಯು.ಸಿ.

## ನಿಗಮನ ತರ್ಕಶಾಸ್ತ್ರ

| | | |
|---|---|---|
| ಅಧ್ಯಾಯ 1 | **ತರ್ಕಶಾಸ್ತ್ರದ ಸ್ವರೂಪ**<br>ಪೀಠಿಕೆ – ವಿಚಾರದ ಅವಶ್ಯಕತೆ – ಆಲೋಚನೆಯು ಸಮಸ್ಯೆ ನಿವಾರಕ ಪ್ರಕ್ರಿಯೆ – ತರ್ಕಶಾಸ್ತ್ರವು ವಿಜ್ಞಾನ ಮತ್ತು ಕಲೆ – ತರ್ಕಶಾಸ್ತ್ರವು ಆದರ್ಶ ನಿರ್ಧಾರಕ ವಿಜ್ಞಾನ–ತರ್ಕಶಾಸ್ತ್ರದ ವ್ಯಾಖ್ಯೆಗಳು – ತರ್ಕಶಾಸ್ತ್ರದ ವ್ಯಾಪ್ತಿ – ವಿಚಾರದ ರೂಪ ಮತ್ತು ವಿಚಾರದ ವಸ್ತು – ಸತ್ಯ ಮತ್ತು ಸಮಂಜಸತೆ – ತರ್ಕಶಾಸ್ತ್ರದ ಉಪಯುಕ್ತತೆ – ಅನುಮಾನ: ಅರ್ಥ – ವಿಧಗಳು – ನಿಗಮನ ಅನುಮಾನ ಮತ್ತು ಅನುಗಮನ ಅನುಮಾನ | 15 ಗಂಟೆ |
| ಅಧ್ಯಾಯ 2 | **ತರ್ಕಶಾಸ್ತ್ರ ಮತ್ತು ಭಾಷೆ**<br>ಭಾಷೆಯ ಉದ್ದೇಶ – ವರ್ಣನಾತ್ಮಕ – ಭಾವನಾತ್ಮಕ – ಕ್ರಿಯಾತ್ಮಕ – ಪ್ರಶ್ನಾರ್ಥಕ – ತರ್ಕಶಾಸ್ತ್ರ ಮತ್ತು ಭಾಷೆಯ ನಡುವಿನ ಸಂಬಂಧ | 6 ಗಂಟೆ |
| ಅಧ್ಯಾಯ 3 | **ನಿರ್ಣಯ, ವಾಕ್ಯ ಮತ್ತು ತಾರ್ಕಿಕ ವಾಕ್ಯ**<br>ನಿರ್ಣಯ, ವಾಕ್ಯ ಮತ್ತು ತರ್ಕ ವಾಕ್ಯಗಳ ಅರ್ಥ – ವಾಕ್ಯ ಮತ್ತು ತರ್ಕ ವಾಕ್ಯಗಳ ನಡುವಿನ ವ್ಯತ್ಯಾಸ – ಶಬ್ದ ಮತ್ತು ಪದಗಳಲ್ಲಿಯ ವ್ಯತ್ಯಾಸ – ಉದ್ದೇಶ ಪದ, ವಿಧೇಯ ಪದ – ಪದಗಳ ವರ್ಗೀಕರಣ | 15 ಗಂಟೆ |
| ಅಧ್ಯಾಯ 4 | **ತಾರ್ಕಿಕ ವಾಕ್ಯಗಳ ಸಾಂಪ್ರದಾಯಿಕ ವರ್ಗೀಕರಣ**<br>ತ್ರಿವಿಧ ವರ್ಗೀಕರಣ – ನಿರುಪಾಧಿಕ, ಕಾಲ್ಪನಿಕ – ವೈಕಲ್ಪಿಕ – ನಿರುಪಾಧಿಕ ತರ್ಕವಾಕ್ಯಗಳ ಚತುರ್ವಿಧ ವರ್ಗೀಕರಣ – ನಿರುಪಾಧಿಕ ತರ್ಕವಾಕ್ಯಗಳಲ್ಲಿ ಪದಗಳ ವ್ಯಾಪ್ತಿ – ಯೂಲರ್‌ನ ವೃತ್ತ. | 16 ಗಂಟೆ |
| ಅಧ್ಯಾಯ 5 | **ನಿಗಮನ ಅನುಮಾನದ ವಿಧಗಳು**<br>ಅ. ಅವ್ಯವಹಿತ ಅನುಮಾನ – ವಿರೋಧ ತಾರ್ಕಿಕ ವಾಕ್ಯಗಳು – ವಿರೋಧ ತಾರ್ಕಿಕ ವಾಕ್ಯಗಳ ಚಚ್ಚೌಕ – ನಿಷ್ಕರ್ಷಣ<br>1. ಪರಿವರ್ತನೆ – ಪರಿವರ್ತನೆಯ ನಿಯಮಗಳು<br>2. ಪ್ರತಿವರ್ತನೆ – ಪ್ರತಿವರ್ತನೆಯ ನಿಯಮಗಳು | 20 ಗಂಟೆ |
| | ಬ. ವ್ಯವಹಿತ ಅನುಮಾನ – ಅರ್ಥ– ವಿಧಗಳು<br>1. ನಿರುಪಾಧಿಕ ತ್ರಿವಾಕ್ಯಾನುಮಾನ – ರಚನೆ – ನಿರುಪಾಧಿಕ ತ್ರಿವಾಕ್ಯಾನುಮಾನದ ಸಾಮಾನ್ಯ ನಿಯಮಗಳು ಮತ್ತು ತರ್ಕದೋಷಗಳು | 20 ಗಂಟೆ |

| | | |
|---|---|---|
| | 2. ಮಿಶ್ರ ತ್ರಿವಾಕ್ಯಾನುಮಾನ – ಅರ್ಥ – ವಿಧಗಳು,।<br>ನಿಯಮ ಮತ್ತು ದೋಷಗಳು<br>ಅ. ಮಿಶ್ರ ಕಾಲ್ಪನಿಕ ತ್ರಿವಾಕ್ಯಾನುಮಾನ<br>ಬ. ಮಿಶ್ರ ವೈಕಲ್ಪಿಕ ತ್ರಿವಾಕ್ಯಾನುಮಾನ | |
| **ಅಧ್ಯಾಯ–6** | **ತಾರ್ಕಿಕ ನಿರೂಪಣೆ**<br>ಅರ್ಥ – ತಾರ್ಕಿಕ ನಿರೂಪಣೆಯ ನಿಯಮಗಳು – ತರ್ಕದೋಷಗಳು | **8 ಗಂಟೆ** |
| **ಅಧ್ಯಾಯ–7** | **ಆಧುನಿಕ ಮತ್ತು ಸಾಂಕೇತಿಕ ತರ್ಕಶಾಸ್ತ್ರ**<br>ಅ. ತಾರ್ಕಿಕ ವಾಕ್ಯಗಳ ಆಧುನಿಕ ವರ್ಗೀಕರಣ<br>ಸರಳ, ಸಂಯುಕ್ತ ಮತ್ತು ಸಾಮಾನ್ಯ – ತಾರ್ಕಿಕ ವಾಕ್ಯಗಳ ಸಂಕೇತಗಳು – ಸಂಯೋಜನೆ – ವೈಕಲ್ಪಿಕ – ಸೂಚಕತೆ – ನಿರಾಕರಣೆಯ ಸತ್ಯತಾ ಕೋಷ್ಟಕಗಳು.<br>ಬ. ಆಲೋಚನೆಯ ಮೂಲ ನಿಯಮಗಳು<br>1. ಅನನ್ಯತೆಯ ನಿಯಮ<br>2. ಪರಸ್ಪರ ವಿರೋಧ ನಿಯಮ<br>3. ವಿಮಧ್ಯ ನಿಯಮ | **10 ಗಂಟೆ** |
| **ಅಧ್ಯಾಯ–8** | **ಭಾರತೀಯ ತರ್ಕಶಾಸ್ತ್ರದ ಮೂಲಾಂಶಗಳು**<br>ಅನುಮಾನ – ಅರ್ಥ – ವಿಧಗಳು – ಭಾರತೀಯ ಅನುಮಾನಕ್ಕೂ (ನ್ಯಾಯ ಅನುಮಾನ) ಮತ್ತು ಅರಿಸ್ಟಾಟಲ್‌ನ ತ್ರಿವಾಕ್ಯಾನುಮಾನಕ್ಕೂ ಹೋಲಿಕೆ | **10 ಗಂಟೆ** |

## ಪರಿವಿಡಿ


| | | |
|---|---|---|
| ಅಧ್ಯಾಯ 1 | ತರ್ಕಶಾಸ್ತ್ರದ ಸ್ವರೂಪ | 1–8 |
| ಅಧ್ಯಾಯ 2 | ತರ್ಕಶಾಸ್ತ್ರ ಮತ್ತು ಭಾಷೆ | 9–12 |
| ಅಧ್ಯಾಯ 3 | ನಿರ್ಣಯ, ವಾಕ್ಯ ಮತ್ತು ತಾರ್ಕಿಕ ವಾಕ್ಯ | 13–18 |
| ಅಧ್ಯಾಯ 4 | ತಾರ್ಕಿಕ ವಾಕ್ಯಗಳ ಸಾಂಪ್ರದಾಯಿಕ ವರ್ಗೀಕರಣ | 19–28 |
| ಅಧ್ಯಾಯ 5 | ನಿಗಮನ ಅನುಮಾನದ ವಿಧಗಳು | 29–53 |
| ಅಧ್ಯಾಯ–6 | ತಾರ್ಕಿಕ ನಿರೂಪಣೆ | 54–57 |
| ಅಧ್ಯಾಯ–7 | ಆಧುನಿಕ ಮತ್ತು ಸಾಂಕೇತಿಕ ತರ್ಕಶಾಸ್ತ್ರ | 58–64 |
| ಅಧ್ಯಾಯ–8 | ಭಾರತೀಯ ತರ್ಕಶಾಸ್ತ್ರದ ಮೂಲಾಂಶಗಳು | 65–71 |
| | ಮಾದರಿ ಪ್ರಶ್ನೆಪತ್ರಿಕೆ | 72–74 |
| | ಮಾದರಿ ಪ್ರಶ್ನೆಪತ್ರಿಕೆ – ಉತ್ತರಗಳು | 75–80 |
| | ಪಾರಿಭಾಷಿಕ ಶಬ್ದ | 81–87 |
| | ನೀಲ ನಕ್ಷೆ | 88 |

# ಅಧ್ಯಾಯ – 1
# ತರ್ಕಶಾಸ್ತ್ರದ ಸ್ವರೂಪ

**ಪೀಠಿಕೆ:**

ತರ್ಕಶಾಸ್ತ್ರವು ವಿಜ್ಞಾನಗಳಿಗೆ ಮತ್ತು ಕಲೆಗಳಿಗೆ ಮೂಲವಾಗಿದೆ. ತರ್ಕಶಾಸ್ತ್ರವು ವಿವಿಧ ಅನುಮಾನಗಳನ್ನು ಅಭ್ಯಸಿಸುತ್ತದೆ. ಪ್ರಾಚೀನ ಕಾಲದಲ್ಲಿ ಯಾವುದೇ ಶಾಸ್ತ್ರ ಮತ್ತು ಕಲೆಗಳಿರಲಿಲ್ಲ. ಅಂತಹ ಸಮಯದಲ್ಲಿ ತರ್ಕಶಾಸ್ತ್ರವು ಬೆಳಕಿಗೆ ಬಂದಿತು. ತರ್ಕಶಾಸ್ತ್ರಕ್ಕೆ ಗ್ರೀಕ್ ಮತ್ತು ಭಾರತದಲ್ಲಿ ಭದ್ರ ಬುನಾದಿಯನ್ನು ಹಾಕಲಾಯಿತು.

ಅರ್ಥ:

ಪಾಶ್ಚಿಮಾತ್ಯ ತತ್ವಜ್ಞಾನಿಯಾದ ಅರಿಸ್ಟಾಟಲ್‌ನು ತರ್ಕಶಾಸ್ತ್ರದ ಜನಕನೆಂದು ಹೆಸರುವಾಸಿಯಾದನು. ಆತನಿಗಿಂತಲೂ ಪೂರ್ವದಲ್ಲಿ ವೈಚಾರಿಕತೆಗೆ, ವಿವೇಚನಾತ್ಮಕ ಚಿಂತನೆಗೆ ಹೆಚ್ಚಿನ ಗಮನ ನೀಡಿದವನು ಸಾಕ್ರೆಟಿಸ್. ಭಾರತದಲ್ಲಿ ಗೌತಮ ಋಷಿ (ಅಕ್ಷಪಾದ ಮುನಿಗಳು) ತರ್ಕಶಾಸ್ತ್ರವನ್ನು ಬೆಳಕಿಗೆ ತಂದರು.

**ತರ್ಕಶಾಸ್ತ್ರದ ಮೂಲ ಅರ್ಥ:**

ಆಂಗ್ಲ ಭಾಷೆಯ ಲಾಜಿಕ್ **(LOGIC)** ಎಂಬ ಪದವು ಗ್ರೀಕ್ ಭಾಷೆಯ ಲೋಗೋಸ್ **(LOGOS)** ಎಂಬ ಪದದಿಂದ ಉತ್ಪತ್ತಿಗೊಂಡಿದೆ. **'LOGOS'** ಎಂದರೆ Thought or Reasoned Discourse, ಎಂದರ್ಥ. ಒಟ್ಟಾರೆ ತರ್ಕಶಾಸ್ತ್ರ ಎಂದರೆ ಭಾಷೆಯ ಮೂಲಕ ವ್ಯಕ್ತವಾಗುವ ಅಲೋಚನೆಗಳನ್ನು ಅಧ್ಯಯನಿಸುವ ಶಾಸ್ತ್ರ ಎಂದರ್ಥ.

**ವಿಚಾರದ ಅವಶ್ಯಕತೆ– NEED OF RATIONAL THINKING:**

ಮಾನವ ಸಮಾಜ ಜೀವಿ ಹಾಗೂ ಸಂಘಜೀವಿ. ವಿಚಾರ ಶಕ್ತಿಯು ಮಾನವನಿಗೆ ದೈವದತ್ತವಾದ ಸಹಜ ಕೊಡುಗೆಯಾಗಿದೆ. ಮನುಷ್ಯ ತನ್ನ ವಿವೇಚನಾತ್ಮಕ ಶಕ್ತಿಯಿಂದ ಪ್ರಾಣಿಗಳಿಗಿಂತ ಸರ್ವಶ್ರೇಷ್ಠನಾಗಿದ್ದಾನೆ. ವಿವೇಚನಾತ್ಮಕ ಚಿಂತನೆ ಎಂದರೆ "ಗೊತ್ತಿರುವ ವಿಷಯದಿಂದ ಗೊತ್ತಿಲ್ಲದ ವಿಷಯದೆಡೆಗೆ ಸಾಗುವ ಪ್ರಕ್ರಿಯೆ". ವಿವೇಚನಾತ್ಮಕ ಚಿಂತನೆಯು ಜ್ಞಾನದ ಮೂಲವಾಗಿದೆ. ವಿವೇಚನಾತ್ಮಕ ಚಿಂತನೆಯು ಆತನ ವರ್ತನೆಗಳನ್ನು ಬದಲಾಯಿಸುತ್ತದೆ. ವಿವೇಚನಾತ್ಮಕ ಚಿಂತನೆಯಿಂದ ಮಾನವನ ಸಹಜ ಸಮಸ್ಯೆಗಳನ್ನು ಪರಿಹರಿಸಬಹುದು. ಅವನಿಗೆ ಸಮಾಜದಲ್ಲಿ ಅತ್ಯುನ್ನತ ಸ್ಥಾನ–ಮಾನಗಳು ಲಭಿಸುತ್ತದೆ. ವಾಸ್ತವವಾಗಿ ಹೇಳಬೇಕೆಂದರೆ ಎಲ್ಲ ಮಾನವರು ವಿಚಾರ ಮಾಡುತ್ತಾರೆ. ಆದರೆ ಎಲ್ಲರ ಚಿಂತನೆಯು ಒಂದೇ ರೀತಿಯಾಗಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಎಲ್ಲರೂ ಒಂದೇ ವಿಷಯವನ್ನು ಆಲೋಚಿಸುತ್ತಾರೆ. ಆದರೆ ಎಲ್ಲರ ವಿಚಾರವು ವಿಭಿನ್ನವಾಗಿರುತ್ತದೆ. ತರ್ಕಶಾಸ್ತ್ರವು ಹೇಗೆ ಚಿಂತನೆ ಮಾಡಬೇಕು ಎನ್ನುವುದನ್ನು ಕಲಿಸುವುದರಿಂದ ಅದನ್ನು 'ಸಮಂಜಸ ಆಲೋಚನಾ ಶಾಸ್ತ್ರ' ಎಂದು ಕರೆಯುತ್ತಾರೆ. ಅನುಮಾನಗಳನ್ನು ಸರಿಯಾದ ರೀತಿಯಲ್ಲಿ ಆಲೋಚನೆ ಮಾಡುವುದರಿಂದ ಅದನ್ನು 'ಸಮಂಜಸ ಅನುಮಾನ ಶಾಸ್ತ್ರ'ಎಂದು ಕರೆಯುತ್ತಾರೆ.

**"ಅಲೋಚನೆಯು ಸಮಸ್ಯೆಯನ್ನು ಪರಿಹರಿಸುವ ಪ್ರಕ್ರಿಯೆ"– (THOUGHT AS A PROBLEM SOLVING PROCESS):**

ತರ್ಕಶಾಸ್ತ್ರವು ವಿಚಾರ ಮಾಡುವ ಒಂದು ಶಾಸ್ತ್ರವಾಗಿದೆ. 'ವಿಚಾರ' ಎಂಬ ಪದವು ವಿವಿಧ ರೀತಿಯಲ್ಲಿ ಬಳಸುವ ಪ್ರಕ್ರಿಯೆ. ಕೆಲವು ಸಂದರ್ಭಗಳಲ್ಲಿ ವಿಚಾರ ಮತ್ತು ಜ್ಞಾನವನ್ನು ಒಂದೇ ಅರ್ಥದಲ್ಲಿ ಬಳಸಬಹುದು. ಆದ್ದರಿಂದ ವಿಚಾರವನ್ನು ತರ್ಕಶಾಸ್ತ್ರದಲ್ಲಿ ಜ್ಞಾನ ಎಂದು ಕರೆಯುತ್ತಾರೆ.

ಮಾನವನಿಗೆ ಮಾನಸಿಕ ಆಸಕ್ತಿ ಮತ್ತು ಸಾಮರ್ಥ್ಯಗಳು ಬಹಳ ಮುಖ್ಯವಾಗಿವೆ. ಮಾನಸಿಕ ಸಾಮರ್ಥ್ಯದಿಂದ ಮಾನವನು ತನ್ನ ದೈನಂದಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾನೆ. ಮಾನಸಿಕ ಸಾಮರ್ಥ್ಯದಿಂದ ಮಾನವನು ದೈನಂದಿನ ಜೀವನದಲ್ಲಿ ಉಪಯುಕ್ತ ವಸ್ತುಗಳನ್ನು ಸಂಶೋಧನೆ ಮಾಡುತ್ತಾನೆ. ವಿಚಾರವು ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಪ್ರಕ್ರಿಯೆ. ವಿಚಾರವು ಎರಡು ವಿಧಗಳಲ್ಲಿ ವ್ಯಕ್ತವಾಗುತ್ತದೆ.

1. ವಿಷಯಾತ್ಮಕ/ ವಸ್ತು ಸಾಪೇಕ್ಷ ತರ್ಕಶಾಸ್ತ್ರ– Material Logic

2. ರೂಪಾತ್ಮಕ ತರ್ಕಶಾಸ್ತ್ರ– Formal Logic

ಆಧಾರ ವಾಕ್ಯಗಳು ಸತ್ಯವಾಗಿದ್ದು, ತೀರ್ಮಾನವು ಸತ್ಯವಾಗಿದ್ದು ವಾಸ್ತವಾಂಶಗಳೊಂದಿಗೆ ಹೊಂದಿಕೆಯಾಗಿದ್ದರೆ ಅದನ್ನು ವಿಷಯಾತ್ಮಕ ತರ್ಕಶಾಸ್ತ್ರ((Material Logic) ಎಂದು ಹೆಸರು.

ಸತ್ಯ ಮತ್ತು ಸಮಂಜಸತೆಯನ್ನು ಆಧಾರವಾಗಿ ಹೇಳುವುದಂತಹದ್ದನ್ನು ರೂಪಾತ್ಮಕ ತರ್ಕಶಾಸ್ತ್ರ (Formal Logic) ಎಂದು ಹೆಸರು.

ಸಾಮಾನ್ಯವಾಗಿ ವಿಷಯಾತ್ಮಕ/ವಾಸ್ತವಿಕ ತರ್ಕಶಾಸ್ತ್ರವನ್ನು ಅನುಗಮನ ಎಂದೂ, ರೂಪಾತ್ಮಕ ತರ್ಕವನ್ನು ನಿಗಮನ ಎಂದು ಕರೆಯಬಹುದು.

**ತರ್ಕಶಾಸ್ತ್ರ ವಿಜ್ಞಾನ ಮತ್ತು ಕಲೆ – LOGIC AS A SCIENCE AND AN ART:**

ತರ್ಕಶಾಸ್ತ್ರವು ಶಾಸ್ತ್ರವೇ ಅಥವಾ ಕಲೆಯೇ ಎಂದು ವಿವರಿಸಬೇಕಾದರೆ ಮೊದಲು ಶಾಸ್ತ್ರದ ಮತ್ತು ಕಲೆಯ ಅರ್ಥವನ್ನು ತಿಳಿಯುವುದು ಅವಶ್ಯಕವಾಗಿದೆ. ಕೆಲವು ತರ್ಕಶಾಸ್ತ್ರಜ್ಞರು ತರ್ಕಶಾಸ್ತ್ರವನ್ನು ವಿಜ್ಞಾನವೆಂದು ಕೆಲವರು ಕಲೆಯೆಂದು, ಕೆಲವರು ಶಾಸ್ತ್ರ ಮತ್ತು ಕಲೆಯೂ ಹೌದು ಎಂದು ವಿವರಿಸುತ್ತಾರೆ ಶಾಸ್ತ್ರವು ಸುವ್ಯವಸ್ಥಿತವಾದ ರೀತಿಯಲ್ಲಿ ಜ್ಞಾನವನ್ನು ನೀಡುತ್ತದೆ. ಆದರೆ ಕಲೆಯು ಅರ್ಜಿಸಿಕೊಂಡ ಜ್ಞಾನವನ್ನು ವಾಸ್ತವಿಕವಾಗಿ ಅನುಷ್ಠಾನದಲ್ಲಿ ತರಲು ಹೇಗೆ ಸಾಧ್ಯವೆಂಬುದನ್ನು ಮತ್ತು ನೈಪುಣ್ಯತೆ ಅಥವ ಕೌಶಲ್ಯವನ್ನು ಸಾಧಿಸಲು ಸಹಾಯ ಮಾಡುತ್ತದೆ. ಶಾಸ್ತ್ರವು ನಿಯಮ ಮತ್ತು ತತ್ವಗಳನ್ನು ಸೂಚಿಸುತ್ತದೆ. ಆದರೆ ಕಲೆಯು ಆ ನಿಯಮ ಮತ್ತು ತತ್ವಗಳನ್ನು ಹೇಗೆ ಅನುಷ್ಠಾನಗೊಳಿಸುವುದು ಎಂಬುದನ್ನು ಸೂಚಿಸುತ್ತದೆ ಒಟ್ಟಾರೆಯಾಗಿ ತರ್ಕಶಾಸ್ತ್ರವು ವಿಜ್ಞಾನವೂ ಹೌದು, ಕಲೆಯೂ ಹೌದು.

**ತರ್ಕಶಾಸ್ತ್ರವು ಒಂದು ಆದರ್ಶ ನಿರ್ಧಾರಕ ಶಾಸ್ತ್ರ – LOGIC AS A NORMATIVE SCIENCE:**

ತರ್ಕಶಾಸ್ತ್ರವು ಒಂದು ಕ್ರಮಬದ್ಧ ಶಾಸ್ತ್ರ. ತರ್ಕಿಸುವ ರೀತಿ–ನೀತಿಗಳು ಮತ್ತು ವಿಚಾರದ ಇತರ ಉಪಕ್ರಿಯೆಗಳನ್ನು

ಅಭ್ಯಸಿಸುವುದೇ ಅದರ ಅಧ್ಯಯನ ವಿಷಯವಾಗಿದೆ. ತರ್ಕಿಸುವಾಗ ಬರುವ ಲೋಪದೋಷಗಳನ್ನು ಸರಿಪಡಿಸಲು ಈ ಶಾಸ್ತ್ರವು ಸಹಕಾರಿಯಾಗಿದೆ. ಶಾಸ್ತ್ರಗಳಲ್ಲಿ ಸ್ಥೂಲವಾಗಿ ಎರಡು ವಿಧಗಳಿವೆ.

1. ನಿರ್ಧಿಷ್ಟ ಅಥವಾ ವಾಸ್ತವಿಕ ಶಾಸ್ತ್ರ – Positive Science
2. ಆದರ್ಶ ನಿರ್ಧಾರಕ ಶಾಸ್ತ್ರ – Normative Science

**ನಿರ್ಧಿಷ್ಟ ಅಥವಾ ವಾಸ್ತವಿಕ ಶಾಸ್ತ್ರ – POSITIVE SCIENCE OR REAL SCIENCE**

ವಸ್ತು ಮತ್ತು ವಿಷಯಗಳನ್ನು ಅಥವಾ ಸಂಗತಿಗಳನ್ನು ವಾಸ್ತವವಾಗಿ ಅಥವಾ ಸ್ವಾಭಾವಿಕವಾಗಿ ಅಭ್ಯಾಸ ಮಾಡುವಂತಹ ಶಾಸ್ತ್ರಗಳಿಗೆ "ನಿರ್ಧಿಷ್ಟ ಅಥವಾ ವಾಸ್ತವಿಕ ಶಾಸ್ತ್ರಗಳು" ಎಂದು ಹೆಸರು.

ಉದಾ.: ಭೌತಶಾಸ್ತ್ರ, ಜೀವಶಾಸ್ತ್ರ, ಸಮಾಜ ಶಾಸ್ತ್ರ, ರಸಾಯನ ಶಾಸ್ತ್ರ, ಯಂತ್ರಶಾಸ್ತ್ರ, ಅರ್ಥಶಾಸ್ತ್ರ, ಸಸ್ಯಶಾಸ್ತ್ರ.

**ಆದರ್ಶ ನಿರ್ಧಾರಕ ಶಾಸ್ತ್ರ – NORMATIVE SCIENCE**

ಕೆಲವು ಆದರ್ಶಗಳು ಮತ್ತು ಮೌಲ್ಯಗಳನ್ನು ಆಧಾರವಾಗಿಟ್ಟುಕೊಂಡಿರುವ ಶಾಸ್ತ್ರಗಳಿಗೆ ಆದರ್ಶ ನಿರ್ಧಾರಕ ಶಾಸ್ತ್ರಗಳೆಂದು ಹೆಸರು.

ಉದಾ.: ಗಣಿತ ಶಾಸ್ತ್ರ, ತರ್ಕಶಾಸ್ತ್ರ, ನೀತಿಶಾಸ್ತ್ರ, ವ್ಯಾಕರಣ ಶಾಸ್ತ್ರ, ಸೌಂದರ್ಯ ಶಾಸ್ತ್ರ

ಒಟ್ಟಾರೆಯಾಗಿ ತರ್ಕಶಾಸ್ತ್ರವನ್ನು ಒಂದು "ಆದರ್ಶ ನಿರ್ಧಾರಕ ಶಾಸ್ತ್ರ" ಎಂದು ಕರೆಯುತ್ತಾರೆ. ಏಕೆಂದರೆ ತರ್ಕಶಾಸ್ತ್ರವು ವಿಚಾರದ ಜೊತೆಗೆ ಸಮಂಜಸ ಅನುಮಾನಗಳನ್ನು ಅಭ್ಯಾಸಮಾಡುವ ಒಂದು ರೂಪಾತ್ಮಕ ಸತ್ಯ.

**ತರ್ಕಶಾಸ್ತ್ರದ ವ್ಯಾಖ್ಯೆಗಳು: ತರ್ಕಶಾಸ್ತ್ರವನ್ನು ಹಲವಾರು ಶಾಸ್ತ್ರಜ್ಞರು ಈ ಕೆಳಗಿನಂತೆ ವ್ಯಾಖ್ಯಾನಿಸಿದ್ದಾರೆ.**

| | | | |
|---|---|---|---|
| 1 | ಆಲ್ಡ್ರಿಚ್ | "ತರ್ಕಶಾಸ್ತ್ರವು ತರ್ಕಿಸವ ಕಲೆಯಾಗಿದೆ" | Logic is an art of Reasoning |
| 2 | ವ್ಯಾಟ್ಲೆ | "ತರ್ಕಶಾಸ್ತ್ರವು ವಾದ ಮಾಡುವ ಶಾಸ್ತ್ರ ಹಾಗೂ ಕಲೆ" | Logic is the Science as well as art of argument |
| 3 | ಥಾಮ್ಸನ್ | "ತರ್ಕಶಾಸ್ತ್ರವು ಆಲೋಚನೆಯ ನಿಯಮಗಳ ವಿಜ್ಞಾನ" | Logic is the science of the Laws of thought |
| 4 | ಹ್ಯಾಮಿಲ್ಟನ್ | "ತರ್ಕಶಾಸ್ತ್ರ ಅಲೋಚನೆಯ ರೂಪಾತ್ಮಕ ನಿಯಮಗಳ ಶಾಸ್ತ್ರ" | Logic is the science of formal thoughts |
| 5 | ಜೋಸೆಫ್ | "ತರ್ಕಶಾಸ್ತ್ರ ವಿಚಾರದ ಶಾಸ್ತ್ರ" | Logic is a science of thought |
| 6 | ಜೆ.ಎಸ್.ಮಿಲ್ | ತರ್ಕಶಾಸ್ತ್ರ ಪ್ರಮಾಣ ಪರೀಕ್ಷಣೆಗೆ ಉಪಯೋಗವಾಗುವ ಬುದ್ದಿಯ ವ್ಯಾಪಾರಗಳ ಶಾಸ್ತ್ರ" | Logic is the science of opera ion, the understanding that is subservient to the estimation of evidence. |
| 7 | ವೆಲ್ಟನ್ ಮತ್ತು ಮೋನಹಾನ್ | ತರ್ಕಶಾಸ್ತ್ರವು ಸರಿಯಾದ ವಿಚಾರದ ತತ್ವಗಳ ಶಾಸ್ತ್ರ | Logic is the science of the principles of valid thought |

**ತರ್ಕಶಾಸ್ತ್ರದ ವ್ಯಾಪ್ತಿ: SCOPE OF LOGIC**

ಒಂದು ವಿಷಯಕ್ಕೆ ಸಂಬಂಧಿಸಿದಂತೆ ವ್ಯಾಪ್ತಿ ಎಂದರೆ ಆ ವಿಷಯದ ಅಧ್ಯಯನ ವಿಷಯ ಒಳಗೊಳ್ಳುವ ಅಥವಾ ವಿಸ್ತರಿಸುವ ಕ್ಷೇತ್ರ ಅಥವಾ ಪರಿಧಿ ಎಂದರ್ಥ. ಅದೇ ರೀತಿಯಾಗಿ ತರ್ಕಶಾಸ್ತ್ರವು ತನ್ನದೇ ಆದ ಅಧ್ಯಯನ ವಿಷಯದ ವ್ಯಾಪ್ತಿ ಅಥವಾ ಕ್ಷೇತ್ರವನ್ನು ಒಳಗೊಂಡಿದೆ. ವಿಚಾರ ಅಥವಾ ಚಿಂತನೆಯು ಮಾನವನ ಬುದ್ಧಿಶಕ್ತಿಯ ಚಿಂತನೆಯ ಪ್ರಕ್ರಿಯೆಯಾಗಿದೆ. ಚಿಂತನೆಯ ಪ್ರಕ್ರಿಯೆಗಳಾದ ಊಹಿಸುವಿಕೆ ಅಥವಾ ಸಂಕಲ್ಪಿಸುವಿಕೆ, ನಿರ್ಣಯಿಸುವಿಕೆ ಮತ್ತು ತರ್ಕಿಸುವಿಕೆ ಅಥವಾ ವಿವೇಚನಾತ್ಮಕತೆ ಮೊದಲಾದ ವಿಚಾರಗಳು ತರ್ಕಶಾಸ್ತ್ರದ ಪರಿಮಿತಿಗೆ ಒಳಪಟ್ಟಿವೆ. ರೂಪಾತ್ಮಕ ಮತ್ತು ವಿಷಯಾತ್ಮಕ ಸತ್ಯಗಳು ತರ್ಕಶಾಸ್ತ್ರದ ವ್ಯಾಪ್ತಿಗೆ ಒಳಪಟ್ಟಿವೆ. ರೂಪಾತ್ಮಕ ತರ್ಕಶಾಸ್ತ್ರವು ವಿಚಾರಗಳ ರೂಪಗಳನ್ನು ಅಭ್ಯಸಿಸುತ್ತದೆ. ಆಧಾರ ವಾಕ್ಯಗಳ ಸತ್ಯಾಸತ್ಯತೆಯನ್ನು ಪ್ರಶ್ನಿಸುವ ಗೋಜಿಗೆ ಹೋಗದೆ ಅವುಗಳು ಸರಿಯಾದವುಗಳೆಂದೇ ಭಾವಿಸಿ ಅವುಗಳಿಂದ ಸೂಚ್ಯವಾಗುವ ತೀರ್ಮಾನ ತರ್ಕಬದ್ಧವಾಗಿದೆಯೋ ಇಲ್ಲವೋ ಎಂಬುದನ್ನು ಮಾತ್ರ ಪರಿಶೀಲಿಸಲಾಗುತ್ತದೆ. ರೂಪಾತ್ಮಕ ತರ್ಕಶಾಸ್ತ್ರವನ್ನು ಶುದ್ಧ ತರ್ಕಶಾಸ್ತ್ರ (Pure Logic) ಅಥವಾ ಸುಸಂಬದ್ಧತೆಯ ತರ್ಕಶಾಸ್ತ್ರ (Logic of comitancy) ಕರೆಯಲಾಗುತ್ತದೆ.

ವಿಷಯಾತ್ಮಕ ತರ್ಕಶಾಸ್ತ್ರವು ತರ್ಕದ ಆಧಾರ ಅಥವಾ ಆಧಾರ ವಾಕ್ಯಗಳ ಸತ್ಯಾಂಶವು ವಾಸ್ತವಿಕ ಸಂಗತಿಗಳೊಂದಿಗೆ ಸರಿಹೋಗುತ್ತದೆಯೇ ಎಂಬುದನ್ನು ಪರಿಶೀಲಿಸುತ್ತದೆ. ವಿಷಯಾತ್ಮಕ ತರ್ಕಶಾಸ್ತ್ರವನ್ನು (Material logic) ಮತ್ತು 'ಅನ್ವಯಿಕ ತರ್ಕಶಾಸ್ತ್ರ' (Applied Logic)ಎಂದು ಕರೆಯಲಾಗುತ್ತದೆ. ಈ ಎರಡು ವಿಭಾಗಗಳು ತರ್ಕಶಾಸ್ತ್ರದ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ.

**ಆಲೋಚನೆಯ ರೂಪ ಮತ್ತು ವಸ್ತು – FORM AND MATTER OF THOUGHT:**

ಪ್ರತಿಯೊಂದು ವಸ್ತುವಿಗೂ ತನ್ನದೇ ಆದ ರೂಪ ಅಥವಾ ಆಕಾರ ಇದ್ದೇ ಇರುತ್ತದೆ. ಹಾಗೆಯೇ ಅದು ಯಾವುದಾದರೂ ಒಂದು ವಸ್ತುವಿನಿಂದ ರಚಿಸಲ್ಪಟ್ಟಿರುತ್ತದೆ. ಉದಾ.: ಕುರ್ಚಿ, ಅದಕ್ಕೆ ಒಂದು ನಿರ್ದಿಷ್ಟವಾದ ಆಕಾರವಿದೆ. ಅದು ಚೌಕಾಕೃತಿಯಲ್ಲಿ ಇರಬಹುದು ಅಥವಾ ದುಂಡಾಗಿರಬಹುದು. ಮರ, ಕಬ್ಬಿಣ, ಪ್ಲಾಸ್ಟಿಕ್ ಅಥವಾ ಯಾವುದಾದರೂ ಒಂದು ಅದರ ವಸ್ತುವಾಗಿರುತ್ತದೆ. ಆ ವಸ್ತುವಿಕೆ ನಾವು ಯಾವ ಆಕಾರವನ್ನು ಕೊಟ್ಟಿರುತ್ತೇವೋ ಅದು ಅದರ ರೂಪವಾಗುತ್ತದೆ. ರೂಪವಿಲ್ಲದ ವಸ್ತುಗಳು ವಾಸ್ತವದಲ್ಲಿ ಬೆಲೆ ಇಲ್ಲದವುಗಳಾಗಿವೆ.

ವಸ್ತುಗಳ ಹಾಗೇಯೇ ಅನುಮಾನಕ್ಕೂ 'ರೂಪ ಮತ್ತು ವಸ್ತು' ಇದ್ದೇ ಇರುತ್ತದೆ. ವಿಷಯವಲ್ಲದ ಅನುಮಾನ ಹೇಗೆ ತಾರ್ಕಿಕವಾಗಿ ಅಸತ್ಯವೋ ಹಾಗೆಯೇ ರೂಪವಿಲ್ಲದ ಅನುಮಾನವೂ ಅಸತ್ಯವೇ ಆಗಿರುತ್ತದೆ. ಯಾವುದೇ ವಿಷಯವಿರಲಿ, ಅದನ್ನು ಯಾವುದಾದರೂ ಒಂದು ರೀತಿಯಿಂದ ಆಲೋಚಿಸಬೇಕಾದುದು ಅನಿವಾರ್ಯ. "ಯಾವುದನ್ನು ಕುರಿತು ಆಲೋಚಿಸುತ್ತೇವೆಯೇ ಅದನ್ನು **ಆಲೋಚನೆಯ ವಸ್ತು ಅಥವಾ ವಿಷಯ ಎನ್ನುತ್ತೇವೆ.** (Form and Matter of Thought)

"ಆ ವಿಷಯ ಹಾಗೂ ವಸ್ತುವನ್ನು ಹೇಗೆ ಆಲೋಚಿಸುತ್ತೇವೆಯೋ ಅದು ಆಲೋಚನೆಯ ರೂಪವಾಗುತ್ತದೆ". ಒಂದು ವಿಷಯಕ್ಕೆ ಸಂಬಂಧಿಸಿದಂತೆ ಆಲೋಚನೆಯ ರೂಪ ಭಿನ್ನವಾಗಿರಬಹುದು. ಇನ್ನೂ ಕೆಲವು ಸಂದರ್ಭಗಳಲ್ಲಿ ರೂಪ ಸ್ಥಿರವಾಗಿದ್ದು, ವಿಷಯ ಅಥವಾ ವಸ್ತು ಬದಲಾಗಬಹುದು.

ಉದಾ: ಕೃಷ್ಣ ಲಂಚಕೋರನಲ್ಲ.

∴ ಕೃಷ್ಣ ಪ್ರಾಮಾಣಿಕ.

ಈ ಎರಡು ವಾಕ್ಯಗಳ ವಸ್ತು ಒಂದೇ ಆಗಿದೆ. ಆದರೆ ಅದನ್ನು ಹೇಳಿರುವ ರೂಪಗಳು ಭಿನ್ನವಾಗಿವೆ. ಮೊದಲ ವಾಕ್ಯ ವಿಷಯವನ್ನು ನಿಷೇದಾತ್ಮಕ ರೂಪದಲ್ಲಿ ವ್ಯಕ್ತಪಡಿಸಿದ್ದರೆ, ಎರಡನೆಯ ವಾಕ್ಯ ಭಾವಾತ್ಮಕ ರೂಪದಲ್ಲಿ ವ್ಯಕ್ತಪಡಿಸಿದೆ.

**ಸತ್ಯ ಮತ್ತು ಸಮಂಜಸತೆ:**

ತರ್ಕಶಾಸ್ತ್ರವು ಸಮಂಜಸ ಆಲೋಚನೆಗಳನ್ನು ಕುರಿತ ಶಾಸ್ತ್ರವಾಗಿದ್ದು ಸಮಂಜಸ ಎಂಬ ಪದಕ್ಕೆ ಎರಡು ಬಗೆಯ ಅರ್ಥಗಳಿವೆ.

ಆಲೋಚನೆಯು ರೂಪಾತ್ಮಕ ಸತ್ಯವನ್ನು ಅರುಹುತ್ತದೆ. ಅಂದರೆ ವಿಚಾರ ಸರಣಿಯು ಸ್ವಸುಸಂಬದ್ಧವಾಗಿದ್ದರೆ ಅದು ಸಮರ್ಪಕ ಅಥವಾ ಸಿಂಧುವಾಗಿರುತ್ತದೆ ಎಂದು ತಿಳಿಯಲಾಗುತ್ತದೆ.

ಸಂಕ್ಷಿಪ್ತವಾಗಿ ವಾಸ್ತವಿಕ ಸತ್ಯವು, ಯಾವುದು ನಮ್ಮ ಅನುಭವದಲ್ಲಿ ಸತ್ಯವೆಂದು ಕಂಡು ಬರುವುದೋ ಅದು ನೈಜ ಸತ್ಯ ಸಮಂಜಸತೆ – ಆಧಾರ ವಾಕ್ಯಗಳಿಂದ ತೀರ್ಮಾನ ಬರುವಂತಿರಬೇಕು.

ಎಲ್ಲಾ ಮಾನವರು ಮರ್ತ್ಯರು

ಎಲ್ಲಾ ರಾಜರು ಮಾನವರು

∴ ಎಲ್ಲಾ ರಾಜರು ಮರ್ತ್ಯರು

**ತರ್ಕಶಾಸ್ತ್ರದ ಉಪಯುಕ್ತತೆ – USES OF LOGIC**

ತರ್ಕಶಾಸ್ತ್ರವು ಮಾನವನಿಗೆ ವಿಚಾರದ ಜೊತೆಗೆ ವಿಮರ್ಶನಾತ್ಮಕ ಶಕ್ತಿಯನ್ನು ನೀಡುತ್ತದೆ. ತರ್ಕ ಶಾಸ್ತ್ರದ ಅಧ್ಯಯನದಿಂದ ಆಗುವ ಪ್ರಯೋಜನಗಳು ಈ ಕೆಳಕಂಡಂತಿವೆ:

1. ತರ್ಕಶಾಸ್ತ್ರವು ಜ್ಞಾನದ ಮೂಲವಾಗಿದ್ದು, ಸುವ್ಯವಸ್ಥಿತವಾಗಿ ಅಧ್ಯಯನ ಮಾಡುವಂತಹ ಸಾಮರ್ಥ್ಯವನ್ನು ಕಲಿಸುತ್ತದೆ.
2. ತರ್ಕಶಾಸ್ತ್ರವು ಆಲೋಚನೆಯ ಮತ್ತು ವಿಚಾರದ ನಿಯಮ. ಹಾಗೆಯೇ ವ್ಯವಸ್ಥಿತವಾಗಿ ಅನ್ವಯಿಸುವಂತಹ ಕೌಶಲ್ಯವನ್ನು ಕಲ್ಪಿಸುತ್ತದೆ.
3. ತರ್ಕಶಾಸ್ತ್ರದ ಅಧ್ಯಯನದಿಂದ ಸಮಂಜಸವಾದ ಜ್ಞಾನ ಮತ್ತು ವಿವೇಚನಾತ್ಮಕ ಚಿಂತನೆಯ ವಿಕಾಸವಾಗುತ್ತದೆ.
4. ತರ್ಕಶಾಸ್ತ್ರದ ಅಧ್ಯಯನದಿಂದ ವಿದ್ಯಾರ್ಥಿಗೆ ಸಮಂಜಸವಾದ ವಿವರಣೆಯನ್ನು ನೀಡುವ ಸಾಮರ್ಥ್ಯ ಬೆಳೆಯುತ್ತದೆ.
5. ನಮ್ಮ ವಿಚಾರ ಸರಣಿಯಲ್ಲಿ ಮತ್ತು ಬೇರೆಯವರ ವಿಚಾರ ಸರಣಿಯಲ್ಲಿ ಉಂಟಾಗುವ ತಪ್ಪುಗಳನ್ನು ತಡೆಗಟ್ಟಬಹುದು.
6. ಒಂದು ವಸ್ತುವನ್ನು ಅನೇಕ ದೃಷ್ಟಿಕೋನಗಳಿಂದ ನೋಡುವ ಸಾಮರ್ಥ್ಯ ಅವನಲ್ಲಿ ಬೆಳೆಯುತ್ತದೆ.
7. ತರ್ಕಶಾಸ್ತ್ರದ ಅಧ್ಯಯನದಿಂದ ಅಮೂರ್ತ ಜ್ಞಾನ ಶಕ್ತಿಯು ವಿಕಾಸವಾಗುತ್ತದೆ.

8. ತರ್ಕಶಾಸ್ತ್ರದ ಅಧ್ಯಯನವು ವಿಚಾರದ ಸಾಮಾನ್ಯ ನಿಯಮಗಳನ್ನು ಸೂಚಿಸುತ್ತದೆ.
9. ತರ್ಕಶಾಸ್ತ್ರದ ಅಧ್ಯಯನದಿಂದ ಶಿಸ್ತುಬದ್ಧ ವಿಚಾರ ಮತ್ತು ಸಮಂಜಸವಾಗಿ ವಾದ ಮಾಡುವ ಕಲೆಯನ್ನು ಬೆಳೆಸುತ್ತದೆ.

ಒಟ್ಟಾರೆಯಾಗಿ ತರ್ಕಶಾಸ್ತ್ರವು ಮಾನವನಿಗೆ ಮಾನಸಿಕ ತರಬೇತಿಯನ್ನು ಕೊಡುವುದರ ಜೊತೆಗೆ ಮನುಷ್ಯನ ಸರ್ವಾಂಗೀಣ ಅಭಿವೃದ್ಧಿಯನ್ನು ಮಾಡುತ್ತದೆ. ಆದ್ದರಿಂದ ಇದನ್ನು ಮಾನಸಿಕ ಔಷಧಿ ಅಥವಾ ಬೌದ್ಧಿಕ ವ್ಯಾಯಾಮ ಎಂದು ತೀರ್ಮಾನಿಸಲಾಗಿದೆ.

**ಅನುಮಾನ – INFERENCE:**

ಅನುಮಾನವು ಜ್ಞಾನದ ಮೂಲವಾಗಿದೆ. ನಮಗೆ ತಿಳಿದಿರುವ ವಿಷಯಗಳನ್ನು ಆಧರಿಸಿ ತಿಳಿಯದೇ ಇರುವ ವಿಷಯಗಳಿಗೆ ಆಲೋಚನೆಗಳನ್ನು ನಿರ್ದೇಶಿಸುವುದು ವಿವೇಚನಾತ್ಮಕ ಚಿಂತನೆಯೆನಿಸಿಕೊಳ್ಳುತ್ತದೆ.

ಅನುಮಾನ ಎಂದರೆ 'ಒಂದು ವಿಷಯವನ್ನು ಆಧಾರವಾಗಿಟ್ಟುಕೊಂಡು ಇನ್ನೊಂದು ವಿಷಯವನ್ನು ಊಹಿಸುವುದೇ ಅನುಮಾನ' ಅಥವಾ 'ತಿಳಿದ ವಿಷಯದಿಂದ ತಿಳಿಯದೆ ಇರುವ ವಿಷಯದ ಕಡೆಗೆ ಸಾಗುವ ಪ್ರಕ್ರಿಯೆಯನ್ನು ಅನುಮಾನ ಎಂದು ಕರೆಯುತ್ತಾರೆ.

ಉದಾ.: ದೂರದ ಬೆಟ್ಟದಲ್ಲಿ ಹೊಗೆಯನ್ನು ನೋಡಿ ಅಲ್ಲಿ ಬೆಂಕಿ ಇದೆ ಎಂದು ತೀರ್ಮಾನಿಸುವುದು.

ಒಂದು ವಾದದಲ್ಲಿ ಒಂದಕ್ಕಿಂತ ಹೆಚ್ಚಿನ ತರ್ಕವಾಕ್ಯಗಳಿರುತ್ತವೆ. ಒಂದು ವಾದದಲ್ಲಿ ನಾವು ಲಭ್ಯವಿರುವ ಅಥವಾ ತಿಳಿದ ತರ್ಕ ವಾಕ್ಯಗಳಿಂದ ಮತ್ತೊಂದು ತರ್ಕವಾಕ್ಯವನ್ನು ರೂಪಿಸುವ ನಿಟ್ಟಿನಲ್ಲಿ ಸಾಗುತ್ತೇವೆ. ನಮ್ಮ ವಾದವನ್ನು ಆಧರಿಸಿದ ತರ್ಕವಾಕ್ಯವನ್ನು ಆಧಾರವಾಕ್ಯ ಎಂದು ಕರೆಯಲಾಗುತ್ತದೆ. ನಾವು ತೀರ್ಮಾನವಾಗಿ ರೂಪಿಸುವ ತರ್ಕವಾಕ್ಯವನ್ನು ತೀರ್ಮಾನ ಅಥವ ನಿರ್ಣಯ ಎಂದು ಕರೆಯಲಾಗುತ್ತದೆ.

**ಅನುಮಾನದ ವಿಧಗಳು – KINDS OF INFERENCE**

ಅನುಮಾನಗಳನ್ನು ಸ್ಥೂಲವಾಗಿ ನಿಗಮನ ಅನುಮಾನ ಮತ್ತು ಅನುಗಮನ ಅನುಮಾನ ಎಂಬುದಾಗಿ ವರ್ಗೀಕರಿಸಲಾಗಿದೆ. (Deductive Inference and Inductive Inference)

**ನಿಗಮನ ಅನುಮಾನ:** ಪೂರ್ಣ ವ್ಯಾಪಕ ಸಂಗತಿಯಿಂದ ಅಪೂರ್ಣ ವ್ಯಾಪಕ ಸಂಗತಿಯೆಡೆಗೆ ಸಾಗುವ ಪ್ರಕ್ರಿಯೆ.

**ಉದಾ.**ಃ ಎಲ್ಲ ಮಾನವರು ಮರ್ತ್ಯರು
ಜಾನ್ ಒಬ್ಬ ಮಾನವ
∴ ಎಲ್ಲಾ ಮಾನವರು ಜಾನ್ ಮರ್ತ್ಯನು

**ಅನುಗಮನ ಅನುಮಾನ:** ಅಪೂರ್ಣ ವ್ಯಾಪಕ ಸಂಗತಿಯಿಂದ ಪೂರ್ಣ ವ್ಯಾಪಕ ಸಂಗತಿಯೆಡೆಗೆ ಸಾಗುವ ಪ್ರಕ್ರಿಯೆ.

**ಉದಾ.**ಃ ಸಾಕ್ರಟೀಸ್ ಮರ್ತ್ಯ
ಪ್ಲೇಟೋ ಮರ್ತ್ಯ
ಅರಿಸ್ಟಾಟಲ್ ಮರ್ತ್ಯ
∴ ಎಲ್ಲಾ ಮಾನವರು ಮರ್ತ್ಯರು

## ನಿಗಮನ ಮತ್ತು ವಿಗಮನಗಳ ನಡುವಿನ ವ್ಯತ್ಯಾಸಗಳು – (DIFFERENCE BETWEEN DEDUCTION AND INDUCTION)

1. ನಿಗಮನದಲ್ಲಿ ಪೂರ್ಣವ್ಯಾಪಕ ಸಂಗತಿಯಿಂದ ಅಪೂರ್ಣವ್ಯಾಪಕ ಸಂಗತಿಯೆಡೆಗೆ ಸಾಗುತ್ತದೆ. ಅನುಗಮನದಲ್ಲಿ ಅಪೂರ್ಣ ವ್ಯಾಪಕ ಸಂಗತಿಯಿಂದ ಪೂರ್ಣ ವ್ಯಾಪಕ ಸಂಗತಿಯೆಡೆಗೆ ಸಾಗುತ್ತದೆ.
2. ನಿಗಮನದಲ್ಲಿ ಆಧಾರ ವಾಕ್ಯ ಮೊದಲೇ ತಿಳಿದಿರುವುದರಿಂದ ಅದು ಸತ್ಯ ಅಥವಾ ಅಸತ್ಯವಾಗಿರಬಹುದು.

   ಅನುಗಮನದಲ್ಲಿ ಆಧಾರ ವಾಕ್ಯ ನಮ್ಮ ಅನುಭವಕ್ಕೆ ಬಂದ ಸಂಗತಿಯಾಗಿದೆ. ಇದರ ಆಧಾರದ ಮೇಲೆ ತರ್ಕ ಸಮ್ಮತವಾದ ಸಾಮಾನ್ಯ ವಾಕ್ಯವನ್ನು ಸ್ಥಿರೀಕರಿಸುವುದೇ ಅನುಗಮನ.
3. ನಿಗಮನದಲ್ಲಿ ಆಧಾರ ವ್ಯಾಪ್ತಿ ತೀರ್ಮಾನ ವ್ಯಾಪ್ತಿಗಿಂತ ಹೆಚ್ಚು. ಅನುಗಮನದಲ್ಲಿ ತೀರ್ಮಾನ ವ್ಯಾಪ್ತಿ ಆಧಾರ ವ್ಯಾಪ್ತಿಗಿಂತ ಹೆಚ್ಚು.
4. ನಿಗಮನದಲ್ಲಿ ತೀರ್ಮಾನ ಸತ್ಯ ಅಥವಾ ಅಸತ್ಯವಾಗಿರಬಹುದು ಅನುಗಮನದಲ್ಲಿ ತೀರ್ಮಾನ ಯಾವಾಗಲೂ ಸತ್ಯ. ಆದ್ದರಿಂದ ಇದು ವಾಸ್ತವಾಂಶ ತಿಳಿದಿರುತ್ತದೆ.
5. ನಿಗಮನದಲ್ಲಿ ರೂಪಾತ್ಮಕ ಸತ್ಯಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತದೆ. ಅನುಗಮನದಲ್ಲಿ ರೂಪಾತ್ಮಕ ಮತ್ತು ವಿಷಯಾತ್ಮಕ ಸತ್ಯಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡುತ್ತದೆ.
6. ನಿಗಮನದಲ್ಲಿ ವಿಗಮನದ ನೆಗೆತ ಅವಶ್ಯವಿಲ್ಲ. ಅನುಗಮನದಲ್ಲಿ ಅನುಗಮನದ ನೆಗೆತ ಅವಶ್ಯ
7. ನಿಗಮನದಲ್ಲಿ ಅವಲೋಕನ ಮತ್ತು ಪ್ರಯೋಗದ ಅವಶ್ಯಕತೆ ಇಲ್ಲ ಅನುಗಮನದಲ್ಲಿ ಅವಲೋಕನ ಮತ್ತು ಪ್ರಯೋಗದ ಅವಶ್ಯಕತೆ ಇದೆ.
8. ನಿಗಮನ ಅನುಭವವನ್ನು ಆಧರಿಸಿಲ್ಲ ಅನುಗಮನಕ್ಕೆ ಅನುಭವದ ಅವಶ್ಯಕತೆ ಇದೆ.
9. ನಿಗಮನವು ಅರಿಸ್ಟಾಟಲ್ ಡಿಕ್ಟಮ್ ಮತ್ತು ಆಲೋಚನೆಯ ಮೂಲನಿಯಮ ಎಂಬ ಎರಡು ಗೃಹಿತ ತತ್ವಗಳನ್ನು ಅವಲಂಬಿಸಿದೆ. ಅನುಗಮನವು ನಿಸರ್ಗದ ಏಕಪ್ರಕಾರತೆಯ ನಿಯಮ ಮತ್ತು ಕಾರ್ಯಕಾರಣನಿಯಮ ಎಂಬ ಎರಡು ಗೃಹಿತ ತತ್ವಗಳನ್ನು ಅವಲಂಬಿಸಿದೆ.

## ಉಪಸಂಹಾರ – CONCLUSION:

ನಿಗಮನ ಮತ್ತು ಅನುಗಮನಗಳು ಸ್ವರೂಪದಲ್ಲಿ ವ್ಯತ್ಯಾಸ ಹೊಂದಿದ್ದರೂ ಒಂದಕ್ಕೊಂದು ಪೂರಕವಾಗಿರುತ್ತವೆ. ಏಕೆಂದರೆ ನಿಗಮನದಲ್ಲಿ ನಾವು ಹೆಚ್ಚು ಸಾಮಾನ್ಯದಿಂದ ಕಡಿಮೆ ಸಾಮಾನ್ಯದ ಕಡೆಗೆ ಧಾವಿಸುತ್ತೇವೆ. ಆದರೆ ವಿಗಮನದಲ್ಲಿ ನಾವು ಕಡಿಮೆ ಸಾಮಾನ್ಯದಿಂದ ಹೆಚ್ಚು ಸಾಮಾನ್ಯಕ್ಕೆ ಸಾಗುತ್ತೇವೆ. ಆದ್ದರಿಂದ ಇವೆರಡು ಒಂದೇ ನಾಣ್ಯದ ಎರಡು ಮುಖಗಳಂತಿವೆ. ನಿಗಮನ ಮತ್ತು ಅನುಗಮನಗಳ ನಡುವಿನ ಸಂಬಂಧವನ್ನು **ಅನ್ಯೋನ್ಯಾಶ್ರಯ ಸಂಬಂಧ"** ಎನ್ನುತ್ತಾರೆ.

❖ ❖ ❖ ❖ ❖

# ಮಾದರಿ ಪ್ರಶ್ನೆಗಳು

**ಒಂದು ಅಂಕದ ಪ್ರಶ್ನೆಗಳು**

1. ತರ್ಕಶಾಸ್ತ್ರದ ಅಧ್ಯಯನದ ವಿಷಯ ಯಾವುದು?
2. ಆಲೋಚನೆ ಎಂದರೇನು?
3. ವಿಜ್ಞಾನ ಎಂದರೇನು?
4. ಕಲೆ ಎಂದರೇನು?
5. ಆದರ್ಶ ನಿರ್ಧಾರಕ ವಿಜ್ಞಾನ ಎಂದರೇನು?
6. ತರ್ಕಶಾಸ್ತ್ರದ ಯಾವುದಾದರೂ ಒಂದು ವ್ಯಾಖ್ಯೆ ಬರೆಯಿರಿ
7. ಅನುಮಾನ ಎಂದರೇನು?
8. ನಿಗಮನ ಅನುಮಾನ ಎಂದರೇನು?
9. ಅನುಗಮನ ಅನುಮಾನ ಎಂದರೇನು?
10. ಪಾಶ್ಚಿಮಾತ್ಯ ತರ್ಕಶಾಸ್ತ್ರದ ಪಿತಾಮಹ ಯಾರು?

**ಎರಡು ಅಂಕದ ಪ್ರಶ್ನೆಗಳು**

11. ಅನುಮಾನದ ವಿಧಗಳು ಯಾವುವು?
12. ತರ್ಕಶಾಸ್ತ್ರವು ಆದರ್ಶ ನಿರ್ಧಾರಕ ಶಾಸ್ತ್ರ ಎಂದು ಯಾಕೆ ಪ್ರಸಿದ್ಧವಾಗಿದೆ?
13. ಆಲೋಚನೆಯ ರೂಪ ಮತ್ತು ವಸ್ತು ಎಂದರೇನು?

**ಐದು ಅಂಕದ ಪ್ರಶ್ನೆಗಳು**

14. ತರ್ಕಶಾಸ್ತ್ರವು ವಿಜ್ಞಾನ ಮತ್ತು ಕಲೆ – ಸಾಧಿಸಿ
15. ತರ್ಕಶಾಸ್ತ್ರವು ಆದರ್ಶ ನಿರ್ಧಾರಕ ವಿಜ್ಞಾನ □ ವಿವರಿಸಿ

**ಟಿಪ್ಪಣಿ ಬರೆಯಿರಿ**

16. ವಿವೇಚನಾತ್ಮಕ ಚಿಂತನೆಯ ಅವಶ್ಯಕತೆ
17. ಆಲೋಚನೆಯು ಸಮಸ್ಯೆಯನ್ನು ನಿವಾರಿಸುವ ಪ್ರಕ್ರಿಯೆ
18. ತರ್ಕಶಾಸ್ತ್ರವು ವಿಜ್ಞಾನ ಮತ್ತು ಕಲೆ
19. ತರ್ಕಶಾಸ್ತ್ರದ ವ್ಯಾಖ್ಯೆಗಳು
20. ತರ್ಕಶಾಸ್ತ್ರದ ಅಧ್ಯಯನದಿಂದಾಗುವ ಉಪಯೋಗ

**ಹತ್ತು ಅಂಕದ ಪ್ರಶ್ನೆಗಳು**

21. ನಿಗಮನ ಮತ್ತು ಅನುಗಮನ ಅನುಮಾನಗಳನ್ನು ಹೋಲಿಸಿ, ವಿವರಿಸಿ.

❖ ❖ ❖ ❖ ❖

# ಅಧ್ಯಾಯ - 2

## ತರ್ಕಶಾಸ್ತ್ರ ಮತ್ತು ಭಾಷೆ

ಸಮಂಜಸ ಚಿಂತನೆ (Valid Reasoning) ಯು ತರ್ಕಶಾಸ್ತ್ರದ ಮುಖ್ಯ ಉದ್ದೇಶವಾಗಿದೆ. ತಾರ್ಕಿಕ ಚಿಂತನೆಯು (Logical Reasoning) ಭಾಷೆಯ ಮಾಧ್ಯಮದ ಮೂಲಕ ಅಭಿವ್ಯಕ್ತವಾಗುತ್ತದೆ. ವಿಚಾರಗಳ ಅಭಿವ್ಯಕ್ತಿ ಮತ್ತು ಸಂದೇಶವು ಭಾಷೆಯ ಕಾರ್ಯವಾಗಿದೆ. ನಮ್ಮ ಮನದಾಳದಲ್ಲಿ ರೂಪುಗೊಂಡ ವಿಚಾರವನ್ನು ಇತರರಿಗೆ ತಿಳಿಯಪಡಿಸಬೇಕಾದರೆ, ಈ ಸಂದೇಶ ಕಾರ್ಯವು ವಸ್ತುನಿಷ್ಠ (Objective) ವಾಗಿರಬೇಕು. ಕರಾರುವಕ್ಕಾಗಿರಬೇಕು ಮತ್ತು ಚೊಕ್ಕಟವಾಗಿರಬೇಕು. ವಿಚಾರವು ಸಂದೇಶಿಸುವ ಕಾರ್ಯವು ಸ್ಪಷ್ಠತೆಯನ್ನೊಳಗೊಂಡಿರಬೇಕು. ಆದ ಕಾರಣ ಪ್ರತಿಯೊಂದು ಭಾಷೆಯೂ ಕೆಲವು ನಿರ್ದಿಷ್ಟ ನಿಯಮಗಳನ್ನು ಒಳಗೊಂಡಿರುತ್ತದೆ. ಎಲ್ಲಾ ಭಾಷೆಗಳು ಕೆಲವು ನಿರ್ದಿಷ್ಟ ಸಾರ್ವತ್ರಿಕ ನಿಯಮಗಳನ್ನು ಅನುಸರಿಸುತ್ತವೆ. ಭಾಷೆಯನ್ನು ಸಮರ್ಪಕವಾಗಿ ಸರಿಯಾಗಿ ಬಳಸುವುದೇ ಸಾರ್ವತ್ರಿಕ ಭಾಷೆಯ (Universal Language) ಉದ್ದೇಶವಾಗಿದೆ. ತರ್ಕಶಾಸ್ತ್ರದಲ್ಲಿ ಭಾಷೆಯನ್ನು ಹೀಗೆ ವ್ಯಾಖ್ಯಾಯಿನಿಸಲಾಗಿದೆ. **"ಭಾಷೆ ಎಂದರೆ ಮಾತನಾಡುವಾಗ ಇಂದ್ರಿಯಗಳಿಂದ ಹೊರ ಹೊಮ್ಮುವ ಸ್ಪಷ್ಟವಾದ ಪದಗಳ ಒಂದು ವ್ಯವಸ್ಥೆ ಅಥವಾ ಮಾತನಾಡುವಾಗ ಪದಗಳ ಸಂಕೇತಗಳೆಂಬುದು ಬಳಸುವ ಲಿಖಿತ ಪದಗಳ ವ್ಯವಸ್ಥೆ"** ಮಾತನಾಡುವಾಗ ಹಾಗೂ ಲಿಖಿತ ಪದಗಳನ್ನು ವಿಚಾರ ಮಾಡಲು ಮತ್ತು ವಿಚಾರಗಳನ್ನು ವ್ಯಕ್ತಪಡಿಸಲು ಸಾಧನಗಳನ್ನಾಗಿ ಬಳಸಲಾಗುತ್ತದೆ. ತರ್ಕಶಾಸ್ತ್ರದಲ್ಲಿ ವಿಚಾರ ಅಥವಾ ಆಲೋಚನೆ ಎಂದರೆ ಅಮೂರ್ತ ಸ್ವರೂಪದ (Abstract) ಅಥವಾ ಸಾಮಾನ್ಯ ವಿಚಾರ ಎಂದು ತಿಳಿಯಲಾಗುತ್ತದೆ. ಆದ ಕಾರಣ ತರ್ಕಶಾಸ್ತ್ರದಲ್ಲಿ ಭಾಷೆಯಿಲ್ಲದೆ ವಿಚಾರವೆಂಬುದಿಲ್ಲ ಎಂದು ಪರಿಗಣಿಸಲಾಗುತ್ತದೆ.

**ಭಾಷೆಯ ಉದ್ದೇಶಗಳು:**

**"ಭಾಷೆಯು ವಿಚಾರದ ವಾಹಕ"** ಎಂಬುದು ತಿಳಿದ ವಿಚಾರವಾಗಿದೆ. ಭಾಷೆಯ ವಿವಿಧ ರೀತಿಯ ಬಳಕೆಗಳನ್ನು 20ನೇ ಶತಮಾನದ ತತ್ವಜ್ಞಾನಿಗಳು ವ್ಯಾಪಾಕವಾಗಿ ವಿವರಿಸಿದ್ದಾರೆ. ಸಾಂಪ್ರಾದಾಯಿಕವಾಗಿ ಭಾಷೆಯನ್ನು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವಿಕೆ ಎಂದು ಪರಿಗಣಿಸಲಾಗಿತ್ತು. ಆದರೆ ಲುಡ್ವಿಗ್ ವಿಟ್‌ಗೆನ್ಸ್ ಟೈನ್ ಎಂಬ ಪ್ರಖ್ಯಾತ ತತ್ವಜ್ಞಾನಿ ಸಂಕೇತಗಳು, ಪದಗಳು, ವಾಕ್ಯಗಳನ್ನು, ಅಸಂಖ್ಯಾತ ಪ್ರಕಾರಗಳಲ್ಲಿ ಬಳಸುತ್ತೇವೆ ಎಂದು ಸೂಚಿಸಿ ಭಾಷೆಯ ಬಳಕೆಯ ಹತ್ತಾರು ಪ್ರಕಾರಗಳನ್ನ ವಿವರಿಸುತ್ತಾನೆ. ಅದನ್ನು ನಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುವುದಕ್ಕೆ ಮಾತ್ರ ಬಳಸುವುದಿಲ್ಲ.

ನಮ್ಮ ದೈನಂದಿನ ಜೀವನದಲ್ಲಿ ಒಗಟುಗಳನ್ನು ರೂಪಿಸಲು, ಬಿಡಿಸಲು, ಹಾಸ್ಯಮಾಡಲು, ಪೀಡಿಸಲು, ಬೊಗಳುವಿಕೆಗೆ ಭಾಷೆಯನ್ನು ವ್ಯಾಪಾಕವಾಗಿ ಬಳಸುತ್ತೇವೆ. ಉಪಕಲ್ಪನೆಗಳನ್ನು ಪರೀಕ್ಷಿಸಲು, ಪ್ರಾಯೋಗಿಕ ಫಲಿತಾಂಶ ಪ್ರಕಟಣೆ ಚಿತ್ರಗಳ ವಿವರಣೆ, ಪದ್ಯಗಳನ್ನು ರಚಿಸಲು, ಕಥೆಗಳನ್ನು ಹೇಳಲು, ನಾಟಕ ಅಭಿನಯ, ಹಾಡಲು, ವಿವಿಧ ವಿಜ್ಞಾನ ಕ್ಷೇತ್ರಗಳಲ್ಲಿನ ಸಮಸ್ಯೆಗಳನ್ನು ಬಿಡಿಸಲು ಹೀಗೆ ಹತ್ತಾರು ಪ್ರಕಾರಗಳಲ್ಲಿ ಭಾಷೆಯು ಬಳಕೆಯಾಗುತ್ತದೆ.

ಭಾಷೆಯನ್ನು ಅಸಂಖ್ಯಾತ ಉದ್ದೇಶಗಳಲ್ಲಿ ಬಳಸಲಾದರೂ ಭಾಷೆಯ ಬಳಕೆಯ ಉದ್ದೇಶಗಳನ್ನು ನಾಲ್ಕು ವಿಧಗಳಾಗಿ ವಿಂಗಡಿಸಬಹುದು.

1. ವರ್ಣನಾತ್ಮಕ.
2. ಭಾವನಾತ್ಮಕ
3. ಕ್ರಿಯಾತ್ಮಕ
4. ಪ್ರಶ್ನಾರ್ಥಕ

**1. ವರ್ಣನಾತ್ಮಕ:**

ವರ್ಣನಾತ್ಮಕ ಭಾಷೆಯ ಉದ್ದೇಶ ಭಾಷೆಯ ಬಳಕೆಯಲ್ಲಿ ಒಂದು ಪ್ರಮುಖ ವಿಧವಾಗಿದೆ. ನಾವು ವಾಸಿಸುವ ಪ್ರಪಂಚದಲ್ಲಿನ ವಸ್ತುಗಳು, ವಿಷಯಗಳ ಹಾಗೂ ಕ್ರಿಯೆಗಳ ಸ್ವರೂಪವನ್ನು ಈ ರೀತಿಯ ಭಾಷೆಯಿಂದ ಅರ್ಥ ಮಾಡಿಕೊಳ್ಳುತ್ತೇವೆ. ಜ್ಞಾನವನ್ನು ಪರಸ್ಪರ ವಿನಿಯಮ ಮಾಡಿಕೊಳ್ಳಲು ಅಥವಾ ವರ್ಗಾಯಿಸಲು ಈ ವಿಧಾನ ಬಳಕೆಯಾಗುತ್ತದೆ. ತರ್ಕವಾಕ್ಯಗಳ ಮೂಲಕ ಹೇಳಿಕೆಗಳನ್ನು ಅಂಗೀಕರಿಸುತ್ತೇವೆ ಅಥವಾ ನಿರಾಕರಿಸುತ್ತೇವೆ.

**ಉದಾಹರಣೆ:**

"ಭೂಮಿ ನಿರಂತರವಾಗಿ ಅನೇಕ ಬದಲಾವಣೆಗಳಿಗೆ ತುತ್ತಾಗುತ್ತದೆ. ನದಿ, ಹಿಮನದಿಗಳ ಕೊರೆತ, ಪರ್ವತ ನಿರ್ಮಾಣ ಕ್ರಿಯೆ, ಸವೆತ, ಶಿಲಾ ಶಿಥಿಲೀಕರಣ ಇವೆಲ್ಲವೂ ಭೂಮಿಯ ಮೇಲಿನ ಲಕ್ಷಣಗಳನ್ನು ಸಾವಧಾನ ಮಾರ್ಪಡಿಸುತ್ತವೆ. ಭೂಮಿಯ ಅಂತರಾಳದಲ್ಲೂ ಆಗೋಚರವಾಗಿ ಅನೇಕ ಚಟುವಟಿಕೆಗಳು ಜರುಗುತ್ತಿರುತ್ತವೆ. ತರ್ಕ ವಾಕ್ಯಗಳು ಮಾತ್ರ ಸತ್ಯ ಅಥವಾ ಅಸತ್ಯವಾಗಿರುತ್ತವೆ. ಪ್ರಶ್ನೆಗಳಾಗಲೀ, ಆಜ್ಞೆಗಳಾಗಲೀ ಸತ್ಯವು ಅಲ್ಲ, ಅಸತ್ಯವು ಅಲ್ಲ.

**2. <u>ಭಾವನಾತ್ಮಕ:</u>**

ಭಾಷೆಯನ್ನು ಮಾಹಿತಿ ವಿನಿಮಯ ಮಾಡಿಕೊಳ್ಳಲು ಅಷ್ಟೆ ಬಳಸುವುದಿಲ್ಲ. ನಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಭಾಷೆಯನ್ನು ಬಳಸುತ್ತೇವೆ. ಈ ರೀತಿಯ ಬಳಕೆಯನ್ನು ಸಾಹಿತ್ಯದಲ್ಲಿ ಹೆಚ್ಚಾಗಿ ಕಾಣಬಹುದು. ಲೇಖನ, ಪದ್ಯ, ಕಾವ್ಯದ ಮೂಲಕ ಲೇಖಕರ ಭಾವನೆ, ಅನುಭವ, ಕಲ್ಪನಾಶಕ್ತಿ ಇವುಗಳನ್ನು ಓದುವವನು ಕೂಡ ಅನುಭವಿಸುತ್ತಾನೆ. "ಅಯ್ಯೋ ಪಾಪ! ಎಷ್ಟು ಭೀಕರ, ರಮಣೀಯ, ಅದ್ಭುತ, ಭಯಾನಕ ಮುಂತಾದ ಶಬ್ದಗಳು ವಿಭಿನ್ನ ಭಾವನೆಗಳನ್ನು ವ್ಯಕ್ತಪಡಿಸುತ್ತವೆ.

**ಉದಾಹರಣೆ:**

ಆ ಹೂ ತೋಟ ಎಷ್ಟು ಸುಂದರವಾಗಿದೆ.

**3. <u>ಕ್ರಿಯಾತ್ಮಕ:</u>**

ಇನ್ನೊಬ್ಬರನ್ನು ಕ್ರಿಯೆಯಲ್ಲಿ ತೊಡುಗುವಂತೆ ಮಾಡಲು ಅಥವಾ ಅವನ ವರ್ತನೆಯನ್ನು ಬದಲಾಯಿಸಿಕೊಳ್ಳಲು, ಪ್ರಚೋದಿಸಲು ಈ ಭಾಷೆಯನ್ನು ಕ್ರಿಯಾತ್ಮಕವಾಗಿ ಬಳಸುತ್ತೇವೆ. ಪ್ರವಚನ, ಧರ್ಮೋದ್ದೇಶ ಇತ್ಯಾದಿ ಈ ರೀತಿಯ ಬಳಕೆಯ ಮುಖ್ಯವಾದ ಉದಾಹರಣೆಗಳಾಗಿವೆ.

**ಉದಾಹರಣೆ:**

"ಮಿತ್ರರೇ! ಮೊದಲು ಮಾನವರಾಗಿ, ಆಗ ತಮಗೆ ತಾವೆ ನಿಮ್ಮನ್ನು ಅನುಸರಿಸುವುದನ್ನು ನೋಡುವಿರಿ, ಪರಸ್ಪರ ದ್ವೇಷ ಅಸೂಯೆಗಳನ್ನು ತೊರೆಯಿರಿ. ಸದುದ್ದೇಶ ಸತ್ಸಹಾಯ ಮತ್ತು ಧೈರ್ಯಗಳನ್ನು ಅವಲಂಬಿಸಿ. ನೀವು ಪರಸ್ಪರ ವಿರುದ್ಧ ಬೊಗಳುವುದನ್ನು ನಿಲ್ಲಿಸಿ ಮನುಷ್ಯರಾಗಿ ಹುಟ್ಟಿದ ಮೇಲೆ ಸ್ವಲ್ಪವಾದರೂ ಕೀರ್ತಿಯನ್ನು ಇಲ್ಲಿ ಬಿಟ್ಟು ಹೋಗಿ".

4. ಪ್ರಶ್ನಾರ್ಥಕ:

ನಾವು ದೈನಂದಿನ ಜೀವನದಲ್ಲೂ ವೈಜ್ಞಾನಿಕ ಕ್ಷೇತ್ರಗಳಲ್ಲಿ ಪ್ರಶ್ನೆಗಳನ್ನು ಕೇಳಲು ಈ ಭಾಷೆಯನ್ನು ಬಳಸುತ್ತೇವೆ. ಈ ರೀತಿಯ ಬಳಕೆಗೆ ಪ್ರಶ್ನಾರ್ಥಕ ಭಾಷೆಯ ಬಳಕೆ ಅಥವಾ ಉದ್ದೇಶ ಎನ್ನುತ್ತೇವೆ.

**ಉದಾಹರಣೆ:**

1. ಟಿ.ವಿ.ಯನ್ನು ಯಾರು ಶೋಧಿಸಿದರು?

2. ದೇಹ ಮನಸ್ಸುಗಳ ಕ್ರಿಯೋತ್ತೇಜಕ ಯಾವುದು?

3. ಸೂರ್ಯನಿಂದ ಭೂಮಿ ಎಷ್ಟು ದೂರದಲ್ಲಿದೆ?

ವಾಕ್ಯಗಳಲ್ಲಿ ನಿಷ್ಕೃಷ್ಟ ಹೇಳಿಕೆ ಸ್ಪಷ್ಟವಾಗಿರಬೇಕಾದರೆ ವಾಕ್ಯಗಳಲ್ಲಿ ಬಳಸಿದ ಪದಗಳ ಅರ್ಥಗಳು ಸ್ಪಷ್ಟವಾಗಿರಬೇಕಾಗುತ್ತದೆ. ಅನೇಕ ವೇಳೆ ಪದಗಳ ಅರ್ಥ ಅಸ್ಪಷ್ಟವಾಗಿರಬಹುದು, ಸಂದಿಗ್ಧತೆ ಹೊಂದಿರಬಹುದು. ಪ್ರಾದೇಶಿಕ ವ್ಯತ್ಯಾಸಗಳಿಂದ ಒಂದೇ ಪದ ವಿಭಿನ್ನ ಅರ್ಥಗಳನ್ನು ಹೊಂದಿರಬಹುದು.

'ಶಿರಾ" ಎನ್ನುವ ಪದ ಇದಕ್ಕೊಂದು ಉದಾಹರಣೆಯಾಗಿದೆ. ದಕ್ಷಿಣ ಕನ್ನಡ ಜನರಿಗೆ 'ಶಿರಾ' ಎಂದರೆ ಕೇಸರಿ ಬಾತ್ ಎಂದರ್ಥ ಕೊಟ್ಟರೆ, ಮೈಸೂರು ಪ್ರಾಂತ್ಯದ ಜನರಿಗೆ 'ಕುತ್ತಿಗೆ' ಎಂದರ್ಥ ಕೊಡುತ್ತದೆ.

ಭಾಷೆಯನ್ನು ಸ್ಪಷ್ಟವಾಗಿ ಬಳಸಲು ಇವೆಲ್ಲಾ ಅಂಶಗಳನ್ನು ತಿಳಿದಿರುವುದು ಅವಶ್ಯಕವಾಗಿದೆ. ನಿರೂಪಣೆ ಮೂಲಕ ಪದಗಳ ಅರ್ಥಗಳನ್ನು ಸ್ಪಷ್ಟಪಡಿಸಲು ತರ್ಕಶಾಸ್ತ್ರ ಪ್ರಯತ್ನಿಸುತ್ತದೆ. ಹೀಗೆ ವ್ಯಾಕರಣ (ಭಾಷೆ) ಮತ್ತು ತರ್ಕಶಾಸ್ತ್ರ (ಆಲೋಚನೆ) ಗಳು ಪರಸ್ಪರ ಪೂರಕಗಳಾಗಿರುತ್ತವೆ.

ತರ್ಕಶಾಸ್ತ್ರ ಅಧ್ಯಯನದಲ್ಲಿ ಭಾಷೆಯ ವರ್ಣನಾತ್ಮಕ ಬಳಕೆಗೆ ಹೆಚ್ಚು ಮಹತ್ವವಿರುವುದರಿಂದ ಅದನ್ನು ಮಾತ್ರ ವಿವರವಾಗಿ ಚರ್ಚಿಸಲಾಗಿದ್ದು, ಇನ್ನುಳಿದ ರೀತಿಯ ಬಳಕೆಗಳ ಬಗ್ಗೆ ಹೆಚ್ಚು ಮಾಹಿತಿಯನ್ನು ನೀಡುವುದು ಅಪ್ರಸ್ತುತ ಎನಿಸುತ್ತದೆ. ಹೆಚ್ಚಿನ ಆಸಕ್ತಿಯುಳ್ಳ ಓದುಗರು "ಗ್ರಂಥಋಣ"ದಲ್ಲಿ ಸೂಚಿಸಲಾಗಿರುವ ಗ್ರಂಥಗಳನ್ನು ಅಧ್ಯಯನ ಮಾಡಬಹುದು.

## III. ತರ್ಕಶಾಸ್ತ್ರ ಮತ್ತು ಭಾಷೆಗಳಿಗಿರುವ ಸಂಬಂಧ

ಶಬ್ದಗಳು ಅಥವಾ ಪದಗಳು ವಿಚಾರದ ವಾಹಕಗಳು. ವಿಚಾರಗಳನ್ನು ತಿಳಿಯಲು ಅಥವಾ ವ್ಯಕ್ತಗೊಳಿಸಲು ಮತ್ತು ವಿಚಾರವನ್ನು ಸಂಗ್ರಹಿಸಿಡಲು ಭಾಷೆಯು ನೆರವಾಗುತ್ತದೆ. ಭಾಷೆಯ ಬಳಕೆಯಿಲ್ಲದೆ ಹೋದರೆ ವೈಚಾರಿಕ ಪ್ರಗತಿಯಾಗಲೀ, ವಿಚಾರ ನಿರಂತರತೆಯಾಗಲೀ ಸಾಧ್ಯವಾಗುವುದಿಲ್ಲ. ಭಾಷೆಯು ವಿಚಾರದ ಸಾಧನ ಮತ್ತು ವಿಚಾರದ ವಾಹಕ ಎಂಬ ಅರ್ಥದಲ್ಲಿ ಮಾತ್ರ ತರ್ಕಶಾಸ್ತ್ರವು ಭಾಷೆಯನ್ನು ಅಧ್ಯಯಿಸುತ್ತದೆ.

ತರ್ಕಶಾಸ್ತ್ರಕ್ಕೆ ವಿಚಾರ ಅಥವಾ ಆಲೋಚನೆ ಪ್ರಾಥಮಿಕವಾಗಿ ಮುಖ್ಯವಾಗಿದ್ದು, ಪರೋಕ್ಷವಾಗಿ ಭಾಷೆಯೊಡನೆ ಸಂಬಂಧವನ್ನು ಹೊಂದಿದೆ ಎಂಬುದನ್ನು ಗಮನಿಸಬೇಕು. ಸರಿಯಾದ ಚಿಂತನೆಗೆ ಅಗತ್ಯವಿದ್ದಂತೆ ಮಾತ್ರ ತರ್ಕಶಾಸ್ತ್ರವು ಭಾಷೆಗೆ ಸಂಬಂಧವಿದೆ. ವಿಚಾರದ ಸಮಂಜಸತೆಗಾಗಿ ತರ್ಕಶಾಸ್ತ್ರದಲ್ಲಿ ಭಾಷೆಯನ್ನು ಕಟ್ಟುನಿಟ್ಟಾಗಿ ನಿಖರವಾದ ಅರ್ಥದಲ್ಲಿ ನಿರ್ಧಿಷ್ಟ ರೀತಿಯಲ್ಲಿ ಬಳಸಲಾಗುತ್ತದೆ.

❖ ❖ ❖ ❖ ❖

## ಮಾದರಿ ಪ್ರಶ್ನೆಗಳು

**(ಒಂದು ಅಂಕದ ಪ್ರಶ್ನೆಗಳು**

1. ಭಾಷೆ ಎಂದರೇನು?
2. ಮನಃಶಾಸ್ತ್ರ ಎಂದರೇನು?
3. ವರ್ಣನಾತ್ಮಕ ಭಾಷೆ ಎಂದರೇನು?
4. ಭಾವನಾತ್ಮಕ ಭಾಷೆ ಎಂದರೇನು?
5. ಕ್ರಿಯಾತ್ಮಕ ಭಾಷೆ ಎಂದರೇನು?

**ಎರಡು ಅಂಕದ ಪ್ರಶ್ನೆಗಳು**

6. ಪ್ರಶ್ನಾರ್ಥಕ ಭಾಷೆ ಎಂದರೇನು?
7. ಕ್ರಿಯಾತ್ಮಕ ಭಾಷೆಗೆ ಒಂದು ಉದಾಹರಣೆ ಕೊಡಿ?
8. ಕ್ರಿಯಾತ್ಮಕ ಭಾಷೆಯನ್ನು ವಿವರಿಸಿ?
9. ವರ್ಣಾನಾತ್ಮಕ ಭಾಷೆ ಮತ್ತು ಭಾವನಾತ್ಮಕ ಭಾಷೆಯ ನಡುವಿನ ವ್ಯತ್ಯಾಸವನ್ನು ತಿಳಿಸಿ?

**ಐದು ಅಂಕದ ಪ್ರಶ್ನೆಗಳು**

10. ತರ್ಕಶಾಸ್ತ್ರ ಮತ್ತು ಭಾಷೆ (ಟಿಪ್ಪಣಿ).
11. ಭಾವನಾತ್ಮಕ ಭಾಷೆಯನ್ನು ವಿವರಿಸಿ?
12. ವರ್ಣಾನಾತ್ಮಕ ಭಾಷೆಯನ್ನು ತಿಳಿಸಿ?
13. ಪ್ರಶ್ನಾರ್ಥಕ ಭಾಷೆಯನ್ನು ಬರೆಯಿರಿ?
14. ಭಾಷೆಯ ಉದ್ದೇಶಗಳನ್ನು ವಿವರಿಸಿ?

**ಹತ್ತು ಅಂಕದ ಪ್ರಶ್ನೆಗಳು**

15. ಭಾಷೆಯ ಉದ್ದೇಶಗಳನ್ನು ಎಷ್ಟು ವಿಧವಾಗಿ ವರ್ಗೀಕರಿಸಬಹುದು?
16. ಭಾಷೆಯು ವಿಚಾರದ ವಾಹಕ, ತಿಳಿಸಿ.

❖ ❖ ❖ ❖ ❖

# ಅಧ್ಯಾಯ 3
# ನಿರ್ಣಯ, ವಾಕ್ಯ ಮತ್ತು ತರ್ಕವಾಕ್ಯ

**ನಿರ್ಣಯ (JUDGEMENT):-**

ನಿರ್ಣಯವು ಒಂದು ಮಾನಸಿಕ ಕ್ರಿಯೆ. ಈ ಮಾನಸಿಕ ಕ್ರಿಯೆಯ ಪರಿಣಾಮವೂ ಕೂಡ ನಿರ್ಣಯವೆಂದು ಹೇಳಬಹುದು. ವ್ಯವಸ್ಥಿತವಾದ ವಿಚಾರವು ನಿರ್ಣಯದಿಂದಲೇ ಪ್ರಾರಂಭವಾಗುವುದು. ಎರಡು ಅಥವಾ ಎರಡಕ್ಕಿಂತ ಹೆಚ್ಚು ಭಾವರೂಪಗಳ ತುಲನೆ ಮಾಡಿ ಅವುಗಳ ನಡುವಿನ ಸಂಬಂಧವನ್ನು ಮನಸ್ಸಿನಲ್ಲಿ ನಿರ್ಧರಿಸಿದಾಗ ನಿರ್ಣಯ ಹುಟ್ಟುತ್ತದೆ. ಇದು ಹೀಗಿದೆ, ಇದು ಹೀಗಿಲ್ಲ ಎಂಬ ಮನಸ್ಸಿನ ನಿರ್ಧಾರವು ಜ್ಞಾನ ಸಾಧನೆಯ ಪ್ರಯತ್ನದಲ್ಲಿ ಸಾಮಾನ್ಯವಾಗಿ ನಮ್ಮ ನೆರವಿಗೆ ಬರುತ್ತದೆ.

ಉದಾ: ಸಕ್ಕರೆಯು ಸಿಹಿಯಾಗಿದೆ
ಮಲ್ಲಿಗೆಯು ಬೆಳ್ಳಗಿದೆ
ಕುದುರೆಯು ಸಿಂಹವಲ್ಲ
ಮನುಷ್ಯನು ಅಮರನಲ್ಲ

ಇಲ್ಲಿ ಮಲ್ಲಿಗೆ–ಬೆಳ್ಳಗೆ, ಸಕ್ಕರೆ–ಸಿಹಿ ಇವುಗಳ ನಡುವೆ ಸಂಬಂಧವಿದೆ ಎಂಬ ನಿರ್ಣಯಕ್ಕೆ ಬರುತ್ತೇವೆ. ಕುದುರೆ–ಸಿಂಹ, ಮನುಷ್ಯ–ಅಮರ ಇವುಗಳ ನಡುವೆ ಸಂಬಂಧವಿಲ್ಲವೆಂಬ ನಿರ್ಣಯಕ್ಕೆ ಬರುತ್ತೇವೆ. ನಿರ್ಣಯವು ಸತ್ಯವಿರಬಹುದು ಅಥವಾ ಅಸತ್ಯವಿರಬಹುದು.

**ವಾಕ್ಯ:– ಪೂರ್ಣ ಅರ್ಥ ಕೊಡುವ ಶಬ್ಧಗಳ ಸಮುದಾಯವೇ ವ್ಯಾಕರಣ ವಾಕ್ಯ.**

**ತರ್ಕವಾಕ್ಯ (PROPOSITION):-**

ತರ್ಕವಾಕ್ಯವು ನಿರ್ಣಯದ ಶಬ್ಧರೂಪವಾಗಿದೆ ಅರಿಸ್ಟಾಟಲ್‌ನ ಪ್ರಕಾರ ಯಾವುದಾದರೊಂದು ವಿಷಯಕ್ಕೆ ಬೇರೊಂದು ಸಂಗತಿಯನ್ನು ತಿಳಿಸುವುದು ತರ್ಕವಾಕ್ಯವಾಗಿದೆ. ತರ್ಕವಾಕ್ಯವು ಒಂದು ಸಂಗತಿಯನ್ನು ಪ್ರತಿಪಾದಿಸುವ ವಾಕ್ಯ ಸತ್ಯ ಅಥವಾ ಅಸತ್ಯವೆಂದು ಪರಿಗಣಿಸಬಹುದಾದ ಉಕ್ತಿ. ತರ್ಕವಾಕ್ಯಕ್ಕೂ ಸಂಗತಿಗಳಿಗೂ ಸಂಬಂಧವಿದೆ. ತರ್ಕವಾಕ್ಯದಲ್ಲಿ ನಿರೂಪಿತವಾದ ವಿಷಯಕ್ಕೂ ವಾಸ್ತವಿಕ ಸಂಗತಿಗಳಿಗೂ ಹೊಂದಿಕೆಯಾದರೆ ಅದು ಸತ್ಯವಾದ ತರ್ಕವಾಕ್ಯ, ಇಲ್ಲವಾದರೆ ಅದು ಅಸತ್ಯವಾದ ತರ್ಕವಾಕ್ಯ

**ತರ್ಕವಾಕ್ಯದಲ್ಲಿ ಮೂರು ಭಾಗಗಳಿರುತ್ತವೆ. ಅವು ಯಾವುವೆಂದರೆ**

1. ಉದ್ದೇಶ ಪದ (Subject)
2. ವಿಧೇಯ ಪದ (predicate)
3. ಸಂಯೋಜಕ ಪದ (copula)

ಯಾವ ವಿಷಯಕ್ಕೆ ಒಂದು ಸಂಗತಿಯನ್ನು ಹೇಳಿರುತ್ತದೆಯೋ ಅದು ಉದ್ದೇಶ ಪದ.

ಉದ್ದೇಶ ಪದದ ಬಗ್ಗೆ ಏನನ್ನು ಹೇಳಲಾಗುತ್ತದೆಯೋ ಅದು ವಿಧೇಯ ಪದ

ಉದ್ದೇಶ ಪದ ಮತ್ತು ವಿಧೇಯ ಪದಗಳನ್ನು ಜೋಡಿಸುವ ಕೊಂಡಿಗೆ ಸಂಯೋಜಕ ಶಬ್ದ ಎಂದು ಹೆಸರು. ಉದಾ:– "ವಿಜ್ಞಾನಿಯು ಪ್ರಾಮಾಣಿಕನಾಗಿರುತ್ತಾನೆ."

ಈ ತರ್ಕವಾಕ್ಯದಲ್ಲಿ "ವಿಜ್ಞಾನಿ" ಎಂಬುದು ಉದ್ದೇಶ ಪದ, "ಪ್ರಾಮಾಣಿಕ" ಎಂಬುದು ವಿಧೇಯ ಪದ ಮತ್ತು "ಆಗಿರುತ್ತಾನೆ" ಎಂಬುದು ಸಂಯೋಜಿಕ ಶಬ್ದವಾಗಿದೆ.

**ವ್ಯಾಕರಣ ವಾಕ್ಯಕ್ಕೂ ತರ್ಕವಾಕ್ಯಕ್ಕೂ ಇರುವ ವ್ಯತ್ಯಾಸ**

1. ಎಲ್ಲಾ ತರ್ಕವಾಕ್ಯಗಳೂ ಅವಶ್ಯಕವಾಗಿ ವ್ಯಾಕರಣ ವಾಕ್ಯಗಳಾಗಿರುತ್ತದೆ. ಆದರೆ ಎಲ್ಲಾ ವ್ಯಾಕರಣ ವಾಕ್ಯಗಳು ತರ್ಕವಾಕ್ಯಗಳಾಗಿರುವುದಿಲ್ಲ. ಪ್ರತಿಪಾದಕ ವಾಕ್ಯಗಳು ಮಾತ್ರ ತರ್ಕವಾಕ್ಯಗಳನ್ನು ಹೋಲುತ್ತದೆ.
2. ಕೇವಲ ಪ್ರತಿಪಾದಕ ವಾಕ್ಯಗಳು ಮಾತ್ರ ತರ್ಕವಾಕ್ಯವನ್ನು ಸರಿಹೊಂದುವುದರಿಂದ ಪ್ರಶ್ನಾರ್ಥಕ, ಆಜ್ಞಾರ್ಥಕ, ಇಚ್ಛಾರ್ಥಕ ಮತ್ತು ಉದ್ಗಾರವಾಚಕ ವಾಕ್ಯಗಳು ತರ್ಕವಾಕ್ಯಗಳಲ್ಲವೆಂದು ಸ್ಪಷ್ಟವಾಗುವುದು. ಆದರೂ ಈ ವಿವಿಧ ಬಗೆಯ ವಾಕ್ಯಗಳನ್ನು ತರ್ಕವಾಕ್ಯಗಳಿಗೆ ರೂಪಾಂತರಿಸಿ ಅವುಗಳ ಇಂಗಿತವನ್ನು ಸರಳ ರೂಪದಲ್ಲಿ ವ್ಯಕ್ತಪಡಿಸುವುದು ಸಾಧ್ಯವಿದೆ.
3. ವ್ಯಾಕರಣ ವಾಕ್ಯಗಳು ಭೂತಕಾಲ, ವರ್ತಮಾನಕಾಲ ಮತ್ತು ಭವಿಷ್ಯತ್ಕಾಲಗಳಲ್ಲಿ ವ್ಯಕ್ತವಾಗಬಹುದು. ಆದರೆ ತರ್ಕವಾಕ್ಯವು ಯಾವಾಗಲು ವರ್ತಮಾನ ಕಾಲದಲ್ಲಿಯೇ ವ್ಯಕ್ತವಾಗಬೇಕು.
4. ಕೆಲವು ಸಲ ಒಂದೇ ವ್ಯಾಕರಣ ವಾಕ್ಯವು ಒಂದಕ್ಕಿಂತ ಹೆಚ್ಚು ತರ್ಕವಾಕ್ಯಗಳಿಗೆ ಸಮನಾಗಿರುತ್ತದೆ.

   ಉದಾ:– "ಹಸು, ನಾಯಿ ಮತ್ತು ಬೆಕ್ಕು ಚತುಷ್ಪಾದಿ"

ಈ ವಾಕ್ಯವನ್ನು ಮೂರು ತರ್ಕವಾಕ್ಯಗಳಿಗೆ ರೂಪಾಂತರಿಸ ಬೇಕಾಗುವುದು

a) ಹಸು ಚತುಷ್ಪಾದಿಯಾಗಿದೆ

b) ನಾಯಿ ಚತುಷ್ಪಾದಿಯಾಗಿದೆ.

c) ಬೆಕ್ಕು ಚತುಷ್ಪಾದಿಯಾಗಿದೆ.

5. ಒಂದೇ ತರ್ಕವಾಕ್ಯವನ್ನು ವಿವಿಧ ವ್ಯಾಕರಣ ವಾಕ್ಯಗಳಲ್ಲಿ ವ್ಯಕ್ತಮಾಡಬಹುದು.

   ಉದಾ:– ಪ್ರತಿಯೊಂದು ನಾಯಿಯು ಬೊಗಳುತ್ತವೆ.

   ಎಲ್ಲ ನಾಯಿಗಳು ಬೊಗಳುತ್ತವೆ.

   ಇವು ಬೇರೆ ಬೇರೆ ವ್ಯಾಕರಣ ವಾಕ್ಯಗಳಲ್ಲಿದ್ದರೂ ಒಂದೇ ತರ್ಕವಾಕ್ಯವನ್ನು ಸೂಚಿಸುತ್ತದೆ.
6. ವ್ಯಾಕರಣ ವಾಕ್ಯದ ಆಖ್ಯೇಯ (ಕರ್ತೃ) ಮತ್ತು ಆಖ್ಯಾತಗಳು (ಕ್ರಿಯಾ ಪದ) ತರ್ಕವಾಕ್ಯದ ಉದ್ದೇಶ ಮತ್ತು ವಿಧೇಯ ಪದಗಳಿಂದ ಭಿನ್ನವಾಗಿದೆ. ಅಂದರೆ ವ್ಯಾಕರಣ ವಾಕ್ಯದಲ್ಲಿ ಉದ್ದೇಶ ಮತ್ತು ವಿಧೆಯ ಪದಗಳು ಸ್ಥಾನವನ್ನು ಬದಲಾಯಿಸಬಹುದು. ಆದರೆ ತರ್ಕವಾಕ್ಯದಲ್ಲಿ ಮೊದಲು ಉದ್ದೇಶ ಪದ ಬರುತ್ತದೆ ನಂತರ ವಿಧೇಯ ಪದ ಬರುತ್ತದೆ.

   ಉದಾ:– ಸುಂದರವಾಗಿದೆ ಗುಲಾಬಿ ಹೂ

   ಗುಲಾಬಿಹೂ ಸುಂದರವಾಗಿದೆ.

**ಶಬ್ದಗಳು ಮತ್ತು ಪದಗಳು**

**ಶಬ್ದ (WORD):-**

ಶಬ್ದ ಅಕ್ಷರಗಳಿಂದ ತಯಾರಾದ ಉಪಯುಕ್ತವಾದ ಸಂಜ್ಞೆ, ಶಬ್ದಕ್ಕೆ ಅರ್ಥವಿರುತ್ತದೆ. ಶಬ್ದಗಳ ಸಂಯೋಗದಿಂದ ವ್ಯಾಕರಣ ವಾಕ್ಯವು ಸಿದ್ಧವಾಗುತ್ತದೆ.

**ಪದ (TERM)**

ಪದವು ಶಬ್ದ ಅಥವ ಶಬ್ದಗಳ ಸಮುದಾಯದಿಂದ ರೂಪವಾಗಿದ್ದು ತರ್ಕವಾಕ್ಯದ ಉದ್ದೇಶ ಅಥವ ವಿಧೇಯ ಆಗಿರುತ್ತದೆ. ಹೀಗೆ ಉಪಯೋಗಿಸಬಹುದಾದ ಶಬ್ದ ಅಥವ ಶಬ್ದಗಳ ಸಮುದಾಯಕ್ಕೆ ಪದ ಎನ್ನುವರು.

ಉದಾ:– ಮಾನವನು ಮರ್ತ್ಯನು ಆಗಿದ್ದಾನೆ
ಕುದುರೆಯು ಚತುಷ್ಪಾದಿ ಆಗಿದೆ.

ಇಲ್ಲಿ ಮಾನವ, ಮರ್ತ್ಯ, ಕುದುರೆ, ಚತುಷ್ಪಾದಿ– ಇವೆಲ್ಲ ಪದಗಳಾಗಿವೆ. ಪದವನ್ನು ತರ್ಕವಾಕ್ಯದಲ್ಲಿ ಉದ್ದೇಶ ಅಥವ ವಿಧೇಯವೆಂದು ಬಳಸಬಹುದಾದ ಶಬ್ದವೆಂದು ಹೇಳಬಹುದು.

**ಉದ್ದೇಶ ಮತ್ತು ವಿಧೇಯ ಪದ**

**ಉದ್ದೇಶ ಪದ (SUBJECT)**

ಯಾವುದರ ವಿಷಯಕ್ಕೆ ಒಂದು ಸಂಗತಿಯನ್ನು ಹೇಳಲಾಗುತ್ತದೆಯೋ ಅದು ಉದ್ದೇಶ ಪದ, ಯಾವ ವಿಷಯದ ಬಗ್ಗೆ ಹೇಳಿಕೆ ನೀಡಿದೆ ಎಂದು ಪ್ರಶ್ನಿಸಿಕೊಂಡರೆ ಉದ್ದೇಶ ಪದ ಸಿಗುತ್ತದೆ.

ಉದಾ:– ಮಾನವ–ಮರ್ತ್ಯ, ವಿದ್ಯಾರ್ಥಿ– ಜಾಣ ಇಲ್ಲಿ ಮಾನವ ಮತ್ತು ವಿದ್ಯಾರ್ಥಿ ಉದ್ದೇಶ ಪದಗಳಾಗಿವೆ ಏಕೆಂದರೆ ಇವುಗಳ ಬಗ್ಗೆ ಹೇಳಿಕೆ ನೀಡಲಾಗಿದೆ.

**ವಿಧೇಯ ಪದ (PREDICATE):-**

ಉದ್ದೇಶ ಪದದ ಬಗ್ಗೆ ಏನನ್ನು ಹೇಳಲಾಗುತ್ತದೆಯೋ ಅದು ವಿಧೇಯ ಪದ, ಉದ್ದೇಶ ಪದದ ಗುಣವನ್ನು ವಿಧೇಯ ಪದವೆಂದು ಕರೆಯಲಾಗುತ್ತದೆ. ಇದು ಭಾವಾತ್ಮಕ ಅಥವಾ ನಿಷೇಧಾತ್ಮಕವಾಗಿರಹಬುದು.

ಉದಾ:– ಮಾನವ–ಮರ್ತ್ಯ, ಮಾನವ–ಪರಿಪೂರ್ಣನಲ್ಲ ಇಲ್ಲಿ ಮರ್ತ್ಯ ಮತ್ತು ಪರಿಪೂರ್ಣ ಎಂಬುದು ವಿಧೇಯ ಪದವಾಗಿದೆ. ಮರ್ತ್ಯರು ಎಂಬ ವಿಧೇಯ ಪದ ಉದ್ದೇಶಕ್ಕೆ ಅನ್ವಯಿಸುತ್ತದೆ ಎಂದು ಹೇಳಿದೆ. ಪರಿಪೂರ್ಣ ಎಂಬ ವಿಧೇಯ ಪದ ಉದ್ದೇಶಕ್ಕೆ ಅನ್ವಯಿಸುವುದಿಲ್ಲವೆಂದು ಹೇಳಿದೆ ಇಲ್ಲಿ ಮೊದಲನೆಯದು ಭಾವಾತ್ಮಕವಾಗಿದೆ ಮತ್ತು ಎರಡನೆಯದು ನಿಷೇಧಾತ್ಮಕವಾಗಿದೆ.

**ಪದಗಳ ವರ್ಗೀಕರಣ**

ಪದಗಳನ್ನು ಕೆಳಗಿನಂತೆ ವರ್ಗೀಕರಿಸಲಾಗಿದೆ

1. ಸರಳ ಮತ್ತು ಸಂಕೀರ್ಣ ಪದ

2. ವಿಶಿಷ್ಟ ಮತ್ತು ಸಾಮಾನ್ಯ ಪದ
3. ವ್ಯಷ್ಠಿ ಮತ್ತು ಸಮಷ್ಠಿ ಪದ
4. ವಸ್ತುವಾಚಕ ಮತ್ತು ಭಾವವಾಚಕ ಪದ
5. ಭಾವಾತ್ಮಕ, ನಿಷೇಧಾತ್ಮಕ ಮತ್ತು ಅಭಾವಾತ್ಮಕ ಪದ
6. ನಿರಪೇಕ್ಷ ಮತ್ತು ಸಾಪೇಕ್ಷ ಪದ
7. ಸಗುಣವಾಚಕ ಮತ್ತು ಅಗುಣವಾಚಕ ಪದ

**1. ಸರಳ ಮತ್ತು ಸಂಕೀರ್ಣ ಪದ**

ಒಂದೇ ಒಂದು ಶಬ್ದದಿಂದ ಉಂಟಾಗುವ ಪದಕ್ಕೆ ಸರಳ ಪದ ಎಂದು ಹೆಸರು
ಉದಾ:– ಮನುಷ್ಯ, ಗಾಂಧೀಜಿ, ಕುದುರೆ, ಇತ್ಯಾದಿ

ಒಂದಕ್ಕಿಂತ ಹೆಚ್ಚು ಶಬ್ದಗಳಿಂದ ಉಂಟಾಗುವ ಪದಕ್ಕೆ ಸಂಕೀರ್ಣ ಪದ ಎಂದು ಹೆಸರು
ಉದಾ:– ಬುದ್ಧಿವಂತ ವಿದ್ಯಾರ್ಥಿ, ಪ್ರಾಮಾಣಿಕ ಮನುಷ್ಯ, ಮೈಸೂರು ವಿಶ್ವವಿದ್ಯಾನಿಲಯ, ಇತ್ಯಾದಿ.

**2. ವಿಶಿಷ್ಟ ಮತ್ತು ಸಾಮಾನ್ಯ ಪದ**

ಒಂದೇ ವ್ಯಕ್ತಿ, ವಸ್ತು ಮತ್ತು ಸ್ಥಳವನ್ನು ಸೂಚಿಸುವ ಪದಕ್ಕೆ ವಿಶಿಷ್ಟ ಪದ ಎಂದು ಹೆಸರು.
ಉದಾ:–ಮೈಸೂರು, ನೆಹರು, ತಾಜ್ ಮಹಲ್, ಇತ್ಯಾದಿ.

ವಸ್ತು, ವ್ಯಕ್ತಿ ಮತ್ತು ಸ್ಥಳವನ್ನು ಗುಂಪಿನಲ್ಲಿ ಸೂಚಿಸುವುದಕ್ಕೆ ಸಾಮಾನ್ಯ ಪದ ಎಂದು ಹೆಸರು
ಉದಾ:– ಕಾಲೇಜು, ಮನುಷ್ಯ.

**3. ವ್ಯಷ್ಠಿ ಮತ್ತು ಸಮಷ್ಠಿ ಪದ**

ವಸ್ತು, ವ್ಯಕ್ತಿ ಮತ್ತು ಸ್ಥಳವನ್ನು ಗುಂಪಿನಿಂದ ಪ್ರತ್ಯೇಕಿಸಿ ತಿಳಿಸುವ ಪದಕ್ಕೆ ವ್ಯಷ್ಠಿ ಪದ ಎಂದು ಹೆಸರು.
ಉದಾ:– ಸೈನಿಕ, ಭೂಮಿ, ಬೆಂಗಳೂರು, ಇತ್ಯಾದಿ.

ವಸ್ತು, ವ್ಯಕ್ತಿ ಮತ್ತು ಸ್ಥಳದ ಗುಂಪನ್ನು ಸೂಚಿಸುವ ಪದಕ್ಕೆ ಸಮಷ್ಠಿ ಪದ ಎಂದು ಹೆಸರು
ಉದಾ:– ಸೈನ್ಯ, ಗ್ರಹ, ಕಾಲೇಜು, ಇತ್ಯಾದಿ.

**4. ವಸ್ತುವಾಚಕ ಮತ್ತು ಭಾವವಾಚಕ ಪದ**

ಅಸ್ತಿತ್ವದಲ್ಲಿರುವಂತಹ ವಸ್ತು, ವ್ಯಕ್ತಿ ಮತ್ತು ಸ್ಥಳವನ್ನು ಸೂಚಿಸುವ ಪದಕ್ಕೆ ವಸ್ತು ವಾಚಕ ಪದ ಎಂದು ಹೆಸರು.

ಉದಾ:– ಶಾಲೆ, ಪುಸ್ತಕ, ಅಶೋಕ, ಇತ್ಯಾದಿ

ವಸ್ತು ಮತ್ತು ವ್ಯಕ್ತಿಯಲ್ಲಿರುವ ಗುಣವನ್ನು ಪ್ರತ್ಯೇಕಿಸಿ ತಿಳಿಸುವ ಪದಕ್ಕೆ ಭಾವವಾಚಕ ಪದ ಎಂದು ಹೆಸರು. ಈ ಪದವು ಗುಣವನ್ನು ಮಾತ್ರ ಸೂಚಿಸುತ್ತದೆ.

ಉದಾ:– ಮೃದುತ್ವ, ಸೌಂದರ್ಯ, ಪ್ರಾಮಾಣಿಕತೆ, ಇತ್ಯಾದಿ

**5. ಭಾವಾತ್ಮಕ, ನಿಷೇಧಾತ್ಮಕ ಮತ್ತು ಅಭಾವಾತ್ಮಕ ಪದ**

ಭಾವಾತ್ಮಕ ಪದವು ಅಸ್ತಿತ್ವದಲ್ಲಿರುವ ವಸ್ತು ಅಥವ ಲಕ್ಷಣವನ್ನು ಸೂಚಿಸುವ ಪದ ಅಂದರೆ ಇರುವ ವಸ್ತು ಅಥವ ಗುಣವನ್ನು ಸೂಚಿಸುತ್ತದೆ.

ಉದಾ:– ಸಂತೋಷ, ಸ್ವಾರ್ಥ, ಉಪಯುಕ್ತ, ಇತ್ಯಾದಿ

ನಿಷೇಧಾತ್ಮಕ ಪದವು ವಸ್ತು ಅಥವಾ ವ್ಯಕ್ತಿಯ ಗುಣದ ಅಭಾವವನ್ನು ಸೂಚಿಸುತ್ತದೆ.

ಉದಾ:– ಅಸಂತೋಷ, ನಿಸ್ವಾರ್ಥ, ನಿರುಪಯುಕ್ತ, ಇತ್ಯಾದಿ

ಅಭಾವಾತ್ಮಕ ಪದವು ಇರಬೇಕಾದ ಗುಣವು ಸಧ್ಯದಲ್ಲಿ ಲೋಪವಾಗಿದೆಯೆಂದೆ ಸೂಚಿಸುತ್ತದೆ. ಇದು ಅಂಗವೈಕಲ್ಯವನ್ನು ಸೂಚಿಸುತ್ತದೆ.

ಉದಾ:– ಕುರುಡು, ಕಿವುಡು, ಕುಂಟು, ಇತ್ಯಾದಿ

**6. ನಿರಪೇಕ್ಷ ಮತ್ತು ಸಾಪೇಕ್ಷ ಪದ**

ನಿರಪೇಕ್ಷ ಪದ ಎಂದರೆ ಸ್ವತಂತ್ರವಾಗಿ ಅರ್ಥ ಕೊಡುವ ಪದ ಅಂದರೆ ಯಾವುದರ ಸಹಾಯವಿಲ್ಲದೆ ಪೂರ್ಣ ಅರ್ಥ ಕೊಡುವ ಪದ

ಉದಾ:– ಹೂವು, ಕುದುರೆ, ಬೆಳ್ಳಿ, ಇತ್ಯಾದಿ

ಸಾಪೇಕ್ಷ ಪದ ಎಂದರೆ ಬೇರೊಂದು ಪದದ ಸಹಾಯದಿಂದ ಪೂರ್ಣ ಅರ್ಥ ಕೊಡುತ್ತದೆ. ಅಂದರೆ ಇದು ಸಂಬಂಧಸೂಚಕ ಪದ

ಉದಾ:– ಅಣ್ಣ, ಮಗು, ಶಿಕ್ಷಕ, ಇತ್ಯಾದಿ

**7. ಸಗುಣವಾಚಕ ಪದ (CONNOTATIVE TERM)**

ಸಗುಣವಾಚಕ ಪದ ಎಂದರೆ ವಸ್ತು ಮತ್ತು ವ್ಯಕ್ತಿಯನ್ನು ಸೂಚಿಸುವುದರ ಜೊತೆಗೆ ಲಕ್ಷಣವನ್ನು ಸೂಚಿಸುತ್ತದೆ.

ಉದಾ:– ಮನುಷ್ಯ, ಶಾಲೆ, ಊರು, ಇತ್ಯಾದಿ

ಅಗುಣವಾಚಕ ಪದ **(NON-CONNOTATIVE TERM)**

ಅಗುಣವಾಚಕ ಪದ ಎಂದರೆ ವಸ್ತುವನ್ನು ಅಥವ ಗುಣವನ್ನು ಪ್ರತ್ಯೇಕವಾಗಿ ಸೂಚಿಸುತ್ತದೆ ಅಂದರೆ ವಸ್ತು ಅಥವ ಗುಣವನ್ನು ಒಟ್ಟಿಗೆ ಸೂಚಿಸದೆ ಬೇರೆಯಾಗಿ ಸೂಚಿಸುತ್ತದೆ.

ಉದಾ:– ಧಾರವಾಡ, ರಾಮ, ಬಿಳಿ, ಇತ್ಯಾದಿ

❖ ❖ ❖ ❖ ❖

## ಮಾದರಿ ಪ್ರಶ್ನೆಗಳು

**ಒಂದು ಅಂಕದ ಪ್ರಶ್ನೆಗಳು**

1. ನಿರ್ಣಯ ಎಂದೇನು?
2. ವಾಕ್ಯ ಎಂದರೇನು?
3. ತರ್ಕವಾಕ್ಯ ಎಂದರೇನು?
4. ಶಬ್ದ ಎಂದರೇನು?
5. ಪದ ಎಂದರೇನು?

**ಎರಡು ಅಂಕಗಳ ಪ್ರಶ್ನೆಗಳು**
**(ಕೆಳಗಿನ ಪ್ರಶ್ನೆಗಳನ್ನು ಒಂದು ಉದಾಹರಣೆಯೊಂದಿಗೆ ಉತ್ತರಿಸಿ)**

6. ಸರಳ ಪದ ಎಂದರೇನು
7. ಸಾಮಾನ್ಯ ಪದ ಎಂದರೇನು?
8. ವ್ಯಷ್ಠಿ ಪದ ಎಂದರೇನು?
9. ವಸ್ತುವಾಚಕ ಪದ ಎಂದರೇನು?
10. ಭಾವವಾಚಕ ಪದ ಎಂದರೇನು?
11. ನಿಷೇಧಾತ್ಮಕ ಪದ ಎಂದರೇನು?
12. ಅಭಾವಾತ್ಮಕ ಪದ ಎಂದರೇನು?
13. ಸಾಪೇಕ್ಷ ಪದ ಎಂದರೇನು?
14. ಸಗುಣವಾಚಕ ಪದ ಎಂದರೇನು?
15. ಅಗುಣವಾಚಕ ಪದ ಎಂದರೇನು?
16. ಸಂಕೀರ್ಣ ಪದ ಎಂದರೇನು?
17. ಕೆಳಗಿನ ಪದಗಳಿಗೆ ಯಾವುದಾದರು ನಾಲ್ಕು ಲಕ್ಷಣಗಳನ್ನು ತಿಳಿಸಿ

| | | | |
|---|---|---|---|
| ಅ) ಮನುಷ್ಯ | ಆ) ಕಿವುಡು | ಇ)ಅಸಂತೋಷ | |
| ಈ) ಸೈನ್ಯ | ಉ) ಸೈನಿಕ | ಊ) ಪ್ರಾಮಾಣಿಕತೆ | |
| ಎ) ಸೌಂದರ್ಯ | ಏ) ಪುಸ್ತಕ | ಒ) ಕಾಲೇಜು | ಓ)ಬೆಂಗಳೂರು |

**III. ಐದು ಅಂಕಗಳ ಪ್ರಶ್ನೆಗಳು:**

18. ತರ್ಕವಾಕ್ಯದ ಭಾಗಗಳನ್ನು ಉದಾಹರಣೆಯೊಂದಿಗೆ ವಿವರಿಸಿ
19. ವ್ಯಾಕರಣ ವಾಕ್ಯಕ್ಕೂ ತರ್ಕವಾಕ್ಯಕ್ಕೂ ಇರುವ ವ್ಯತ್ಯಾಸಗಳನ್ನು ತಿಳಿಸಿ

❖ ❖ ❖ ❖ ❖


# ಅಧ್ಯಾಯ - 4

# ತಾರ್ಕಿಕ ವಾಕ್ಯಗಳ ಸಾಂಪ್ರದಾಯಿಕ ವರ್ಗೀಕರಣ

**ಪೀಠಿಕೆ:–**

ವಾಕ್ಯಗಳನ್ನು ತರ್ಕದ ದೃಷ್ಟಿಯಿಂದ ಅದ್ಯಯನ ಮಾಡುವುದಕ್ಕೂ ವ್ಯಾಕರಣ ಶಾಸ್ತ್ರದ ದೃಷ್ಟಿಯಿಂದ ಅಧ್ಯಯನ ಮಾಡುವುದಕ್ಕೂ ವ್ಯಾತ್ಯಾಸವಿದೆ. ವಾಕ್ಯಗಳನ್ನು ಅವುಗಳು ಬಳಸುವ ಉದ್ದೇಶಗಳಿಗೆ ಅನುಸಾರವಾಗಿ ವಸ್ತು ಸ್ಥಿತಿಸೂಚಕ ವಾಕ್ಯಗಳನ್ನು ಬಳಸಿ ಸಾಮಾನ್ಯ ವಾಕ್ಯಗಳನ್ನು ರಚಿಸುತ್ತಾರೆ. ತಾರ್ಕಿಕ ವಾಕ್ಯಗಳು ಸಾಮಾನ್ಯ ವಾಕ್ಯಗಳಿಗಿಂತ ಹೇಗೆ ಭಿನ್ನವಾಗಿರುತ್ತದೆ ಮತ್ತು ತಾರ್ಕಿಕ ವಾಕ್ಯಗಳ ಅರ್ಥ ಮತ್ತು ಸ್ವರೂಪವನ್ನು ತಿಳಿಯುವುದು ಅವಶ್ಯಕ.

**ತಾರ್ಕಿಕ ವಾಕ್ಯಗಳ ವರ್ಗೀಕರಣವನ್ನು ಈ ಕೆಳಕಂಡಂತೆ ಸಂಕ್ಷಿಪ್ತವಾಗಿ ಸೂಚಿಸಬಹುದು.**




**ತರ್ಕವಾಕ್ಯದ ತ್ರಿವಿಧ ವರ್ಗೀಕರಣ:–**

ತರ್ಕವಾಕ್ಯದ ತ್ರಿವಿಧ ವರ್ಗೀಕರಣ ವನ್ನು ಈ ಕೆಳಕಂಡಂತೆ ವರ್ಗೀಕರಿಸಲಾಗಿದೆ.

1) ನಿರುಪಾಧಿಕ/ ನಿರಪೇಕ್ಷ

2) ಕಾಲ್ಪನಿಕ/ ಹೇತ್ವಾಶ್ರಿತ

3) ವೈಕಲ್ಪಿಕ/ ಪರ್ಯಾಯಾತ್ಮಕ

**1) ನಿರುಪಾಧಿಕ / ನಿರಪೇಕ್ಷ ತರ್ಕವಾಕ್ಯ :–**

ಯಾವ ಉಪಾಧಿಗೂ ಒಳಪಡದೆ ಉದ್ದೇಶ ಮತ್ತು ವಿಧೇಯಪದ ಸಂಬಂಧವನ್ನು ನೇರವಾಗಿ, ಖಚಿತವಾಗಿ ಹಾಗೂ ಖಂಡಿತವಾಗಿ ತಿಳಿಸುತ್ತದೆ.

ಉದಾ:– ಎಲ್ಲ ಮಾನವರು ಮರ್ತ್ಯರು

**2) ಕಾಲ್ಪನಿಕ ಹೇತ್ವಾಶ್ರಿತ ತರ್ಕವಾಕ್ಯ:–**

ಇದು ಸೋಪಾಧಿಕ ತರ್ಕವಾಕ್ಯದ ಒಂದು ವಿಧವಾಗಿದ್ದು ಉದ್ದೇಶ ಮತ್ತು ವಿಧೇಯ ಪದದ ಸಂಬಂಧವನ್ನು 'ಆದರೆ–ಇದ್ದರೆ' ಎಂಬ ಉಪಾಧಿಗೆ ಒಳಪಟ್ಟಿದ್ದರೆ ಅದನ್ನು ಕಾಲ್ಪನಿಕ ತರ್ಕವಾಕ್ಯ ಎಂದು ಕರೆಯುತ್ತಾರೆ.

ಉದಾ:–ವಿದ್ಯಾರ್ಥಿಗಳು ಶ್ರಮಪಟ್ಟು ಓದಿದರೆ ಪಾಸಾಗುತ್ತಾರೆ.

**3) ವೈಕಲ್ಪಿಕ / ಪರ್ಯಾಯಾತ್ಮಕ ವಾಕ್ಯ:–**


ಸೋಪಾಧಿಕ ತರ್ಕವಾಕ್ಯದ ಮತ್ತೊಂದು ವಿಧವಾಗಿದ್ದು ಉದ್ದೇಶ ಮತ್ತು ವಿಧೇಯಪದ ಸಂಬಂಧವನ್ನು 'ಅಥವಾ' ಎಂಬ ಪದದ ಮೂಲಕ ತಿಳಿಸುತ್ತದೆ.

ಉದಾ:– ಹಣ್ಣು ಹುಳಿ ಅಥವಾ ಸಿಹಿಯಾಗಿರುತ್ತದೆ.

**ನಿರಪೇಕ್ಷ ತಾರ್ಕಿಕ ವಾಕ್ಯಗಳ ಚತುರ್ವಿಧ ವರ್ಗೀಕರಣ:**

ಪಾಶ್ಚಿಮಾತ್ಯ ತರ್ಕಶಾಸ್ತ್ರಜ್ಞನಾದ ಅರಿಸ್ಟಾಟಲನು ಮೂರು ಅಧಾರಗಳನ್ನು ಬಳಸಿಕೊಂಡು ಸಂಪ್ರದಾಯಿಕ ವರ್ಗೀಕರಣವನ್ನು ಮಾಡಿದ್ದಾರೆ. ಅವುಗಳೆಂದರೆ,

1) ಸಂಬಂಧ 2) ಪರಿಮಾಣ 3) ಗುಣ




**I. ಸಂಬಂಧಾನುಸಾರ ತರ್ಕವಾಕ್ಯದ ವರ್ಗೀಕರಣ:–**

ಉದ್ದೇಶಪದ ಮತ್ತು ವಿಧೇಯಪದಗಳ ನಡುವಿನ ಸಂಬಂಧ ಗಳನ್ನು ಆಧಾರವಾಗಿಟ್ಟುಕೊಂಡು ನಿರುಪಾಧಿಕ ಮತ್ತು ಸಾಪೇಕ್ಷ ತರ್ಕವಾಕ್ಯಗಳೆಂದು ವರ್ಗಿಕರಿಸಲಾಗಿದೆ

**1) ನಿರುಪಾಧಿಕ/ನಿರಪೇಕ್ಷ (CATEGORICAL):**

ತರ್ಕವಾಕ್ಯ ನಿರಪೇಕ್ಷ ತರ್ಕವಾಕ್ಯವು ಯಾವ ಉಪಾಧಿಗೂ ಒಳಪಡದೆ ಉದ್ದೇಶ ಮತ್ತು ವಿಧೇಯ ಪದಗಳ ಸಂಬಂಧವು ನೇರವಾಗಿ ಹೇಳಿದ್ದರೆ ಅದನ್ನು ನಿರಪೇಕ್ಷ ತರ್ಕವಾಕ್ಯ ಎಂದು ಹೆಸರು ಉದ್ದೇಶ ಪದವು ವಿಧೇಯ ಪದವನ್ನು ಸೂಚಿಸದೆ ನಿರಾಕರಿಸುತ್ತದೆ ಎಂದು ಖಚಿತವಾಗಿ ತಿಳಿಸುತ್ತದೆ.

ಉದಾ:– "ಈ ಎಲೆಯು ಹಸಿರಾಗಿದೆ" ಎಂಬ ತರ್ಕವಾಕ್ಯದಲ್ಲಿ ಎಲೆಯು ಹಸಿರು ಬಣ್ಣವನ್ನು ಪಡೆದಿದೆ ಎಂಬುದನ್ನು ಸ್ಪಷ್ಟವಾಗಿ ನೇರವಾಗಿ ಯಾವ ಶರತ್ತುಗಳಿಲ್ಲದೆ ತಿಳಿಸುತ್ತದೆ. "ಈ ಹಣ್ಣು ಪಕ್ವವಾಗಿಲ್ಲ" ಎಂಬ ತರ್ಕವಾಕ್ಯದಲ್ಲಿ ಹಣ್ಣು ಪಕ್ವತೆಯನ್ನು ಪಡೆದಿಲ್ಲವೆಂದು ನೇರವಾಗಿ ಹಾಗೂ ಖಚಿತವಾಗಿ ತಿಳಿಸುತ್ತದೆ.

**2) ಸಾಪೇಕ್ಷ / ಸೋಪಾಧಿಕ (CONDITIONAL) ತಾರ್ಕಿಕ ವಾಕ್ಯ**

ಸಾಪೇಕ್ಷ ತಾರ್ಕಿಕ ವಾಕ್ಯವು ಉದ್ದೇಶ ಹಾಗೂ ವಿಧೇಯದ ನಡುವಿನ ಸಂಬಂಧವು ಒಂದು ಉಪಾಧಿಗೆ ಒಳಪಟ್ಟಿದೆ ಎಂದು ತಿಳಿಸುತ್ತದೆ. ಅಂದರೆ ಯಾವುದಾದರೊಂದು ಉಪಾಧಿಗೆ ಒಳಪಟ್ಟು ಉದ್ದೇಶ ಮತ್ತು ವಿದೇಯವನ್ನು ಪಡೆದಿದೆ ಅಥವಾ ಪಡೆದಿಲ್ಲವೆಂದು ತಿಳಿಸುತ್ತದೆ ಅಂದರೆ ಒಂದು ಷರತ್ತಿಗೆ ಅನುಗುಣವಾಗಿ ಅನುವಾನಗಳನ್ನು ರಚಿಸುತ್ತದೆ. ಸಾಪೇಕ್ಷ ತಾರ್ಕಿಕ ವಾಕ್ಯಗಳನ್ನು ಎರಡು ವಿಧಗಳಾಗಿ ವಿಂಗಡಿಸಲಾಗಿದೆ.ಅವುಗಳೆಂದರೆ:–

A ಕಾಲ್ಪನಿಕ/ ಹೇತ್ವಾಶ್ರೀತ ತಾರ್ಕಿಕ ವಾಕ್ಯ

B ವೈಕಲ್ಪಿಕ / ಪರ್ಯಾಯಾತ್ಮಕ ತಾರ್ಕಿಕ ವಾಕ್ಯ

**A ಕಾಲ್ಪನಿಕ / ಹೇತ್ವಾಶ್ರೀತ ತರ್ಕವಾಕ್ಯ (HYPOTHETICAL)**

ಸಾಪೇಕ್ಷ ತರ್ಕ ವಾಕ್ಯದ ಒಂದು ವಿಧವಾಗಿರುವ ಕಾಲ್ಪನಿಕತಾರ್ಕಿಕ ವಾಕ್ಯವು ಅದು ಒಂದು ಸಂಗತಿಯು ಮತ್ತೊಂದು ಸಂಗತಿಯನ್ನು ಅವಲಂಬಿಸಿದೆ ಅಥಾವ ಉಪಾಧಿಗೆ ಒಳಪಟ್ಟಿದೆ ಎಂದು ತಿಳಿಸುತ್ತದೆ.

ಆದರೆ ..........ಇದ್ದರೆ ಎಂಬ ಉಪಾಧಿಗೆ ಒಳಪಟ್ಟು ಉದ್ದೇಶ ಮತ್ತು ವಿಧೇಯಗಳ ನಡುವಿನ ಸಂಬಂಧವನ್ನು ತಿಳಿಸುವುದಕ್ಕೆ ಕಾಲ್ಪನಿಕ ತಾರ್ಕಿಕ ವಾಕ್ಯ ಎಂದು ಹೆಸರು.

ಕಾಲ್ಪನಿಕ ತರ್ಕವಾಕ್ಯಗಳಲ್ಲಿ ಎರಡು ಭಾಗಗಳಿವೆ ಅವು ಯಾವುವೆಂದರೆ ಪೂರ್ವಾಂಗ ಮತ್ತು ಉತ್ತರಾಂಗ ಉಪಾಧಿಯನ್ನು ಸೂಚಿಸುವ ಭಾಗಕ್ಕೆ ಪೂವಾಂಗವೆಂದು, ಉಪಾದಿಯನ್ನು ಅವಲಂಬಿಸಿರುವ ಭಾಗಕ್ಕೆ ಉತ್ತರಾಂಗವೆಂದು ಹೆಸರು.

ಇದರ ರೂಪಾತ್ಮಕ ಉದಾಹರಣೆಯನ್ನು ಹೀಗೆ ವಿವರಿಸಬಹುದು

ಸಾಂಕೇತಿಕ ಉದಾ:– A ಯು B ಆದರೆ A ಯು C ಆಗುತ್ತದೆ.

ಉದಾ:– ವಿದ್ಯಾರ್ಥಿಗಳು ಶ್ರಮಪಟ್ಟು ಓದಿದರೆ ಪಾಸಾಗುತ್ತಾರೆ ವಿದ್ಯಾರ್ಥಿಗಳು ಶ್ರಮ ಪಟ್ಟರೆ ಎಂಬುದು ಪೂರ್ವಾಂಗವಾಗಿದೆ. ಏಕೆಂದರೆ ಉಪಾಧಿಯನ್ನು ಸೂಚಿಸುತ್ತದೆ ಅವರು ಪಾಸಾಗುತ್ತಾರೆ ಎಂಬುದು ಉತ್ತರಾಂಗವಾಗಿದೆ. ಏಕೆಂದರೆ ಉಪಾದಿಯನ್ನು ಅವಲಂಬಿಸಿದೆ.

**B ವೈಕಲ್ಪಿಕ / ಪಕ್ಷಾಂತರ (DISJUNCTIVE) ತಾರ್ಕಿಕ ವಾಕ್ಯ :–**

ವೈಕಲ್ಪಿಕ ತಾರ್ಕಿಕ ವಾಕ್ಯವು ಸಾಪೇಕ್ಷ ತಾರ್ಕಿಕ ವಾಕ್ಯದ ಮತ್ತೊಂದು ವಿಧವಾಗಿದ್ದು ಇದರಲ್ಲಿ ಉಪಾಧಿಯು ಅಥವಾ, ಇಲ್ಲವೆ ಎಂಬ ವಿಕಲ್ಪಗಳ ಸಹಾಯದಿಂದ ಸೂಚಿತವಾಗುತ್ತದೆ, ವಿಕಲ್ಪಗಳಲ್ಲಿ ಒಂದು ಅನ್ವಯವಾದರೆ ಮತ್ತೊಂದು ಅನ್ವಯ ವಾಗುವುದಿಲ್ಲ ಎಂಬುದು ಸ್ಪಷ್ಟವಾಗಿ ತಿಳಿಯುತ್ತದೆ.

**ಸಾಂಕೇತಿಕ ಉದಾಹರಣೆ:– A ಯು B ಅಥವ C ಆಗುತ್ತದೆ.**

ಉದಾ:– ರೇಖೆಯು ಸರಳ ಅಥವಾ ವಕ್ರವಾಗಿರುತ್ತದೆ ಇಲ್ಲಿ ಉದ್ದೇಶ ಪದ ಅನ್ವಯವಾಗುವ ಎರಡು ವಿಕಲ್ಪಗಳನ್ನು ಉಪಯೋಗಿಸಲಾಗಿದೆ ಇವುಗಳಲ್ಲಿ ಒಂದು ವಿಕಲ್ಪವು ಅನ್ವಯಿಸದಿದ್ದರೆ ಮತ್ತೊಂದು ಅನ್ವಯಿಸುವುದು ಎಂಬ ಸೂಚನೆ ಇದೆ ರೇಖೆಯು ಸರಳವಾಗಿಲ್ಲದಿದ್ದರೆ ವಕ್ರವಾಗಿರುತ್ತದೆ. ವಕ್ರವಾಗಿಲ್ಲದಿದ್ದರೆ ಸರಳವಾಗಿರುತ್ತದೆ.

**II. ಪರಿಮಾಣಾನುಸಾರವಾಗಿ ತರ್ಕವಾಕ್ಯದ ವರ್ಗೀಕರಣ**

ಪರಿಮಾಣಾನುಸಾರವಾಗಿ ತರ್ಕವಾಕ್ಯಗಳನ್ನು ಎರಡು ವಿಧವಾಗಿ ವಿಂಗಡಿಸಲಾಗಿದೆ

ಅವುಗಳೆಂದರೆ

1) ಪೂರ್ಣವ್ಯಾಪಕ

2) ಅಪೂರ್ಣವ್ಯಾಪಕ

**1) ಪೂರ್ಣವ್ಯಾಪಕ ತರ್ಕವಾಕ್ಯ (UNIVERSAL) :-**

ಪೂರ್ಣವ್ಯಾಪಕ ತರ್ಕವಾಕ್ಯದಲ್ಲಿ ವಿಧೇಯವು ಉದ್ದೇಶ ಪದಕ್ಕೆ ಪೂರ್ಣವಾಗಿ ಅನ್ವಯಿಸುತ್ತದೆ ಎಂದು ತಿಳಿಸುತ್ತದೆ.

ಉದಾ:– ಎಲ್ಲಾ ಮಾನವರು ಮರ್ತ್ಯರು ಎಂಬ ತರ್ಕವಾಕ್ಯದಲ್ಲಿ ಮರ್ತ್ಯರು ಎಂಬ ವಿಧೇಯವು ಮಾನವರೆಲ್ಲಾರಿಗೂ ಅನ್ವಯಿಸುತ್ತದೆ ಎಂದು ತಿಳಿಸುತ್ತದೆ.

**2) ಅಪೂರ್ಣವ್ಯಾಪಕ (PARTICULAR) ತರ್ಕವಾಕ್ಯ:–**

ಅಪೂರ್ಣವ್ಯಾಪಕ ತರ್ಕವಾಕ್ಯದಲ್ಲಿ ವಿಧೇಯವು ಉದ್ದೇಶ ಪದದ ಒಂದು ಭಾಗಕ್ಕೆ ಅನ್ವಯಿಸುವುದೆಂದು ತಿಳಿಸುತ್ತದೆ

ಉದಾ:– ಕೆಲವು ವಿದ್ಯಾರ್ಥಿಗಳು ಕ್ರೀಡಾಪ್ರಿಯರು ಈ ತರ್ಕವಾಕ್ಯದಲ್ಲಿ ಕ್ರೀಡಾಪ್ರಿಯತೆ ಕೆಲವು ವಿದ್ಯಾರ್ಥಿಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು ತಿಳಿಸುತ್ತದೆ

**III. ಗುಣಾನುಸಾರವಾಗಿ ತರ್ಕವಾಕ್ಯದ ವರ್ಗೀಕರಣ:–**

ಗುಣಾನುಸಾರವಾಗಿ ತರ್ಕವಾಕ್ಯಗಳನ್ನು ಎರಡು ವಿಧವಾಗಿ ವರ್ಗೀಕರಿಸಲಾಗಿದೆ. ಅವು ಯಾವುದೆಂದರೆ

1) ಭಾವಾತ್ಮಕ

2) ನಿಷೇಧಾತ್ಮಕ.

**1) ಭಾವಾತ್ಮಕ (AFFIRMATIVE)**

ಭಾವಾತ್ಮಕ ತರ್ಕವಾಕ್ಯದಲ್ಲಿ ವಿಧೇಯವು ಉದ್ದೇಶ ಪದಕ್ಕೆ ಅನ್ವಯಿಸುತ್ತದೆ ಎಂದು ತಿಳಿಸುತ್ತದೆ ಅಂದರೆ ಉದ್ದೇಶ ಮತ್ತು ವಿಧೇಯಗಳ ನಡುವೆ ಸಂಬಂಧವಿದೆ ಎಂದು ತಿಳಿಸುತ್ತದೆ.

ಉದಾ:– "ಎಲ್ಲಾ ಮಾನವರು ಮರ್ತ್ಯರು" ತರ್ಕವಾಕ್ಯದಲ್ಲಿ ಮರ್ತ್ಯರು ಎಂಬ ವಿಧೇಯವು ಉದ್ದೇಶ ಪದಕ್ಕೆ ಪೂರ್ಣವಾಗಿ ಅನ್ವಯಿಸುತ್ತದೆ ಎಂದು ತಿಳಿಸುತ್ತದೆ.

ಉದಾ:– ಕೆಲವು ಶಿಕ್ಷಕರು ದಯಾಪರರು ಈ ತರ್ಕವಾಕ್ಯದಲ್ಲಿ ದಯಾಪರರು ಕೆಲವು ಶಿಕ್ಷಕರಿಗೆ ಮಾತ್ರ ಅನ್ವಯಿಸುತ್ತದೆ.

**2) ನಿಷೇಧಾತ್ಮಕ (NEGATIVE):-**

ನಿಷೇಧಾತ್ಮಕತರ್ಕವಾಕ್ಯದಲ್ಲಿ ವಿಧೇಯವು ಉದ್ದೇಶ ಪದಕ್ಕೆ ಅನ್ವಯಿಸುವುದಿಲ್ಲ ವೆಂದು ತಿಳಿಸುತ್ತದೆ. ಅಂದರೆ ಉದ್ದೆಶ ಮತ್ತು ವಿಧೇಯಗಳ ನಡುವೆ ಸಂಬಂದವನ್ನು ನಿರಾಕರಿಸುತ್ತದೆ.

ಉದಾ:– "ಮಾನವರ್ಯಾರು ಪ್ರಾಮಾಣಿಕರಲ್ಲ" ಈ ಉದಾಹರಣೆಯಲ್ಲಿ ಪ್ರಮಾಣಿಕತೆಯು ಯಾವ ಮಾನವರಿಗೂ ಅನ್ವಯಿಸುವುದಿಲ್ಲ ವೆಂದು ತಿಳಿಸುತ್ತದೆ.

ಪರಿಮಾಣಾನುಸಾರವಾಗಿ ತರ್ಕವಾಕ್ಯಗಳನ್ನು ಪೂರ್ಣವ್ಯಾಪಕ ಮತ್ತು ಅಪೂರ್ಣವ್ಯಾಪಕಗಳೆಂದು ವರ್ಗೀಕರಿಸಲಾಗಿದೆ. ಗುಣಾನುಸಾರವಾಗಿ ತರ್ಕವಾಕ್ಯ ಗಳನ್ನು ಭಾವಾತ್ಮಕ ಮತ್ತು ನಿಷೇಧಾತ್ಮಕ ಎಂದು ವರ್ಗೀಕರಿಸಲಾಗಿದೆ. ಈ ವರ್ಗೀಕರಣ ವನ್ನು ಸೇರಿಸಿದರೆ ನಾಲ್ಕು ರೀತಿಯ ತರ್ಕವಾಕ್ಯಗಳು ದೊರೆಯುತ್ತದೆ.

**ಈ ವರ್ಗೀಕರಣವನ್ನು ನಿರುಪಾಧಿಕ ತರ್ಕವಾಕ್ಯದ ಚತುರ್ವಿಧ ವರ್ಗಿಕರಣ** ಎನ್ನುತ್ತಾರೆ.

ಈ ನಾಲ್ಕು ವಿಧವಾದ ತರ್ಕವಾಕ್ಯಗಳು ಯಾವುದೆಂದರೆ

1) ಪೂರ್ಣವ್ಯಾಪಕ ಭಾವಾತ್ಮಕ – A

2) ಪೂರ್ಣವ್ಯಾಪಕ ನಿಷೇಧಾತ್ಮಕ– E

3) ಅಪೂರ್ಣವ್ಯಾಪಕ ಭಾವಾತ್ಮಕ – I

4) ಅಪೂರ್ಣವ್ಯಾಪಕ ನಿಷೇಧಾತ್ಮಕ – O

ಈ ನಾಲ್ಕು ತರ್ಕ ವಾಕ್ಯಗಳಿಗೆ ಕ್ರಮವಾಗಿ A. E. I. O ಸಂಕೇತ ಗಳಿಂದ ಸೂಚಿಸಲಾಗಿದೆ .

**1) ಪೂರ್ಣವ್ಯಾಪಕ ಭಾವಾತ್ಮಕ (A – UNIVERSAL AFFIRMATIVE):**

ಪೂರ್ಣವ್ಯಾಪಕ ಭಾವಾತ್ಮಕ ವಾಕ್ಯಗಳಲ್ಲಿ ಉದ್ದೇಶ ಪದ ಹಾಗೂ ವಿಧೇಯ ಪದಗಳು ಸಂಬಂಧ ಹೊಂದಿರುತ್ತವೆ. ಮತ್ತು ವಿಧೇಯ ಪದ ಇಡೀ ಉದ್ದೇಶ ಪದಕ್ಕೆ ಅನ್ವಯವಾಗುತ್ತದೆ.

ಉದಾ ಎಲ್ಲಾ S ಗಳು P ಗಾಳಾಗಿರುತ್ತವೆ

ಎಲ್ಲಾ ಮಾನವರು ಮರ್ತ್ಯರಾಗಿದ್ದಾರೆ –S. A. P

**2) ಪೂರ್ಣ ವ್ಯಾಪಕ ನಿಷೆಧಾತ್ಮಕ (E – UNIVERSAL NEGATIVE):-**

ಪೂರ್ಣವ್ಯಾಪಕ ನಿಷೇಧಾತ್ಮಕ ವಾಕ್ಯಗಳಲ್ಲಿ ಇಡೀ ವಿಧೇಯ ಪದ ಉದ್ದೇಶ ಪದದ ಜೊತೆ ಸಂಬಂಧ ಹೊಂದಿರುವುದಿಲ್ಲ

ಉದಾ:– ಯಾವ S ಗಳು P ಅಗಿಲ್ಲ

ಯಾವ ಮಾನವರು ಪರಿಪೂರ್ಣರಲ್ಲ – S. E. P

**3) ಅಪೂರ್ಣ ವ್ಯಾಪಕ ಭಾವಾತ್ಮಕ (I – PARTICULAR AFFIRMATIVE) :–**

ಅಪೂರ್ಣವ್ಯಾಪಕ ಭಾವಾತ್ಮಕ ವಾಕ್ಯಗಳಲ್ಲಿ ವಿಧೇಯಪದ ಉದ್ದೇಶ ಪದದ ಭಾಗಕ್ಕೆ ಅನ್ವಯವಾಗುತ್ತದೆ.

ಉದಾ:– ಕೆಲವು S ಗಳು Pಗಳಾಗಿರುತ್ತವೆ.

ಕೆಲವು ವಿದ್ಯಾರ್ಥಿಗಳು ಜಾಣರು – S. I. P

**4) ಅಪೂರ್ಣವ್ಯಾಪಕ ನಿಷೇಧಾತ್ಮಕ (O – PARTICULAR NEGATIVE):-**

ಅಪೂರ್ಣವ್ಯಾಪಕ ನಿಷೇಧಾತ್ಮಕ ವಾಕ್ಯಗಳಲ್ಲಿ ವಿದೇಯಪದ ಉದ್ದೇಶ ಪದದ ಒಂದು ಭಾಗಕ್ಕೆ ಅನ್ವಯವಾಗುವುದಿಲ್ಲ.

ಉದಾ:– ಕೆಲವು S ಗಳು P ಆಗಿಲ್ಲ

ಕೆಲವು ವಿದ್ಯಾರ್ಥಿಗಳು ಸೋಮಾರಿಗಳಲ್ಲ – S. O. P

**ನಿರುಪಾಧಿಕ ತರ್ಕವಾಕ್ಯಗಳಲ್ಲಿ ಪದಗಳ ವ್ಯಾಪ್ತಿ (DISTRIBUTION OF TERMS IN CATEGORICAL PROPOSITIONS):-**

ನಿರುಪಾದಿಕ ತರ್ಕವಾಕ್ಯದಲ್ಲಿ ಪದಗಳ ವ್ಯಾಪ್ತಿಯು ಬಹು ಮುಖ್ಯ ಪಾತ್ರವನ್ನು ನಿರ್ವಹಿಸುತ್ತದೆ. ಒಂದು ನಿರುಪಾಧಿಕ ತರ್ಕವಾಕ್ಯದಲ್ಲಿ ಎರಡು ಪದಗಳಿರುತ್ತವೆ. ಅವುಗಳೆಂದರೆ ಉದ್ದೇಶ ಪದ ಮತ್ತು ವಿಧೇಯ ಪದ. ಉದ್ದೇಶ ಮತ್ತು ವಿಧೇಯ ಪದಗಳ ವಸ್ತು ನಿರ್ದೇಶನಕ್ಕೆ ಪದಗಳ ವ್ಯಾಪ್ತಿ ಎಂದು ಹೆಸರು.

ಒಂದು ಪದದ ವಸ್ತು ನಿರ್ದೇಶನವು ಪೂರ್ಣವಾಗಿದ್ದರೆ ಅದಕ್ಕೆ ವ್ಯಾಪ್ತಿ (✓) ಪದ ಎಂದು ಹೆಸರು. ಒಂದು ಪದದ ವಸ್ತು ನಿರ್ದೇಶನವು ಅಪೂರ್ಣವಾಗಿದ್ದರೆ ಅದಕ್ಕೆ ಅವ್ಯಾಪ್ತಿ (X) ಪದ ಎಂದು ಹೆಸರು. ವ್ಯಾಪ್ತಿಯ ಚಿಹ್ನೆ '✓' ಮತ್ತು ಅವ್ಯಾಪ್ತಿಯ ಚಿಹ್ನೆ 'X'

ನಿರುಪಾದಿಕ ತರ್ಕವಾಕ್ಯದ ವಿಧಗಳಾದ A. E. I. O ತರ್ಕವಾಕ್ಯದಲ್ಲಿ ಯಾವ ಪದ ವ್ಯಾಪ್ತಿ ಮತ್ತು ಯಾವ ಪದ ಅವ್ಯಾಪ್ತಿ ಎಂಬುದನ್ನು ನಾವು ತಿಳಿಯಬೇಕು.

**1. ಪೂರ್ಣವ್ಯಾಪಕ ಭಾವಾತ್ಮಕ ತಾರ್ಕಿಕ ವಾಕ್ಯ – $S^{\checkmark}$ A $P^{x}$**

ಪೂರ್ಣವ್ಯಾಪಕ ಭಾವಾತ್ಮಕ ತಾರ್ಕಿಕ ವಾಕ್ಯದಲ್ಲಿ (A) ಉದ್ದೇಶ ಪದವು ವ್ಯಾಪ್ತಿಯಾಗಿರುತ್ತದೆ ಮತ್ತು ವಿಧೇಯ ಪದವು ಅವ್ಯಾಪ್ತಿವಾಗಿರುತ್ತದೆ.

ಉದಾ:– ಎಲ್ಲಾ ಮಾನವರು ಮರ್ತ್ಯರು $S^{\checkmark}$ A $P^{x}$

ಈ ಉದಾಹರಣೆಯಲ್ಲಿ 'ಮಾನವರು' ಎಂಬ ಉದ್ದೇಶಪದದ ವಸ್ತು ನಿರ್ದೇಶನವನ್ನು ಪೂರ್ಣವಾಗಿ ತೆಗೆದುಕೊಂಡಿರುವುದರಿಂದ ಉದ್ದೇಶಪದ ವ್ಯಾಪ್ತಿಯಾಗಿದೆ.

'ಮರ್ತ್ಯರು' ಎಂಬ ವಿಧೇಯ ಪದದ ವಸ್ತು ನಿರ್ದೇಶನವು ಅಪೂರ್ಣವಾಗಿರುವುದರಿಂದ ಅದು ಅವ್ಯಾಪ್ತಿವಾಗಿದೆ. ಮರ್ತ್ಯರು ಎಂಬ ವಿದೇಯ ಪದವು ಮಾನವರನ್ನು ಹೊರತುಪಡಿಸಿ, ಪ್ರಾಣಿಗಳು ಮತ್ತು ಸಸ್ಯಗಳಿಗೂ ಅನ್ವಯಿಸುತ್ತದೆ.

**2. ಪೂರ್ಣವ್ಯಾಪಕ ನಿಷೇಧಾತ್ಮಕ ತಾರ್ಕಿಕ ವಾಕ್ಯ $S^{\checkmark}$ E $P^{\checkmark}$**

ಪೂರ್ಣವಾಪಕ ನಿಷೇಧಾತ್ಮಕ (E) ತಾರ್ಕಿಕ ವಾಕ್ಯದಲ್ಲಿ ಉದ್ದೇಶ ಪದ ಮತ್ತು ವಿಧೇಯ ಪದಗಳೆರಡೂ ವ್ಯಾಪ್ತಿಯಾಗಿವೆ. ಏಕೆಂದರೆ ಇದು ನಿಷೇಧಾತ್ಮಕವಾಗಿರುವುದರಿಂದ ಎರಡೂ ಪದಗಳು ಒಂದನ್ನೊಂದು ಪ್ರತ್ಯೇಕಿಸುತ್ತವೆ.

ಉದಾ:– ಯಾವ ಮಾನವರೂ ಪರಿಪೂರ್ಣರಲ್ಲ $S^{\checkmark}$ E $P^{\checkmark}$

ಈ ಉದಾಹರಣೆಯಲ್ಲಿ 'ಮಾನವರು' ಎಂಬ ಉದ್ದೇಶ ಪದ ಮತ್ತು 'ಪರಿಪೂರ್ಣ' ಎಂಬ ವಿಧೇಯ ಪದಗಳೆರಡು ಪೂರಕವಾಗಿದ್ದು, ಒಂದನ್ನೊಂದು ಪ್ರತ್ಯೇಕಿಸುತ್ತವೆ.

**3. ಅಪೂರ್ಣವ್ಯಾಪಕ ಭಾವಾತ್ಮಕ ತಾರ್ಕಿಕ ವಾಕ್ಯ – $S^x$ I $P^x$**

ಅಪೂರ್ಣವ್ಯಾಪಕ ಭಾವಾತ್ಮಕ (I) ತಾರ್ಕಿಕ ವಾಕ್ಯದಲ್ಲಿ ಉದ್ದೇಶ ಪದ ಮತ್ತು ವಿಧೇಯ ಪದಗಳೆರಡೂ ಅವ್ಯಾಪ್ತಿವಾಗಿರುತ್ತವೆ. ಕಾರಣವೇನೆಂದರೆ ಎರಡೂ ಪದಗಳ ವಸ್ತು ನಿರ್ದೇಶನ ಅಪೂರ್ಣವಾಗಿರುತ್ತದೆ.

ಉದಾ:– ಕೆಲವು ಮಾನವರು ಪ್ರಾಮಾಣಿಕರು $S^x$ I $P^x$

ಈ ಉದಾಹರಣೆಯಲ್ಲಿ ಉದ್ದೇಶ ಪದವಾದ 'ಮಾನವರು' ಎಂಬುದು ಅಪೂರ್ಣವಾಗಿದೆ ಹಾಗೂ 'ಪ್ರಾಮಾಣಿಕರು' ಎಂಬ ವಿಧೇಯಪದ ಕೆಲವು ಮಾನವರಿಗೆ ಮಾತ್ರ ಅನ್ವಯಿಸುವುದರಿಂದ ಅದು ಅವ್ಯಾಪ್ತವಾಗಿದೆ.

**4. ಅಪೂರ್ಣವ್ಯಾಪಕ ನಿಷೇಧಾತ್ಮಕ ತಾರ್ಕಿಕ ವಾಕ್ಯ – $S^x$ O $P^{\checkmark}$**

ಅಪೂರ್ಣವ್ಯಾಪಕ ನಿಷೇಧಾತ್ಮಕ (O) ತಾರ್ಕಿಕ ವಾಕ್ಯದಲ್ಲಿ ಉದ್ದೇಶ ಪದ ಅವ್ಯಾಪ್ತಿಯಾಗಿರುತ್ತದೆ ಮತ್ತು ವಿಧೇಯಪದ ವ್ಯಾಪ್ತಿಯಾಗಿರುತ್ತದೆ ಏಕೆಂದರೆ ಇದು ನಿಷೇಧಾತ್ಮಕ ತಾರ್ಕಿಕ ವಾಕ್ಯವಾಗಿರುವುದರಿಂದ ಉದ್ದೇಶ ಪದವನ್ನು ನಿರಾಕರಿಸುತ್ತದೆ.

ಉದಾ:– ಕೆಲವು ಮಾನವರು ಸ್ವಾರ್ಥಿಗಳಲ್ಲ – $S^x$ O $P^{\checkmark}$

ಈ ಉದಾಹರಣೆಯಲ್ಲಿ 'ಮಾನವರು ಎಂಬ ಉದ್ದೇಶ ಪದವನ್ನು ಅಪೂರ್ಣವಾಗಿ ತೆಗೆದುಕೊಂಡಿರುವುದರಿಂದ ಅದು ಅವ್ಯಾಪ್ತಿಯಾಗಿದೆ. ವಿಧೇಯ ಪದವಾದ 'ಸ್ವಾರ್ಥಿಗಳು' ಎಂಬುದು ಕೆಲವು 'ಮಾನವರನ್ನು' ನಿರಾಕರಿಸುವುದರಿಂದ ವ್ಯಾಪ್ತಿಯಾಗಿದೆ.

| ತರ್ಕವಾಕ್ಯ | ಉದ್ದೇಶ | ವಿಧೇಯ |
|---|---|---|
| A | ವ್ಯಾಪ್ತಿ | ಅವ್ಯಾಪ್ತಿ |
| E | ವ್ಯಾಪ್ತಿ | ವ್ಯಾಪ್ತಿ |
| I | ಅವ್ಯಾಪ್ತಿ | ಅವ್ಯಾಪ್ತಿ |
| O | ಅವ್ಯಾಪ್ತಿ | ವ್ಯಾಪ್ತಿ |

ನಿರುಪಾಧಿಕ ತರ್ಕ ವಾಕ್ಯಗಲ್ಲಿ ಪದಗಳ ವ್ಯಾಪ್ತಿಯನ್ನು ನೆನಪಿನಲ್ಲಿಡಲು ಈ ಕೆಳಗಿನ ನೆಮೋನಿಕ್ ಪದವನ್ನು ಬಳಸುತ್ತೇವೆ.

**A, S, E, B, I, N, O, P**

A ವಾಕ್ಯದಲ್ಲಿ ಉದ್ದೇಶ ಪದ ವ್ಯಾಪ್ತಿ

E ವಾಕ್ಯದಲ್ಲಿ ಉದ್ದೇಶ ಮತ್ತು ವಿಧೇಯ ಪದಗಳೆರಡೂ ವ್ಯಾಪ್ತಿ

I ವಾಕ್ಯದಲ್ಲಿ ಯಾವ ಪದಗಳೂ ವ್ಯಾಪ್ತಿಯಲ್ಲ.

O ವಾಕ್ಯದಲ್ಲಿ ವಿಧೇಯಪದ ಮಾತ್ರ ವ್ಯಾಪ್ತಿ

ಅವುಗಳು ಈ ಕೆಳಗಿನಂತೆ ಇರುತ್ತವೆ.

**A S** = $S^{\checkmark}$ A $P^{x}$

**E B** = $S^{\checkmark}$ E $P^{\checkmark}$

**I N** = $S^{x}$ I $P^{x}$

**O P** = $S^{x}$ O $P^{\checkmark}$

**ಇವುಗಳನ್ನು ನಾವು ಈ ಕೆಳಗಿನಂತೆ ತೀರ್ಮಾನಿಸಬಹುದು**


1. ಪೂರ್ಣವ್ಯಾಪಕ ತರ್ಕವಾಕ್ಯಗಳಲ್ಲಿ ಉದ್ದೇಶ ಪದ ಮಾತ್ರ ವ್ಯಾಪ್ತಿ
2. ಅಪೂರ್ಣವ್ಯಾಪಕದಲ್ಲಿ ಉದ್ದೇಶ ಪದ ಯಾವಾಗಲೂ ಅವ್ಯಾಪ್ತಿ
3. ನಿಷೇಧಾತ್ಮಕ ವಾಕ್ಯಗಳಲ್ಲಿ ವಿಧೇಯ ಪದ ಯಾವಾಗಲೂ ವ್ಯಾಪ್ತಿ
4. ಭಾವಾತ್ಮಕ ವಾಕ್ಯಗಳಲ್ಲಿ ವಿಧೇಯ ಪದ ಯಾವಾಗಲೂ ಅವ್ಯಾಪ್ತಿ.

**ಯೂಲರ್‌ನ ವೃತ್ತಗಳು**

ಪ್ರಖ್ಯಾತ ಜರ್ಮನ್ ಗಣಿತಜ್ಞ ಮತ್ತು ತರ್ಕಶಾಸ್ತ್ರಜ್ಞನಾದ ಯೂಲರನು ಪದಗಳ ವ್ಯಾಪ್ತಿಯನ್ನು ವೃತ್ತಗಳ ಮೂಲಕ ನಿರೂಪಿಸಿದ್ದಾರೆ.


**1.** ಪೂರ್ಣವ್ಯಾಪಕ ಭಾವಾತ್ಮಕ ತಾರ್ಕಿಕ ವಾಕ್ಯ ತಾ 'A' ತಾರ್ಕಿಕ ವ್ಯಾಕ್ಯ

ಎಲ್ಲ ಮಾನವರು ಮರ್ತ್ಯರು





ಉದ್ದೇಶ ಪದವಾದ 'ಮಾನವರು' ಎಂಬ ಚಿಕ್ಕ ವೃತ್ತವು ಪೂರ್ಣವಾಗಿ 'ಮರ್ತ್ಯರು' ಎಂಬ ದೊಡ್ಡ ವೃತ್ತದಲ್ಲಿ ಸೇರಿದೆ.

**2.** ಪೂರ್ಣ ವ್ಯಾಪಕ ನಿಷೇಧಾತ್ಮಕ 'E' ತಾರ್ಕಿಕ ವಾಕ್ಯ





"ಯಾವ ಮಾನವರು ಪರಿಪೂರ್ಣರಲ್ಲ" ಇಲ್ಲಿ ಉದ್ದೇಶ ಮತ್ತು ವಿಧೇಯ ಪದಗಳನ್ನು ನಿರೂಪಿಸುವ ಎರಡು ವೃತ್ತಗಳು ಪೂರ್ಣವಾಗಿ ಒಂದನ್ನೊಂದು ಪ್ರತ್ಯೇಕಿಸುತ್ತವೆ. ವೃತ್ತಗಳು ಎಂದಿಗೂ ಸೇರುವುದಿಲ್ಲ. ಇಲ್ಲಿ ಎರಡು ಪದಗಳೂ ವ್ಯಾಪ್ತಿಯಾಗಿರುತ್ತವೆ.

**3.** ಅಪೂರ್ಣ ವ್ಯಾಪಕ ಭಾವಾತ್ಮಕ 'I' ತಾರ್ಕಿಕ ವಾಕ್ಯ 3




ಉದಾ:– "ಕೆಲವು ಮಾನವರು ಬುದ್ದಿವಂತರು" ಈ ತರ್ಕವಾಕ್ಯದಲ್ಲಿ ಎರಡು ಪದಗಳು ಅವ್ಯಾಪ್ತಿಯಾಗಿರುತ್ತದೆ. ಏಕೆಂದರೆ ಇಲ್ಲಿ ಉದ್ದೇಶ ಪದವನ್ನು ನಿರೂಪಿಸುವ ವೃತ್ತವು ವಿಧೇಯ ಪದವನ್ನು ನಿರೂಪಿಸುವ ವೃತ್ತವನ್ನು ಸೇರಿದೆ. ಆ ಸೇರಿರುವ ಭಾಗವು ಕೆಲವು ಬುದ್ದಿವಂತ ಮನುಷ್ಯರನ್ನು ಸೂಚಿಸುತ್ತದೆ.

**4.** ಅಪೂರ್ಣವ್ಯಾಪಕ ನಿಷೇಧಾತ್ಮಕ '"O" ತಾರ್ಕಿಕ ವಾಕ್ಯ




ಉದಾ:_ ಕೆಲವು ಮನುಷ್ಯರು ಸ್ವಾರ್ಥಿಗಳಲ್ಲ" ಈ ಏಕಾಂತ ವಾಕ್ಯದಲ್ಲಿ ಉದ್ದೇಶ ಪದ ಅವ್ಯಾಪ್ತವಾಗಿರುತ್ತದೆ. ಮತ್ತು ವಿಧೇಯ ಪದವು ವ್ಯಾಪ್ತಿಯಾಗಿರುತ್ತದೆ. ಇಲ್ಲಿ ಕಪ್ಪಾದ ಭಾಗದ ವೃತ್ತವು ವಿಧೇಯ ಪದದ ವೃತ್ತವನ್ನು ಪೂರ್ಣವಾಗಿ ಪ್ರತ್ಯೇಕಿಸುತ್ತದೆ. ಅದು ಪ್ರಮಾಣಿಕರಲ್ಲದ ಮನುಷ್ಯರನ್ನು ಸೂಚಿಸುತ್ತದೆ. ಇಲ್ಲಿ ಪ್ರಮಾಣಿಕತೆಯ ಕೆಲವು ಮನುಷ್ಯರಿಗೆ ನಿರಾಕರಿಸಲಾಗತ್ತದೆ.

❖ ❖ ❖ ❖ ❖

## ಮಾದರಿ ಪ್ರಶ್ನೆಗಳು.

**ಒಂದು ಅಂಕದ ಪ್ರಶ್ನೆಗಳು.**

1. ತರ್ಕವಾಕ್ಯ ಎಂದರೇನು?
2. ತಾರ್ಕಿಕ ವಾಕ್ಯದ ವರ್ಗೀಕರಣದ ಆಧಾರವನ್ನು ತಿಳಿಸಿ.
3. ನಿರುಪಾಧಿಕ ತರ್ಕವಾಕ್ಯ ಎಂದರೇನು?
4. ಸಾಪೇಕ್ಷ ತರ್ಕವ್ಯಾಕ್ಯ ಎಂದರೇನು?
5. ವ್ಯಾಪ್ತಿಯನ್ನು ನಿರೂಪಿಸಿ.
6. ಅವ್ಯಾಪ್ತಿಯನ್ನು ನಿರೂಪಿಸಿ
7. ನೆಮೊನಿಕ್ ಪದವನ್ನು ಬರೆಯಿರಿ.
8. ವ್ಯಾಪ್ತಿಯ ಚಿಹ್ನೆಯನ್ನು ಬರೆಯಿರಿ.
9. ಅವ್ಯಾಪ್ತಿಯ ಚಿಹ್ನೆಯನ್ನು ಬರೆಯಿರಿ.

10. A ವಾಕ್ಯದಲ್ಲಿ ಯೂಲರನ ವ್ಯಾಪ್ತಿಯನ್ನು ತಿಳಿಸಿ.
11. ಭಾವಾತ್ಮಕ ಎಂದರೇನು?
12. ನಿಷೇಧಾತ್ಮಕ ಎಂದರೇನು?
13. ಪೂರ್ಣವ್ಯಾಪಕ ಎಂದರೇನು
14. ಅಪೂರ್ಣವ್ಯಾಪಕ ಎಂದರೇನು?

**ಎರಡು ಅಂಕದ ಪ್ರಶ್ನೆಗಳು**

15. ನಿರಪೇಕ್ಷ ತರ್ಕವ್ಯಾಕ್ಯ ಎಂದರೇನು? ಉದಾ ಕೊಡಿ.
16. ಸಾಪೇಕ್ಷ ವಾಕ್ಯದ ಎರಡು ವಿಧಗಳನ್ನು ಬರೆಯಿರಿ.
17. ಕಾಲ್ಪನಿಕ ವಾಕ್ಯ ಎಂದರೇನು? ಉದಾ.ಕೊಡಿ.
18. ವೈಕಲ್ಪಿಕ ವಾಕ್ಯ ಎಂದರೇನು? ಉದಾ.ಕೊಡಿ.
19. A.E.I.O. ಗಳನ್ನು ವಿಸ್ತರಿಸಿ.
20. ವ್ಯಾಪ್ತಿ & ಅವ್ಯಾಪ್ತಿಯನ್ನು ನಿರೂಪಿಸಿ.

**ಐದು ಅಂಕದ ಪ್ರಶ್ನೆಗಳು**

21. ತರ್ಕ ವಾಕ್ಯದ ತ್ರಿವಿಧ ವರ್ಗೀಕರಣವನ್ನು ಉದಾಹರಣೆಯೊಂದಿಗೆ ವಿವರಿಸಿ.
22. ತಾರ್ಕಿಕ ವಾಕ್ಯಗಳನ್ನು ಯಾವ ಆಧಾರದ ಮೇಲೆ ವರ್ಗೀಕರಿಸಲಾಗಿದೆ, ವಿವರಿಸಿ.

**ಹತ್ತು ಅಂಕದ ಪ್ರಶ್ನೆಗಳು**


23. ನಿರಪೇಕ್ಷ ತಾರ್ಕಿಕ ವಾಕ್ಯದ ಚತುರ್ವಿಧ ವರ್ಗೀಕರಣವನ್ನು ವಿವರಿಸಿ.
24. ನಿರಪೇಕ್ಷ ತಾರ್ಕಿಕ ಪದಗಳ ವ್ಯಾಪ್ತಿ & ಅವ್ಯಾಪ್ತಿಯನ್ನು ವಿವರಿಸಿ.

❖ ❖ ❖ ❖ ❖

# ಅಧ್ಯಾಯ - 5

**ನಿಗಮನ ಅನುಮಾನದ ವಿಧಗಳು (KINDS OF DEDUCTIVE INFERENCE)**

ನಿಗಮನ ಅನುಮಾನದಲ್ಲಿ ನಮ್ಮ ವಿಚಾರವು ಸಾಮಾನ್ಯ ಸಂಗತಿಯಿಂದ ಪ್ರಾರಂಭಿಸಿ ಪ್ರತ್ಯೇಕ ಸಂಗತಿಯತ್ತ ಸಾಗುತ್ತದೆ. ಆದ್ದರಿಂದ ನಿರ್ಣಯ ವಾಕ್ಯದ ವ್ಯಾಪ್ತಿಯು ಆಧಾರ ವ್ಯಾಕ್ಯದ ವ್ಯಾಪ್ತಿಗಿಂತ ಕಡಿಮೆ ವಿಸ್ತಾರವನ್ನು ಹೊಂದಿರುತ್ತದೆ.




**ನಿಗಮನ ಅನುಮಾನದ ಎರಡು ವಿಧಗಳು:–**

ಅ) ಪ್ರತ್ಯಕ್ಷ ಅನುಮಾನ / ಅವ್ಯವಹಿತ ಅನುಮಾನ

ಆ) ಅಪ್ರತ್ಯಕ್ಷ ಅನುಮಾನ / ತ್ರಿವಾಕ್ಯಾನುಮಾನ


ಅ) ಪ್ರತ್ಯಕ್ಷ ಅನುಮಾನ (Immediate Inference):

ಪ್ರತ್ಯಕ್ಷ ಅನುಮಾನವು ನಿಗಮನ ಅನುಮಾನದ ಒಂದು ರೂಪ. ಪ್ರತ್ಯಕ್ಷ ಅನುಮಾನದಲ್ಲಿ ಒಂದೇ ಒಂದು ಗೃಹೀತವಾಕ್ಯದ ಆಧಾರದಿಂದ ನಿರ್ಣಯವಾಕ್ಯವನ್ನು ಊಹಿಸುತ್ತೇವೆ. ಅವ್ಯವಹಿತ ಅನುಮಾನದಲ್ಲಿ ತಾರ್ಕಿಕ ವಾಕ್ಯಗಳ ವಿರೋಧ ಸಂಬಂಧ ಮತ್ತು ನಿಷ್ಕರ್ಷಣ ಎಂಬ ಎರಡು ವಿಧಗಳಿವೆ.

**ತಾರ್ಕಿಕ ವಾಕ್ಯಗಳ ವಿರೋಧ ಸಂಬಂಧ (OPPOSITION OF PROPOSITION):**

ತಾರ್ಕಿಕವಾಕ್ಯಗಳ ವಿರೋಧ ಸಂಬಂಧವು ಪ್ರತ್ಯಕ್ಷ ಅನುಮಾನದ ಒಂದು ರೂಪ. ಎರಡು ನಿರಪೇಕ್ಷ ತಾರ್ಕಿಕವಾಕ್ಯಗಳು ಒಂದೇ ಉದ್ದೇಶಪದ ಮತ್ತು ಒಂದೇ ವಿಧೇಯಪದಗಳನ್ನು ಹೊಂದಿದ್ದು, ಗುಣದಲ್ಲಿ ಅಥವಾ ಪರಿಮಾಣದಲ್ಲಿ ಅಥವಾ ಗುಣ ಮತ್ತು ಪರಿಮಾಣ ಎರಡರಲ್ಲಿಯೂ ವ್ಯತ್ಯಾಸ ಹೊಂದಿದ್ದರೆ ಅದನ್ನು **ತಾರ್ಕಿಕವಾಕ್ಯಗಳ**

**ವಿರೋಧಸಂಬಂಧ** ಎನ್ನುತ್ತಾರೆ. ತಾರ್ಕಿಕವಾಕ್ಯಗಳ ವಿರೋಧ ಸಂಬಂಧವನ್ನು ಒಂದು ಚೌಕದ ಮೂಲಕ ತೋರಿಸಬಹುದು. ಈ ಚೌಕವನ್ನು **'ತರ್ಕ ವಾಕ್ಯಗಳ ವಿರೋಧ ಸಂಬಂಧದ ಚೌಕ'** ಎನ್ನುತ್ತಾರೆ.




**ನಾಲ್ಕು ವಿಧದ ವಿರೋಧ ಸಂಬಂಧಗಳು ಕೆಳಗಿನಂತಿವೆ:–**

1. ಅಧೀನ ವಿರೋಧ / ಉಪಾಶ್ರಿತ ವಿರೋಧ ಸಂಬಂಧ – AI ಮತ್ತು EO ಗಳ ನಡುವೆ
2. ಅತ್ಯಂತ ವಿರೋಧ / ವಿಪರೀತ ವಿರೋಧ ಸಂಬಂಧ – AE ಗಳ ನಡುವೆ
3. ಉಪ ವಿರೋಧ/ ಅನು ವಿಪರೀತ ವಿರೋಧ ಸಂಬಂಧ – IO ಗಳ ನಡುವೆ
4. ವ್ಯಾಘಾತಕ ವಿರೋಧ ಸಂಬಂಧ / ಮಿತ ವಿರೋಧ – AO ಮತ್ತು EI ಗಳ ನಡುವೆ

**1. ಅಧೀನ ವಿರೋಧ ಸಂಬಂಧ :**

ಎರಡು ನಿರಪೇಕ್ಷ ತಾರ್ಕಿಕ ವಾಕ್ಯಗಳು ಒಂದೇ ಉದ್ದೇಶ ಪದ ಮತ್ತು ವಿಧೇಯ ಪದಗಳನ್ನು ಹೊಂದಿದ್ದು, ಗುಣದಲ್ಲಿ ಒಂದೇ ಆಗಿದ್ದು ಪರಿಮಾಣದಲ್ಲಿ ವ್ಯತ್ಯಾಸ ಹೊಂದಿದ್ದರೆ ಅದನ್ನು **ಅಧೀನ ವಿರೋಧ** ಸಂಬಂಧ ಎನ್ನುತ್ತಾರೆ.

AI ಮತ್ತು EO ಗಳ ನಡುವಿನ ಸಂಬಂಧ:

E – ಯಾವ ಮಾನವರು ಮರ್ತ್ಯರಲ್ಲ

O – ಕೆಲವು ಮಾನವರು ಮರ್ತ್ಯರಲ್ಲ

A – ಎಲ್ಲ ಮಾನವರು ಮರ್ತ್ಯರು

I – ಕೆಲವು ಮಾನವರು ಮರ್ತ್ಯರು

**ನಿಯಮಗಳು:**

**ಅ) ಪೂರ್ಣವ್ಯಾಪಕ ವಾಕ್ಯದ ಸತ್ಯತೆಯು ಅಪೂರ್ಣವ್ಯಾಪಕ ವಾಕ್ಯದ ಸತ್ಯತೆಯನ್ನು ತಿಳಿಸುತ್ತದೆ. ಆದರೆ ವಿರುದ್ದವಾಗಿ ಅಲ್ಲ.**

A ಸತ್ಯವಾಗಿದ್ದರೆ, I ಸತ್ಯವಾಗಿರುತ್ತದೆ.

E ಸತ್ಯವಾಗಿದ್ದರೆ, O ಸತ್ಯವಾಗಿರುತ್ತದೆ.

A ಅಸತ್ಯವಾಗಿದ್ದರೆ, I ಸಂಶಯಾಸ್ಪದವಾಗಿರುತ್ತದೆ

E ಅಸತ್ಯವಾಗಿದ್ದರೆ, O ಸಂಶಯಾಸ್ಪದವಾಗಿರುತ್ತದೆ

**ಆ) ಅಪೂರ್ಣವ್ಯಾಪಕವಾಕ್ಯದ ಅಸತ್ಯತೆಯು ಪೂರ್ಣವ್ಯಾಪಕವಾಕ್ಯದ ಅಸತ್ಯತೆಯನ್ನು ತಿಳಿಸುತ್ತದೆ. ಆದರೆ ವಿರುದ್ಧವಾಗಿ ಅಲ್ಲ.**

I ಅಸತ್ಯವಾಗಿದ್ದರೆ, Aಅಸತ್ಯವಾಗಿರುತ್ತದೆ.

O ಅಸತ್ಯವಾಗಿದ್ದರೆ, E ಅಸತ್ಯವಾಗಿರುತ್ತದೆ.

I ಸತ್ಯವಾಗಿದ್ದರೆ, A ಸಂಶಯಾಸ್ಪದವಾಗಿರುತ್ತದೆ

O ಸತ್ಯವಾಗಿದ್ದರೆ, E ಸಂಶಯಾಸ್ಪದವಾಗಿರುತ್ತದೆ

2. **ಅತ್ಯಂತ ವಿರೋಧ ಸಂಬಂಧ:**

ಎರಡು ಪೂರ್ಣವ್ಯಾಪಕತಾರ್ಕಿಕ ವಾಕ್ಯಗಳು ಒಂದೇ ಉದ್ದೇಶಪದ ಮತ್ತು ಪರಿಮಾಣದಲ್ಲಿ ಒಂದೇ ಆಗಿದ್ದು ಗುಣದಲ್ಲಿ ಮಾತ್ರ ವ್ಯಾತ್ಯಾಸ ಹೊಂದಿದ್ದರೆ ಅವುಗಳ ನಡುವಿನ ಸಂಬಂಧವನ್ನು **ಅತ್ಯಂತ ವಿರೋಧ** ಸಂಬಂಧ ಎನ್ನುತ್ತಾರೆ. AEಗಳ ನಡುವಿನ ಸಂಬಂಧ

**ಉದಾ:** A – ಎಲ್ಲ ಮಾನವರು ಮರ್ತ್ಯರು

E – ಯಾವ ಮಾನವರು ಮರ್ತ್ಯರಲ್ಲ

**ನಿಯಮ:**

**ಒಂದು ವಾಕ್ಯದ ಸತ್ಯತೆಯು ಇನ್ನೊಂದರ ಅಸತ್ಯತೆಯನ್ನು ತಿಳಿಸುತ್ತದೆ. ಆದರೆ ವಿರುದ್ಧವಾಗಿ ಅಲ್ಲ.**

A ಸತ್ಯವಾಗಿದ್ದರೆ, E ಅಸತ್ಯವಾಗಿರುತ್ತದೆ

E ಸತ್ಯವಾಗಿದ್ದರೆ, A ಅಸತ್ಯವಾಗಿರುತ್ತದೆ

A ಅಸತ್ಯವಾಗಿದ್ದರೆ, E ಸಂಶಯಾಸ್ಪದವಾಗಿರುತ್ತದೆ

E ಅಸತ್ಯವಾಗಿದ್ದರೆ, A ಸಂಶಯಾಸ್ಪದವಾಗಿರುತ್ತದೆ

3. **ಉಪ ವಿರೋಧ ಸಂಬಂಧ:**

ಎರಡು ಅಪೂರ್ಣವ್ಯಾಪಕ ತಾರ್ಕಿಕ ವಾಕ್ಯಗಳು ಒಂದೇ ಉದ್ದೇಶಪದ ಮತ್ತು ವಿಧೇಯ ಪದಗಳನ್ನು ಹೊಂದಿದ್ದು ಗುಣದಲ್ಲಿ ಮಾತ್ರ ವ್ಯತ್ಯಾಸ ಹೊಂದಿದ್ದರೆ ಅವುಗಳ ನಡುವಿನ ಸಂಬಂಧವನ್ನು **ಉಪವಿರೋಧ ಸಂಬಂಧ** ಎನ್ನುವರು IO ಗಳ ನಡುವಿನ ಸಂಬಂಧ

**ಉದಾ:** I – ಕೆಲವು ಮಾನವರು ಮರ್ತ್ಯರು,

O – ಕೆಲವು ಮಾನವರು ಮರ್ತ್ಯರಲ್ಲ.

**ನಿಯಮ:**

**ಒಂದು ವಾಕ್ಯದ ಅಸತ್ಯತೆಯು ಇನ್ನೊಂದರ ಸತ್ಯತೆಯನ್ನು ತಿಳಿಸುತ್ತವೆ. ಅಂದರೆ ವಿರುದ್ಧವಾಗಿ ಅಲ್ಲ.**

I ಅಸತ್ಯವಾಗಿದ್ದರೆ, O ಸತ್ಯವಾಗಿರುತ್ತದೆ

O ಅಸತ್ಯವಾಗಿದ್ದರೆ, I ಸತ್ಯವಾಗಿರುತ್ತದೆ

I ಸತ್ಯವಾಗಿದ್ದರೆ, O ಸಂಶಯಾಸ್ಪದವಾಗಿರುತ್ತದೆ

O ಸತ್ಯವಾಗಿದ್ದರೆ, I ಸಂಶಯಾಸ್ಪದವಾಗಿರುತ್ತದೆ

4. **ವ್ಯಾಘಾತಕ ವಿರೋಧ ಸಂಬಂಧ**

ಎರಡು ನಿರಪೇಕ್ಷ ತಾರ್ಕಿಕ ವಾಕ್ಯಗಳು ಒಂದೇ ಉದ್ದೇಶ ಪದ ಮತ್ತು ವಿಧೇಯ ಪದಗಳನ್ನು ಹೊಂದಿದ್ದು ಗುಣ ಮತ್ತು ಪರಿಮಾಣ ಎರಡರಲ್ಲಿಯೂ ವ್ಯತ್ಯಾಸ ಹೊಂದಿದ್ದರೆ ಅವುಗಳ ನಡುವಿನ ಸಂಬಂಧವನ್ನು **ವ್ಯಾಘಾತಕ ವಿರೋಧ ಸಂಬಂಧ** ಎನ್ನುವರು. AO ಮತ್ತು EI ಗಳ ನಡುವಿನ ಸಂಬಂಧ.

**ಉದಾ:** A – ಎಲ್ಲ ಮಾನವರು ಮರ್ತ್ಯರು

O – ಕೆಲವು ಮಾನವರು ಮರ್ತ್ಯರಲ್ಲ

E – ಯಾವ ಮಾನವರು ಮರ್ತ್ಯರಲ್ಲ

I – ಕೆಲವು ಮಾನವರು ಮರ್ತ್ಯರು

**ನಿಯಮ**

**ಒಂದು ವಾಕ್ಯದ ಸತ್ಯತೆಯು ಇನ್ನೊಂದರ ಅಸತ್ಯತೆಯನ್ನು ತಿಳಿಸುತ್ತದೆ ಮತ್ತು ಒಂದರ ಅಸತ್ಯತೆಯು ಇನ್ನೊಂದರ ಸತ್ಯತೆಯನ್ನು ತಿಳಿಸುತ್ತದೆ.**

A ಸತ್ಯವಾಗಿದ್ದರೆ, O ಅಸತ್ಯವಾಗಿರುತ್ತದೆ

A ಅಸತ್ಯವಾಗಿದ್ದರೆ, O ಸತ್ಯವಾಗಿರುತ್ತದೆ

O ಸತ್ಯವಾಗಿದ್ದರೆ, A ಅಸತ್ಯವಾಗಿರುತ್ತದೆ

O ಅಸತ್ಯವಾಗಿದ್ದರೆ, A ಸತ್ಯವಾಗಿರುತ್ತದೆ

E ಸತ್ಯವಾಗಿದ್ದರೆ, I ಅಸತ್ಯವಾಗಿರುತ್ತದೆ

E ಅಸತ್ಯವಾಗಿದ್ದರೆ, I ಸತ್ಯವಾಗಿರುತ್ತದೆ

I ಸತ್ಯವಾಗಿದ್ದರೆ, E ಅಸತ್ಯವಾಗಿರುತ್ತದೆ

I ಅಸತ್ಯವಾಗಿದ್ದರೆ, E ಸತ್ಯವಾಗಿರುತ್ತದೆ

| | A | E | I | O A ಸತ್ಯವಾದಾಗ |
|---|---|---|---|---|
| A ಅಸತ್ಯವಾದಾಗ<br>E ಅಸತ್ಯವಾದಾಗ | ____________<br>____________ | ಅಸತ್ಯ ಸಂಶಯಾಸ್ಪದ | ಸತ್ಯ ಸಂಶಯಾಸ್ಪದ | ಅಸತ್ಯ<br>ಸತ್ಯ |
| E ಸತ್ಯವಾದಾಗ<br>E ಅಸತ್ಯವಾದಾಗ | ಅಸತ್ಯ ಸಂಶಯಾಸ್ಪದ | ____________<br>____________ | ಅಸತ್ಯ<br>ಸತ್ಯ | ಸತ್ಯ ಸಂಶಯಾಸ್ಪದ |
| I ಸತ್ಯವಾದಾಗ<br>I ಅಸತ್ಯವಾದಾಗ | ಸಂಶಯಾಸ್ಪದ ಅಸತ್ಯ | ಅಸತ್ಯ<br>ಸತ್ಯ | ____________<br>____________ | ಸಂಶಯಾಸ್ಪದ ಸತ್ಯ |
| O ಸತ್ಯವಾದಾಗ<br>O ಅಸತ್ಯವಾದಾಗ | ಅಸತ್ಯ<br>ಸತ್ಯ | ಸಂಶಯಾಸ್ಪದ ಅಸತ್ಯ | ಸಂಶಯಾಸ್ಪದ ಅಸತ್ಯ | ____________<br>____________ |

**ನಿಷ್ಕರ್ಷಣ / ವಿವಕ್ಷಿತ ಅನುಮಾನ** (Eduction):

ವಿವಕ್ಷಿತ ಅನುಮಾನವು ಅವ್ಯವಹಿತ ಅನುಮಾನದ ಒಂದು ರೂಪ. ವಿವಕ್ಷಿತ ಅನುಮಾನದಲ್ಲಿ ನಾವು ಕೊಟ್ಟಿರುವ ವಾಕ್ಯವು ಸತ್ಯವೆಂದು ಒಪ್ಪಿಕೊಂಡು ಅರ್ಥದಲ್ಲಿ ಬದಲಾವಣೆ ಮಾಡದೆ ಉದ್ದೇಶ ಪದ ಅಥವಾ ವಿಧೇಯಪದ ಅಥವಾ ಎರಡರಲ್ಲಿಯೂ ವ್ಯತ್ಯಾಸವನ್ನು ಹೊಂದಿರುವ ಇನ್ನೊಂದು ವಾಕ್ಯವನ್ನು ಪಡೆಯುತ್ತೇವೆ.

1. **ಪರಿವರ್ತನೆ**
2. **ಪ್ರತಿವರ್ತನೆ**

**1. ಪರಿವರ್ತನೆ:**

ಪರಿವರ್ತನೆಯು ಪ್ರತ್ಯಕ್ಷ ಅನುಮಾನದ ಒಂದು ರೂಪ ಪರಿವರ್ತನೆಯಲ್ಲಿ ಉದ್ದೇಶ ಪದ ಮತ್ತು ವಿಧೇಯ ಪದಗಳ ಸ್ಥಾನಪಲ್ಲಟ ಮಾಡಿ ನಿರ್ಣಯವಾಕ್ಯವನ್ನು ಊಹಿಸುತ್ತೇವೆ. 'S-P' ಎನ್ನುವುದು ಉದ್ದೇಶಪದ ಮತ್ತು ವಿಧೇಯ ಪದಗಳ ಸ್ಥಾನಪಲ್ಲಟವಾಗಿ 'P-S' ಎಂದಾಗುತ್ತದೆ.

ಪರಿವರ್ತನೆಯಲ್ಲಿ ಪರಿವರ್ತಿಸಬೇಕಾದ ಗೃಹೀತ ವಾಕ್ಯವನ್ನು **'ಪರಿವರ್ತ್ಯ'** ಎಂದು ಕರೆಯುತ್ತಾರೆ. ಮತ್ತು ನಿರ್ಣಯ ವಾಕ್ಯವನ್ನು ಪರಿವರ್ತಿತ ಎನ್ನುತ್ತಾರೆ.

**ಪರಿವರ್ತನೆಯ ನಿಯಮಗಳು:**

1. ಪರಿವರ್ತ್ಯವಾಕ್ಯದ ಉದ್ದೇಶಪದವು ಪರಿವರ್ತಿತವಾಕ್ಯದ ವಿಧೇಯಪದವಾಗುತ್ತದೆ.
2. ಪರಿವರ್ತ್ಯವಾಕ್ಯದ ವಿಧೇಯ ಪದವು ಪರಿವರ್ತಿತವಾಕ್ಯದ ಉದ್ದೇಶಪದವಾಗುತ್ತದೆ.
3. ಪರಿವರ್ತಿತವಾಕ್ಯದ ಗುಣವು ಪರಿವರ್ತ್ಯವಾಕ್ಯದ ಗುಣವೇ ಆಗಿರಬೇಕು. ಪರಿವರ್ತ್ಯವಾಕ್ಯವು ಭಾವಾತ್ಮಕವಾಗಿದ್ದರೆ ಪರಿವರ್ತಿತವಾಕ್ಯವು ಭಾವಾತ್ಮಕವಾಗಿರಬೇಕು ಮತ್ತು ಪರಿವರ್ತ್ಯವಾಕ್ಯವು ನಿಷೇಧಾತ್ಮಕವಾಗಿದ್ದರೆ ಪರಿವರ್ತಿತವಾಕ್ಯವು ನಿಷೇಧಾತ್ಮಕವಾಗಿರಬೇಕು.
4. ಪರಿವರ್ತ್ಯವಾಕ್ಯದಲ್ಲಿ ಅವ್ಯಾಪ್ತವಾಗಿರುವ ಪದವನ್ನು ಪರಿವರ್ತಿತವಾಕ್ಯದಲ್ಲಿ ವ್ಯಾಪ್ತಗೊಳಿಸಬಾರದು.

ಈ ನಿಯಮಗಳಲ್ಲಿ ಯಾವುದೇ ಒಂದು ನಿಯಮವನ್ನು ಉಲ್ಲಂಘಿಸಿದರೂ ಅಸಮಂಜಸ ಪರಿವರ್ತನೆ ದೋಷವು ಉಂಟಾಗುತ್ತದೆ.

**ವಾಕ್ಯದ ಪರಿವರ್ತನೆ:** A ತಾರ್ಕಿಕ ವಾಕ್ಯದ ಪರಿವರ್ತನೆ I ತಾರ್ಕಿಕ ವಾಕ್ಯವಾಗುತ್ತದೆ

ಪರಿವರ್ತ್ಯ – ಎಲ್ಲ ಮಾನವರು ಮರ್ತ್ಯರು – $\overset{\checkmark}{S}A\overset{x}{P}$

ಪರಿವರ್ತಿತ – ಎಲ್ಲ ಮರ್ತ್ಯರು ಮಾನವರು – $\overset{3}{P}A\overset{x}{S}$

(ಅಸಮಂಜಸ ಪರಿವರ್ತನೆ. 4ನೇ ನಿಯಮದ ಉಲ್ಲಂಘನೆ)

ಪರಿವರ್ತ್ಯದಲ್ಲಿ ವಿಧೇಯಪದವು ಅವ್ಯಾಪ್ತವಾಗಿದೆ. ಆದರೆ ಪರಿವರ್ತಿತದಲ್ಲಿ ವ್ಯಾಪ್ತವಾಗಿದೆ. ಆದ್ದರಿಂದ A ತಾರ್ಕಿಕ ವಾಕ್ಯವನ್ನು A ತಾರ್ಕಿಕ ವಾಕ್ಯಕ್ಕೆ ಪರಿವರ್ತಿಸಲು ಸಾಧ್ಯವಿಲ್ಲ ಪರಿವರ್ತನೆಯ ಎಲ್ಲ ನಿಯಮಗಳನ್ನು ಪಾಲಿಸಿಕೊಂಡು I ತಾರ್ಕಿಕ ವಾಕ್ಯಕ್ಕೆ ಪರಿವರ್ತಿಸುತ್ತೇವೆ.

ಪರಿವರ್ತ್ಯ – ಎಲ್ಲ ಮಾನವರು ಮರ್ತ್ಯರು – $\overset{\checkmark}{S}A\overset{x}{P}$

ಪರಿವರ್ತಿತ – ಕೆಲವು ಮರ್ತ್ಯರು ಮಾನವರು – $\overset{x}{P}I\overset{x}{S}$

**E ವಾಕ್ಯದ ಪರಿವರ್ತನೆ:**

ಪರಿವರ್ತ್ಯ – ಯಾವ ಮಾನವರೂ ಮರ್ತ್ಯರಲ್ಲ – $\overset{\checkmark}{S}E\overset{\checkmark}{P}$

ಪರಿವರ್ತಿತ – ಯಾವ ಮರ್ತ್ಯರು ಮಾನವರಲ್ಲ – $\overset{\checkmark}{P}E\overset{\checkmark}{S}$

**I ವಾಕ್ಯದ ಪರಿವರ್ತನೆ:**

ಪರಿವರ್ತ್ಯ – ಕೆಲವು ಮಾನವರು ಮರ್ತ್ಯರು – $\overset{x}{S}I\overset{x}{P}$

ಪರಿವರ್ತಿತ – ಕೆಲವು ಮರ್ತ್ಯರು ಮಾನವರು – $\overset{x}{P}I\overset{x}{S}$

**O ತಾರ್ಕಿಕ ವಾಕ್ಯವನ್ನು ಪರಿವರ್ತಿಸಲು ಸಾಧ್ಯವಿಲ್ಲ.** Oತಾರ್ಕಿಕ ವಾಕ್ಯವು ನಿಷೇಧಾತ್ಮಕವಾದ್ದರಿಂದ ಮೂರನೇ ನಿಯಮದ ಪ್ರಕಾರ ಪರಿವರ್ತಿತವೂ ಕೂಡ ನಿಷೇಧಾತ್ಮಕವಾಗಿರಬೇಕು. ಆಗ ಪರಿವರ್ತಿತದ ವಿದೇಯ ಪದವು ವ್ಯಾಪ್ತವಾಗುತ್ತದೆ. ಪರಿವರ್ತಿತದ ವಿದೇಯಪದವು ವ್ಯಾಪ್ತವಾಗಬಾರದು ಏಕೆಂದರೆ ಪರಿವರ್ತ್ಯದಲ್ಲಿ ಇದು ಉದ್ದೇಶಪದವಾಗಿರುವುದರಿಂದ ಅವ್ಯಾಪ್ತವಾಗಿರುತ್ತದೆ. ಆದ್ದರಿಂದ ಪರಿವರ್ತ್ಯವು O ತಾರ್ಕಿಕ ವಾಕ್ಯವಾದರೆ, ನಿರ್ಣಯವನ್ನು ಊಹಿಸಲು ಸಾಧ್ಯವಿಲ್ಲ (4 ನೇ ನಿಯಮದ ಉಲ್ಲಂಘನೆ).

ಪರಿವರ್ತ್ಯ – ಕೆಲವು ಮಾನವರು ಮರ್ತ್ಯರಲ್ಲ – $\overset{x}{S}O\overset{3}{P}$

ಪರಿವರ್ತಿತ – ಕೆಲವು ಮರ್ತ್ಯರು ಮಾನವರಲ್ಲ – $\overset{x}{P}O\overset{3}{S}$

[ನಾಲ್ಕನೇ ನಿಯಮದ ಉಲ್ಲಂಘನೆ]

ಪರಿವರ್ತ್ಯ – ಕೆಲವು ಮಾನವರು ಮರ್ತ್ಯರಲ್ಲ – $\overset{x}{S}O\overset{3}{P}$

ಪರಿವರ್ತಿತ – ಯಾವ ಮರ್ತ್ಯರು ಮಾನವರಲ್ಲ – $\overset{x}{P}O\overset{3}{S}$

[ನಾಲ್ಕನೇ ನಿಯಮದ ಉಲ್ಲಂಘನೆ]

ತಪ್ಪು ಪರಿವರ್ತನೆ.

| **ಪರಿವರ್ತ್ಯ** | **ಪರಿವರ್ತಿತ** |
|---|---|
| SAP ⟶ | $\overset{x}{P}I\overset{x}{S}$ |
| SEP ⟶ | $\overset{\checkmark}{P}E\overset{\checkmark}{S}$ |
| SIP ⟶ | $\overset{x}{P}I\overset{x}{S}$ |
| SOP ⟶ | ಪರಿವರ್ತಿಸಲು ಸಾಧ್ಯವಿಲ್ಲ |

**ಪರಿವರ್ತನೆಯ ವಿಧಗಳು.**

**ಪರಿವರ್ತನೆಯಲ್ಲಿ ಎರಡು ವಿಧಗಳಿವೆ.**

A] ಸರಳ ಪರಿವರ್ತನೆ

B] ತಾತ್ಕಾಲಿಕ ಪರಿವರ್ತನೆ / ಮಿತವಾದ ಪರಿವರ್ತನೆ.

**A] ಸರಳ ಪರಿವರ್ತನೆ/ [Simple Conversion] :**

ಪರಿವರ್ತಿತದ ಪರಿಮಾಣವು ಪರಿವರ್ತ್ಯದ ಪರಿಣಾಮದಂತೆಯೇ ಇದ್ದರೆ ಅದನ್ನು ಸರಳ ಪರಿವರ್ತನೆ ಎನ್ನುತ್ತಾರೆ. ಪರಿವರ್ತ್ಯವು ಪೂರ್ಣವ್ಯಾಪಕವಾಗಿದ್ದರೆ, ಪರಿವರ್ತಿತವೂ ಪೂರ್ಣವ್ಯಾಪಕವಾಗಿರುತ್ತದೆ. ಪರಿವರ್ತ್ಯವು ಅಪೂರ್ಣವ್ಯಾಪಕವಾಗಿದ್ದರೆ, ಪರಿವರ್ತಿತವೂ ಅಪೂರ್ಣವ್ಯಾಪಕವಾಗಿರುತ್ತದೆ. E ಮತ್ತು I ತಾರ್ಕಿಕವಾಕ್ಯಗಳು ಸರಳ ಪರಿವರ್ತನೆಗೊಳ್ಳುತ್ತವೆ.

**B] ತಾತ್ಕಾಲಿಕ ಪರಿವರ್ತನೆ/ ಮಿತವಾದ ಪರಿವರ್ತನೆ [Conversion per Accidens] :**

ಪರಿವರ್ತಿತದ ಪರಿಮಾಣವು ಪರಿವರ್ತ್ಯದ ಪರಿಣಾಮಕ್ಕಿಂತ ಬೇರೆ ಇದ್ದರೆ ಅದನ್ನು ತಾತ್ಕಾಲಿಕ ಪರಿವರ್ತನೆ ಎನ್ನುತ್ತಾರೆ. A ತಾರ್ಕಿಕವಾಕ್ಯದಲ್ಲಿ ಪರಿವರ್ತ್ಯವು ಪೂರ್ಣವ್ಯಾಪಕವಾಗಿರುತ್ತದೆ ಆದರೆ ಪರಿವರ್ತಿತವು ಅಪೂರ್ಣವ್ಯಾಪಕವಾಗಿರುತ್ತದೆ. ಆದ್ದರಿಂದ A ತಾರ್ಕಿಕ ವಾಕ್ಯವು ತಾತ್ಕಾಲಿಕ ಪರಿವರ್ತನೆಯನ್ನು ಹೊಂದುತ್ತದೆ. A ತಾರ್ಕಿಕ ವಾಕ್ಯವನ್ನು I ತಾರ್ಕಿಕ ವಾಕ್ಯಕ್ಕೆ ಪರಿವರ್ತಿಸಲಾಗುತ್ತದೆ.

**2. ಪ್ರತಿವರ್ತನೆ [Obversion]**

ಪ್ರತಿವರ್ತನೆಯು ಅವ್ಯವಹಿತ ಅನುಮಾನದ ಒಂದು ರೂಪ. ಇಲ್ಲಿ ನಾವು ಕೊಟ್ಟ ವಾಕ್ಯದಿಂದ ನಿರ್ಣಯ ವಾಕ್ಯವನ್ನು ಊಹಿಸುವಾಗ, ಅರ್ಥದಲ್ಲಿ ಬದಲಾಗದಂತೆ ಕೊಟ್ಟ ವಾಕ್ಯದ ಗುಣವನ್ನು ನಿರ್ಣಯ ವಾಕ್ಯದಲ್ಲಿ ಬದಲಾಯಿಸುತ್ತೇವೆ.

ಪ್ರತಿವರ್ತನೆಯಲ್ಲಿ ಕೊಟ್ಟಿರುವ ವಾಕ್ಯವನ್ನು **'ಪ್ರತಿವರ್ತ್ಯ'**– ಎಂದು ಕರೆಯುತ್ತಾರೆ. ನಿರ್ಣಯ ವಾಕ್ಯವನ್ನು **'ಪ್ರತಿವರ್ತಿತ'** ಎಂದು ಕರೆಯುತ್ತಾರೆ.

**ಪ್ರತಿವರ್ತನೆಯ ನಿಯಮಗಳು.**

1. ಪ್ರತಿವರ್ತ್ಯ ವಾಕ್ಯದ ಉದ್ದೇಶ ಪದವು ಪ್ರತಿವರ್ತಿತ ವಾಕ್ಯದ ಉದ್ದೇಶ ಪದವೇ ಆಗಿರಬೇಕು.
2. ಪ್ರತಿವರ್ತಿತವಾಕ್ಯದ ವಿದೇಯಪದವು ಪ್ರತಿವರ್ತವಾಕ್ಯದ ವಿದೇಯ ಪದದ ವ್ಯಾಘಾತಕ ರೂಪವಾಗಿರಬೇಕು. [ಪ್ರತಿವರ್ತಿತ ವಿದೇಯ ಪದಕ್ಕೆ [Non '_'] ಪದವನ್ನು ಸೇರಿಸಬೇಕು.]
3. ಪ್ರತಿವರ್ತ್ಯ ವಾಕ್ಯದ ಗುಣವು ಪ್ರತಿವರ್ತಿತ ಗುಣಕ್ಕೆ ವಿರುದ್ಧವಾಗಿರಬೇಕು ಅಂದರೆ, ಪ್ರತಿವರ್ತವು ಭಾವಾತ್ಮಕವಾಗಿದ್ದರೆ, ಪ್ರತಿವರ್ತಿತವು ನಿಷೇಧಾತ್ಮಕವಾಗಿರಬೇಕು. ಪ್ರತಿವರ್ತಿತವು ನಿಷೇಧಾತ್ಮಕವಾಗಿದ್ದರೆ, ಪ್ರತಿವರ್ತಿತವು ಭಾವಾತ್ಮಕವಾಗರಬೇಕು.
4. ಪ್ರತಿವರ್ತ್ಯವಾಕ್ಯವು ಪರಿಮಾಣವು ಪ್ರತಿವರ್ತಿತ ವಾಕ್ಯದ ಪರಿಮಾಣದಂತೆಯೇ ಇರಬೇಕು. ಪ್ರತಿವರ್ತವು ಪೂರ್ಣ ವ್ಯಾಪಕವಾಗಿದ್ದರೆ, ಪ್ರತಿ ವಾಕ್ಯವೂ ಪೂರ್ಣ ವ್ಯಾಪಕವಾಗಿರಬೇಕು. ಪ್ರತಿವರ್ತವಾಕ್ಯವು ಅಪೂರ್ಣವ್ಯಾಪಕವಾಗಿದ್ದರೆ, ಪ್ರತಿವರ್ತಿತ ವಾಕ್ಯವೂ ಕೂಡ ಅಪೂರ್ಣವಾಗಿರಬೇಕು.

**A. ತಾರ್ಕಿಕ ವಾಕ್ಯದ ಪ್ರತಿವರ್ತನೆ:**

ಪ್ರತಿವರ್ತ್ಯ – ಎಲ್ಲಾ ಮಾನವರು ಮರ್ತ್ಯರು – SAP

ಪ್ರತಿವರ್ತಿತ –ಯಾವ ಮಾನವರು ಅಮರ್ತ್ಯರಲ್ಲ – $SE\overline{P}$

**E ವಾಕ್ಯದ ಪ್ರತಿವರ್ತನೆ:**

ಪ್ರತಿವರ್ತ್ಯ – ಯಾವ ಮಾನವರು ಮರ್ತ್ಯರಲ್ಲ – SEP

ಪ್ರತಿವರ್ತಿತ – ಎಲ್ಲಾ ಮಾನವರು ಅಮರ್ತ್ಯರು – $SA\overline{P}$

**I ವಾಕ್ಯದ ಪ್ರತಿವರ್ತನೆ:**

ಪ್ರತಿವರ್ತ್ಯ - ಕೆಲವು ಮಾನವರು ಮರ್ತ್ಯರು – SIP

ಪ್ರತಿವರ್ತಿತ – ಕೆಲವು ಮಾನವರು ಅಮರ್ತ್ಯರಲ್ಲ– $SO\overline{P}$

**O ವಾಕ್ಯದ ಪ್ರತಿವರ್ತನೆ:**

ಪ್ರತಿವರ್ತ್ಯ – ಕೆಲವು ಮಾನವರು ಮರ್ತ್ಯರಲ್ಲ – SOP

ಪ್ರತಿವರ್ತಿತ – ಕೆಲವು ಮಾನವರು ಅಮರ್ತ್ಯರು – $SI\overline{P}$

| ಪ್ರತಿವರ್ತ | ಪ್ರತಿವರ್ತಿತ |
|---|---|
| SAP | $SE\overline{P}$ |
| SEP | $SA\overline{P}$ |
| SIP | $SO\overline{P}$ |
| SOP | $SI\overline{P}$ |

## ಮಾದರಿ ಪ್ರಶ್ನೆಗಳು

**ಒಂದು ಅಂಕದ ಪ್ರಶ್ನೆಗಳು:**

1. ಪ್ರತ್ಯಕ್ಷ ಅನುಮಾನ ಎಂದರೇನು?
2. ಪರಿವರ್ತ್ಯ ಎಂದರೇನು?
3. ಪರಿವರ್ತಿತ ಎಂದರೇನು?
4. ಪ್ರತಿವರ್ತ ಎಂದರೇನು?
5. ಪ್ರತಿವರ್ತಿತ ಎಂದರೇನು?

**ಎರಡು ಅಂಕದ ಪ್ರಶ್ನೆಗಳು:**

6. ತಾರ್ಕಿಕ ವಾಕ್ಯಗಳ ವಿರೋಧ ಸಂಬಂಧ ಎಂದರೇನು?
7. ಅತ್ಯಂತ ವಿರೋಧ ಎಂದರೇನು?
8. ಉಪ ವಿರೋಧವನ್ನು ನಿರೂಪಿಸಿ.
9. ನಿಷ್ಕರ್ಷಣ ಎಂದರೇನು?
10. ಪರಿವರ್ತನೆ ಎಂದರೇನು?
11. ಪ್ರತಿವರ್ತನೆ ಎಂದರೇನು?

**ಐದು ಅಂಕದ ಪ್ರಶ್ನೆಗಳು:**

12. ಅಧೀನ ವಿರೋಧ ಸಂಬಂಧವನ್ನು ವಿವರಿಸಿ.
13. ಪರಿವರ್ತನೆಯ ನಿಯಮಗಳನ್ನು ಬರೆಯಿರಿ.
14. ತಾರ್ಕಿಕ ವಾಕ್ಯವನ್ನು ಪರಿವರ್ತಿಸಲು ಸಾಧ್ಯವಿಲ್ಲ. ವಿವರಿಸಿ
15. ಪ್ರತಿವರ್ತನೆಯ ನಿಯಮಗಳನ್ನು ಬರೆಯಿರಿ.

**ಹತ್ತು ಅಂಕದ ಪ್ರಶ್ನೆಗಳು:**

16. ತಾರ್ಕಿಕ ವಾಕ್ಯಗಳ ವಿರೋಧ ಸಂಬಂಧಗಳನ್ನು ಚೌಕದ ಸಹಾಯದೊಂದಿಗೆ ವಿವರಿಸಿ.
17. AEIO ತಾರ್ಕಿಕ ವಾಕ್ಯಗಳನ್ನು ನಿಯಮಗಳೊಂದಿಗೆ ಪರಿವರ್ತಿಸಿ ಮತ್ತು ಪ್ರತಿವರ್ತಿಸಿ

**ಬಿ. ಅಪ್ರತ್ಯಕ್ಷ/ ವ್ಯವಹಿತ ಅನುಮಾನ/ ತ್ರಿವಾಕ್ಯಾನುಮಾನ [Mediate Inference/ Syllogism]:**

ವ್ಯವಹಿತ ಅನುಮಾನವು ನಿಗಮನ ಅನುಮಾನದ ಮತ್ತೊಂದು ರೂಪ. ಅಪ್ರತ್ಯಕ್ಷ ಅನುಮಾನದಲ್ಲಿ ಎರಡು ಗೃಹಿತವಾಕ್ಯಗಳ ಪರಸ್ಪರ ಸಂಬಂಧದ ಆಧಾರದಿಂದ ನಿರ್ಣಯ ವಾಕ್ಯವನ್ನು ಊಹಿಸುತ್ತವೆ.

ಉದಾ : ಎಲ್ಲಾ ಮಾನವರು ಪ್ರಾಮಾಣಿಕರು.

ಸಾಕ್ರಟೀಸ್ ಒಬ್ಬ ಮಾನವ.

∴ ಸಾಕ್ರಟೀಸ್ ಪ್ರಾಮಾಣಿಕ.

**ವ್ಯವಹಿತ ಅನುಮಾನದ / ತ್ರಿವಾಕ್ಯಾನುಮಾನದ ವಿಧಗಳು**

1. ನಿರಪೇಕ್ಷ ವ್ಯವಹಿತ ಅನುಮಾನ.
2. ಕಾಲ್ಪನಿಕ ವ್ಯವಹಿತ ಅನುಮಾನ.
3. ವೈಕಲ್ಪಿಕ ವ್ಯವಹಿತ ಅನುಮಾನ.

**1. ನಿರಪೇಕ್ಷ / ನಿರೂಪಾಧಿಕ ವ್ಯವಹಿತ ಅನುಮಾನ / ತ್ರಿವಾಕ್ಯಾನುಮಾನ [Categorical Sylogism]:**

ನಿರಪೇಕ್ಷ ವ್ಯವಹಿತ ಅನುಮಾನವು ಅಪ್ರತ್ಯಕ್ಷ ಅನುಮಾನದ ಒಂದು ರೂಪ. ನಿರಪೇಕ್ಷ ವ್ಯವಹಿತ ಅನುಮಾನದಲ್ಲಿ ಎರಡು ಆಧಾರ ವಾಕ್ಯಗಳಿಂದ ನಿರ್ಣಯ ವಾಕ್ಯವನ್ನು ಪಡೆಯುತ್ತೇವೆ. ಇದು ನಿಗಮನ ಅನುಮಾನದ ಒಂದು ರೂಪವಾದ್ದರಿಂದ ನಿರ್ಣಯವಾಕ್ಯದ ವ್ಯಾಪ್ತಿಯು ಆಧಾರವಾಕ್ಯದ ವ್ಯಾಪ್ತಿಗಿಂತ ಕಡಿಮೆ ವಿಸ್ತಾರವಾಗಿರುತ್ತದೆ. ನಿರಪೇಕ್ಷ ವ್ಯವಹಿತ ಅನುಮಾನದ ಗುರಿ ಕೇವಲ ರೂಪಾತ್ಮಕ ಸತ್ಯವನ್ನು ಸ್ಥಾಪಿಸುವುದಾಗಿರುತ್ತದೆ.

ನಿರಪೇಕ್ಷ ತ್ರಿವಾಕ್ಯಾನುಮಾನವನ್ನು **'ಶುದ್ಧ ವ್ಯವಹಿತ'** ಅನುಮಾನ ಎಂದು ಕರೆಯುತ್ತಾರೆ. ಏಕೆಂದರೆ ಇಲ್ಲಿ ಮೂರು ತಾರ್ಕಿಕ ವಾಕ್ಯಗಳು ಒಂದೇ ರೂಪದ್ದಾಗಿರುತ್ತವೆ, ಅಂದರೆ ಮೂರು ವಾಕ್ಯಗಳು ನಿರಪೇಕ್ಷ ತಾರ್ಕಿಕ ವಾಕ್ಯಗಳಾಗಿರುತ್ತವೆ.

**ತ್ರಿವಾಕ್ಯಾನುಮಾನದ ರಚನೆ:**

ನಿರಪೇಕ್ಷ ತ್ರಿವಾಕ್ಯಾನುಮಾನವು ಮೂರು ವಾಕ್ಯಗಳನ್ನು ಹೊಂದಿರುತ್ತದೆ. ಕೊಟ್ಟಿರುವ ಎರಡು ವಾಕ್ಯಗಳನ್ನು ಆಧಾರ ವಾಕ್ಯಗಳು/ ಗೃಹೀತ ವಾಕ್ಯಗಳು ಎನ್ನುತ್ತಾರೆ. ಆಧಾರ ವಾಕ್ಯಗಳಿಂದ ಊಹಿಸಿದ ವಾಕ್ಯವನ್ನು ನಿರ್ಣಯವಾಕ್ಯ ಎನ್ನುತ್ತಾರೆ. ಒಂದುತರ್ಕವಾಕ್ಯವು ಎರಡು ತರ್ಕ ಪದಗಳನ್ನು ಹೊಂದಿರುತ್ತದೆ. ಒಂದು ತ್ರಿವಾಕ್ಯನುಮಾನವು ಮೂರು ವಾಕ್ಯಗಳನ್ನು ಹೊಂದಿರುವುದರಿಂದ ಒಟ್ಟು ಆರು ಪದಗಳು ಇರುತ್ತವೆ. ಆದರೆ ನಾವು ಸೂಕ್ಷ್ಮವಾಗಿ ಗಮನಿಸಿದಾಗ ಅವು ಆರು ಬೇರೆ ಬೇರೆ ಪದಗಳನ್ನು ಹೊಂದಿರುವುದಿಲ್ಲ. ಮೂರೇ ಪದಗಳಿರುತ್ತವೆ. ಪ್ರತಿಯೊಂದು ಎರಡು ಬಾರಿ ಬಂದಿರುತ್ತವೆ. ಈ ಮೂರು ಪದಗಳಿಗೂ ಪ್ರತ್ಯೇಕ ಹೆಸರುಗಳನ್ನು ಹೊಡಲಾಗಿದೆ. ನಿರ್ಣಯವಾಕ್ಯದ ವಿಧೇಯ ಪದವನ್ನು **"ಸಾಧ್ಯಪದ"** ಎನ್ನುತ್ತಾರೆ ಇದನ್ನು **'P'** ಅಕ್ಷರದಿಂದ ಸೂಚಿಸುತ್ತಾರೆ. ನಿರ್ಣಯ ವಾಕ್ಯದ ಉದ್ದೇಶ ಪದವನ್ನು **'ಪಕ್ಷಪದ'** ಎನ್ನುತ್ತಾರೆ. ಇದನ್ನು **'S'** ಅಕ್ಷರದಿಂದ ಸೂಚಿಸುತ್ತಾರೆ. ಎರಡೂ ಗೃಹೀತ ವಾಕ್ಯಗಳಲ್ಲೂ ಬಂದಿದ್ದು, ನಿರ್ಣಯ ವಾಕ್ಯದಲ್ಲಿ ಬಂದಿರದೆ ಇರುವ ಪದವನ್ನು **"ಮಧ್ಯಮ ಪದ"** ಎನ್ನುತ್ತಾರೆ. ಇದನ್ನು **'M'** ಅಕ್ಷರದಿಂದ ಸೂಚಿಸುತ್ತಾರೆ. ಮಧ್ಯಮಪದವು ಸಾಧ್ಯಪದಕ್ಕೂ ಮತ್ತು ಪಕ್ಷಪದಕ್ಕೂ ಸಂಬಂಧವನ್ನು ಕಲ್ಪಿಸುತ್ತದೆ. ಯಾವ ಗೃಹಿತ ವಾಕ್ಯದಲ್ಲಿ ಸಾಧ್ಯಪದವು ಬಂದಿರುತ್ತದೆಯೋ ಅದನ್ನು ಸಾಧ್ಯವಾಕ್ಯ ಎನ್ನುತ್ತಾರೆ.

ಯಾವ ಗೃಹೀತ ವಾಕ್ಯದಲ್ಲಿ ಪಕ್ಷಪದವು ಬಂದಿರುತ್ತದೆಯೋ ಅದನ್ನು ಪಕ್ಷ ವಾಕ್ಯ ಎನ್ನುತ್ತಾರೆ. ಮೂರನೆಯ ವಾಕ್ಯವು ನಿರ್ಣಯ ವಾಕ್ಯ. ಸಾಧ್ಯ ವಾಕ್ಯದಲ್ಲಿ ಸಾಧ್ಯಪದವನ್ನು ಮಧ್ಯಮಪದದೊಂದಿಗೆ ಹೋಲಿಸಲಾಗುತ್ತದೆ. ಪಕ್ಷವಾಕ್ಯದಲ್ಲಿ ಪಕ್ಷಪದವನ್ನು ಮಧ್ಯಮ ಪದದೊಂದಿಗೆ ಹೋಲಿಸಲಾಗುತ್ತದೆ. ನಿರ್ಣಯ ವಾಕ್ಯದಲ್ಲಿ ಸಾಧ್ಯಪದಕ್ಕೂ ಮತ್ತು ಪಕ್ಷಪದಕ್ಕೂ ಸಂಬಂಧ ಏರ್ಪಡುತ್ತದೆ.

M P

**ಉದಾ:** ಎಲ್ಲಾ ಮಾನವರು ಮರ್ತ್ಯರು – ಸಾಧ್ಯ ವಾಕ್ಯ

S M

ಎಲ್ಲಾ ರಾಜರು ಮಾನವರು – ಪಕ್ಷವಾಕ್ಯ

S P

∴ ಎಲ್ಲಾ ರಾಜರು ಮರ್ತ್ಯರು – ನಿರ್ಣಯ ವಾಕ್ಯ

**ನಿರಪೇಕ್ಷ ವ್ಯವಹಿತ ಅನುಮಾನದ ನಿಯಮಗಳು ಮತ್ತು ದೋಷಗಳು : [Rules and fallacis]:**

**ನಿಯಮ I – ವ್ಯವಹಿತ ಅನುಮಾನವು ಮೂರು ಮತ್ತು ಕೇವಲ ಮೂರೇ ಪದಗಳನ್ನು ಹೊಂದಿರಬೇಕು.**

**ಸಾಧನೆ: –** ತ್ರಿವಾಕ್ಯಾನುಮಾನವು ಮೂರು ಪದಗಳನ್ನು ಹೊಂದಿರುತ್ತದೆ. ಸಾಧ್ಯಪದ, ಪಕ್ಷಪದ ಮತ್ತು ಮಧ್ಯಮ ಪದ, ಪ್ರತಿಯೊಂದು ಎರಡು ಭಾರಿ ತ್ರಿವಾಕ್ಯಾನುಮಾನದಲ್ಲಿ ಬಂದಿರುತ್ತದೆ.

ಈ ನಿಯಮದ ಉಲ್ಲಂಘನೆಯು **'ನಾಲ್ಕು ಪದಗಳ ದೋಷ' [Fallacy of four terms]** ಮತ್ತು **'ದ್ವಂದ್ವಾರ್ಥ ಪದ ದೋಷ' ಗಳಿಗೆ [Fallacy of equivocation] ಗುರಿಯಾಗುತ್ತದೆ.**

**ಉದಾ :** ನನ್ನ ಕೈ ಮೇಜನ್ನು[2] ಮುಟ್ಟಿದೆ

ಮೇಜು[3] ನೆಲವನ್ನು ಮುಟ್ಟಿದೆ[4].

∴ ನನ್ನ ಕೈ ನೆಲವನ್ನು ಮುಟ್ಟಿದೆ

ಈ ವಾದದಲ್ಲಿ ನಾಲ್ಕು ಪದಗಳಿವೆ– ನನ್ನ ಕೈ, ಮೇಜು, ಮೇಜು, ನೆಲ ಆದ್ದರಿಂದ ಈ ವಾದವು ಅಸಮಂಜಸವಾಗಿದೆ. ಈ ವಾದಲ್ಲಿ **"ನಾಲ್ಕು ಪದಗಳ ದೋಷ"**ವು ಉಂಟಾಗಿದೆ.

ದ್ವಂದ್ವಾರ್ಥಪದ ದೋಷ ಎಂದರೆ ನಿರಪೇಕ್ಷ ತ್ರಿವಾಕ್ಯಾನುಮಾನದಲ್ಲಿ ಯಾವುದಾದರೂ ಒಂದು ಪದವು ದ್ವಂದ್ವಾರ್ಥದಲ್ಲಿ ಬಳಸಲ್ಪಟ್ಟಿರುವುದು.

**ದ್ವಂದ್ವಾರ್ಥ ಪದ ದೋಷದಲ್ಲಿ ಮೂರು ವಿಧಗಳಿವೆ.**

A. ದ್ವಂದ್ವಾರ್ಥ ಸಾಧ್ಯಪದ ದೋಷ.

B. ದ್ವಂದ್ವಾರ್ಥ ಪಕ್ಷಪದ ದೋಷ.

C. ದ್ವಂದ್ವಾರ್ಥ ಮಧ್ಯಮಪದ ದೋಷ.

**A. ದ್ವಂದ್ವಾರ್ಥ ಸಾಧ್ಯಪದ ದೋಷ [Fallacy of Ambigious Major]:**

ತ್ರಿವಾಕ್ಯಾನುಮಾನದಲ್ಲಿ ಸಾಧ್ಯಪದವು ಸಾಧ್ಯವಾಕ್ಯದಲ್ಲಿ ಒಂದು ಅರ್ಥದಲ್ಲಿ ಬಳಸಲ್ಪಟ್ಟಿದ್ದು, ನಿರ್ಣಯ ವಾಕ್ಯದಲ್ಲಿ ಇನ್ನೊಂದು ಅರ್ಥದಲ್ಲಿ ಬಳಸಲ್ಪಟ್ಟಾಗ **"ದ್ವಂದ್ವಾರ್ಥ ಸಾಧ್ಯಪದ ದೋಷ"**ವು ಉಂಟಾಗುತ್ತದೆ.

M P
ಕಾವ್ಯ ರಚಿಸುವವರು ಅರ್ಥಕ್ಕೆ ಗಮನಕೊಡುತ್ತಾರೆ.
S M
ಸಂನ್ಯಾಸಿಗಳಲ್ಲಿ ಕೆಲವರು ಕಾವ್ಯರಚಿಸುವವರಿದ್ದಾರೆ.
S P
∴ ಸಂನ್ಯಾಸಿಗಳಲ್ಲಿ ಕೆಲವರು ಅರ್ಥಕ್ಕೆ ಗಮನ ಕೊಡುತ್ತಾರೆ.

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇದು **'ದ್ವಂದ್ವಾರ್ಥ ಸಾಧ್ಯಪದ ದೋಷ'**ಕ್ಕೆ ಗುರಿಯಾಗಿದೆ. ತ್ರಿವಾಕ್ಯಾನುಮಾನದ ಒಂದನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

ಈ ವಾದದಲ್ಲಿ ಸಾಧ್ಯವಾಕ್ಯದಲ್ಲಿ ಸಾಧ್ಯಪದವಾದ 'ಅರ್ಥ' ಎನ್ನುವುದು ಕಾವ್ಯದ ಅರ್ಥ ಎಂದೂ, ನಿರ್ಣಯ ವಾಕ್ಯದಲ್ಲಿ ಸಾಧ್ಯಪದವಾದ **'ಅರ್ಥ'** ಎನ್ನುವುದು ಹಣ/ ಸಂಪತ್ತು ಎನ್ನುವ ಅರ್ಥದಲ್ಲಿ ಬಳಸಲ್ಪಟ್ಟಿದೆ.

**B. ದ್ವಂದ್ವಾರ್ಥ ಪಕ್ಷಪದ ದೋಷ [Fallacy of Ambigious Minor]:**

ತ್ರಿವಾಕ್ಯಾನುಮಾನದಲ್ಲಿ ಪಕ್ಷಪದವು ಪಕ್ಷವಾಕ್ಯದಲ್ಲಿ ಒಂದು ಅರ್ಥದಲ್ಲಿ ಬಳಸಲ್ಪಟ್ಟಿದ್ದು, ನಿರ್ಣಯ ವಾಕ್ಯದಲ್ಲಿ ಇನ್ನೊಂದು ಅರ್ಥದಲ್ಲಿ ಬಳಸಲ್ಪಟ್ಟಿದ್ದರೆ ಆಗ ಪಕ್ಷಪದ ದ್ವಂದ್ವಾರ್ಥ ದೋಷವು ಉಂಟಾಗುತ್ತದೆ.

M P
ಪರಮೌಷಧವು ಕಾಯಿಲೆಯನ್ನು ಗುಣಪಡಿಸುತ್ತದೆ.

S M
ಲಂಘನವು ಪರಮೌಷಧ.

S P
∴ ಲಂಘನವು ಕಾಯಿಲೆಯನ್ನು ಗುಣಪಡಿಸುತ್ತದೆ.

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇಲ್ಲಿ **'ದ್ವಂದ್ವಾರ್ಥ ಪಕ್ಷಪದ ದೋಷ'**ವು ಉಂಟಾಗಿದೆ. ನಿರಪೇಕ್ಷ ವ್ಯವಹಿತ ಅನುಮಾನದ ಒಂದನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

ಈ ವಾದದಲ್ಲಿ ಪಕ್ಷವಾಕ್ಯದಲ್ಲಿ ಪಕ್ಷಪದವಾದ **'ಲಂಘನ'** ಎನ್ನುವುದು **'ಉಪವಾಸ'** ಎನ್ನುವ ಅರ್ಥದಲ್ಲಿಯೂ ಮತ್ತು ನಿರ್ಣಯ ವಾಕ್ಯದಲ್ಲಿ ಪಕ್ಷಪದವಾದ **'ಲಂಘನ'** ಎನ್ನುವುದು ಹಾರುವುದು/ ಜಿಗಿಯುವುದು ಎನ್ನುವ ಅರ್ಥದಲ್ಲಿ ಬಳಸಲ್ಪಟ್ಟಿದೆ.

**C. ದ್ವಂದ್ವಾರ್ಥ ಮಧ್ಯಮಪದ ದೋಷ [Fallacy of Ambigious Middle]:**

ತ್ರಿವಾಕ್ಯಾನುಮಾನದಲ್ಲಿ ಮಧ್ಯಮ ಪದವು ಸಾಧ್ಯವಾಕ್ಯದಲ್ಲಿ ಒಂದು ಅರ್ಥದಲ್ಲಿ ಬಳಸಲ್ಪಟ್ಟಿದ್ದು, ಪಕ್ಷ ವಾಕ್ಯದಲ್ಲಿ ಇನ್ನೊಂದು ಅರ್ಥದಲ್ಲಿ ಬಳಸಲ್ಪಟ್ಟಾಗ **"ದ್ವಂದ್ವಾರ್ಥ ಮಧ್ಯಮಪದ"** ದೋಷವು ಉಂಟಾಗುತ್ತದೆ.

M P
ಎಲ್ಲಾ ಚಳಿಯನ್ನು ಬೆಂಕಿಯಿಂದ ಹೋಗಲಾಡಿಸಬಹುದು.

S M
ಈತನ ರೋಗ ಚಳಿ.

S P
∴ ಈತನ ರೋಗವನ್ನು ಬೆಂಕಿಯಿಂದ ಹೋಗಲಾಡಿಸಬಹುದು.

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇಲ್ಲಿ **"ದ್ವಂದ್ವಾರ್ಥ ಮಧ್ಯಮಪದ"** ದೋಷವು ಉಂಟಾಗಿದೆ. ನಿರಪೇಕ್ಷ ವ್ಯವಹಿತ ಅನುಮಾನದ ಒಂದನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

ಈ ವಾದದಲ್ಲಿ ಸಾಧ್ಯವಾಕ್ಯದಲ್ಲಿ ಮಧ್ಯಮಪದವಾದ **'ಚಳಿ'** ಎನ್ನುವುದು ಹವಮಾನದ ಚಳಿ ಎಂದೂ ಪಕ್ಷ ವಾಕ್ಯದಲ್ಲಿ ಮಧ್ಯಮ ಪದವಾದ 'ಚಳಿ' ಎನ್ನುವುದು ಕಾಯಿಲೆ ಎಂದೂ ಎರಡು ಅರ್ಥದಲ್ಲಿ ಬಳಸಲ್ಪಟ್ಟಿದೆ.

**ನಿಯಮ II ವ್ಯವಹಿತ ಅನುಮಾನವು ಮೂರು ಮತ್ತು ಕೇವಲ ಮೂರೇ ವಾಕ್ಯಗಳನ್ನು ಹೊಂದಿರಬೇಕು.**

**ಸಾಧನೆ:** ತ್ರಿವಾಕ್ಯನುಮಾನವನ್ನು ನಿರೂಪಿಸುವಾಗಲೇ ಈ ನಿಯಮವನ್ನು ತಿಳಿದಿರುತ್ತವೆ. ತ್ರಿವಾಕ್ಯಾನುಮಾನವು ಪ್ರತ್ಯಕ್ಷ ಅನುಮಾನದ ಒಂದು ರೂಪವಾದ್ದರಿಂದ ಎರಡು ಗೃಹೀತ ವಾಕ್ಯಗಳ ಪರಸ್ಪರ ಸಂಬಂದದ ಆಧಾರದಿಂದ ನಿರ್ಣಯ ವಾಕ್ಯವನ್ನು ಪಡೆಯುತ್ತೇವೆ. ಆದ್ದರಿಂದ ವ್ಯವಹಿತ ಅನುಮಾನದಲ್ಲಿ ಮೂರು ವಾಕ್ಯಗಳಿರಬೇಕು.

**ನಿಯಮ III - ಮಧ್ಯಮ ಪದವು ಗೃಹೀತ ವಾಕ್ಯಗಳಲ್ಲಿ ಒಂದು ಸಾರಿಯಾದರೂ ವ್ಯಾಪ್ತವಾಗಿರಬೇಕು.**

**ಸಾಧನೆ:** ಮಧ್ಯಮ ಪದವು ಸಾಧ್ಯಪದ ಮತ್ತು ಪಕ್ಷಪದಗಳ ನಡುವೆ ಸಂಬಂಧವನ್ನು ಏರ್ಪಡಿಸುತ್ತದೆ. ಸಾಧ್ಯ ಪದ ಮತ್ತು ಪಕ್ಷಪದಗಳು ಮಧ್ಯಮಪದದ ಒಂದೇ ಭಾಗಕ್ಕೆ ಸಂಬಂಧಿಸದಿದ್ದರೆ, ಸಾಧ್ಯಪದಕ್ಕೂ ಮತ್ತು ಪಕ್ಷಪದಕ್ಕೂ ಸಂಬಂಧ ಇರುವುದಿಲ್ಲ. ಮಧ್ಯಮ ಪದವು ಎರಡು ಪದಗಳ ನಡುವೆ ಸಂಬಂಧವನ್ನು ಏರ್ಪಡಿಸುವುದರಿಂದ ಮಧ್ಯಮ ಪದದ ಒಂದು ಭಾಗವು ಸಾಧ್ಯಪದದದೊಂದಿಗೂ, ಇನ್ನೊಂದು ಭಾಗವು ಪಕ್ಷಪದದೊಂದಿಗೂ ಹೋಲಿಸಲ್ಪಟ್ಟರೆ, ನಿರ್ಣಯವನ್ನು ಊಹಿಸಲು ಸಾಧ್ಯವಿಲ್ಲ.

ಈ ನಿಯಮದ ಉಲ್ಲಂಘನೆಯಿಂದ **'ಮಧ್ಯಮ ಪದ ಅವ್ಯಾಪ್ತಿ'** ದೋಷವು ಉಂಟಾಗುತ್ತದೆ.

P M
ಎಲ್ಲಾ ಬೇಸಾಯಗಾರರು ಕಷ್ಟಜೀವಿಗಳು. – $\overset{3}{P}A\overset{X}{M}$

S M
ಎಲ್ಲಾ ವಿಜ್ಞಾನಿಗಳು ಕಷಜೀವಿಗಳು. – $\overset{3}{S}A\overset{X}{M}$

S P
∴ ಎಲ್ಲಾ ವಿಜ್ಞಾನಿಗಳು ಬೇಸಾಯಗಾರರು. – $\overset{3}{S}A\overset{X}{P}$

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇಲ್ಲಿ **'ಮಧ್ಯಮಪದ ಅವ್ಯಾಪ್ತಿ'** ದೋಷವು ಉಂಟಾಗಿದೆ. ನಿರಪೇಕ್ಷ ವ್ಯವಹಿತ ಅನುಮಾನದ ಮೂರನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

ಈ ವಾದದಲ್ಲಿ ಮಧ್ಯಮ ಪದವು ಎರಡೂ ಗೃಹೀತ ವಾಕ್ಯಗಳಲ್ಲೂ ಅವ್ಯಾಪ್ತವಾಗಿದೆ. ಏಕೆಂದರೆ, ಸಾಧ್ಯವಾಕ್ಯ ಮತ್ತು ಪಕ್ಷವಾಕ್ಯಗಳೆರಡೂ A ತಾರ್ಕಿಕ ವಾಕ್ಯಗಳಾಗಿವೆ ಮತ್ತು ಮಧ್ಯಮ ಪದವು ಎರಡೂ ಗೃಹೀತ ವಾಕ್ಯಗಳಲ್ಲೂ ವಿಧೇಯ ಪದದ ಸ್ಥಾನದಲ್ಲಿ ಬಂದಿದೆ.

**ನಿಯಮ IV- ಗೃಹೀತ ವಾಕ್ಯಗಳಲ್ಲಿ ಅವ್ಯಾಪ್ತವಾಗಿರುವ ಪದವನ್ನು ನಿರ್ಣಯ ವಾಕ್ಯದಲ್ಲಿ ವ್ಯಾಪ್ತಗೊಳಿಸಬಾರದು.**

**ಸಾಧನೆ:** ತ್ರಿವಾಕ್ಯಾನುಮಾನವು ನಿಗಮನ ಅನುಮಾನದ ಒಂದು ರೂಪವಾದ್ದರಿಂದ ನಿರ್ಣಯವಾಕ್ಯದ ವ್ಯಾಪ್ತಿಯು ಆಧಾರವಾಕ್ಯದ ವ್ಯಾಪ್ತಿಗಿಂತ ಹೆಚ್ಚು ವಿಸ್ತಾರವನ್ನು ಹೊಂದಿರಬಾರದು. ಒಂದು ಪದವು ಗೃಹೀತ ವಾಕ್ಯಗಳಲ್ಲಿ ತನ್ನ ಕ್ಷೇತ್ರದ ಸಂಪೂರ್ಣವರ್ಗಕ್ಕೆ ಅನ್ವಯಿಸದಿದ್ದಾಗ ಅದು ನಿರ್ಣಯವಾಕ್ಯದಲ್ಲಿ ತನ್ನ ಸಂಪೂರ್ಣ ವರ್ಗಕ್ಕೆ ಅನ್ವಯವಾಗಬಾರದು.

ಈ ನಿಯಮದ ಉಲ್ಲಂಘನೆಯು ಎರಡು ವಿಧದ ದೋಷಗಳಿಗೆ ಗುರಿಯಾಗುತ್ತದೆ.

A. ಸಾಧ್ಯಪದ ಅತಿವ್ಯಾಪ್ತಿದೋಷ.

B. ಪಕ್ಷಪದ ಅತಿವ್ಯಾಪ್ತಿ ದೋಷ.

### A ಸಾಧ್ಯಪದ ಅತಿವ್ಯಾಪ್ತಿ ದೋಷ [Fallacy of Illicit Major]:

ಸಾಧ್ಯಪದವು ಸಾಧ್ಯವಾಕ್ಯದಲ್ಲಿ ಅವ್ಯಾಪ್ತವಾಗಿದ್ದು, ನಿರ್ಣಯ ವಾಕ್ಯದಲ್ಲಿ ವ್ಯಾಪ್ತವಾಗಿದ್ದರೆ ಆಗ ಸಾಧ್ಯಪದ ಅತಿವ್ಯಾಪ್ತಿ ದೋಷವು ಉಂಟಾಗುತ್ತದೆ.

M P
ಎಲ್ಲಾ ಹಸುಗಳು ಚತುಷ್ಪಾಧಿಗಳು. – MAP (M: 3, P: X)

S M
ಯಾವನಾಯಿಗಳು ಹಸುಗಳಲ್ಲ. – SEM (S: 3, M: 3)

S P
∴ ಯಾವ ನಾಯಿಗಳು ಚತುಷ್ಪಾಧಿಗಳಲ್ಲ. – SEP (S: ✓, P: ✓)

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇದು **'ಸಾಧ್ಯಪದ ಅತಿವ್ಯಾಪಿ ದೋಷ'ಕ್ಕೆ** ಗುರಿಯಾಗಿದೆ. ನಿರಪೇಕ್ಷ ವ್ಯವಹಿತ ಅನುಮಾನದ ನಾಲ್ಕನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

ತ್ರಿವಾಕ್ಯಾನುಮಾನವು ನಿಗಮನ ಅನುಮಾನದ ಒಂದು ರೂಪವಾದ್ದರಿಂದ ನಿರ್ಣಯ ವಾಕ್ಯದ ವ್ಯಾಪ್ತಿಯು ಆಧಾರ ವಾಕ್ಯದ ವ್ಯಾಪ್ತಿಗಿಂತ ಹೆಚ್ಚಾಗಿರಬಾರದು. ಈ ವಾದದಲ್ಲಿ ಸಾಧ್ಯವಾಕ್ಯವು 'A' ತಾರ್ಕಿಕ ವಾಕ್ಯವಾಗಿದೆ ಮತ್ತು ಸಾಧ್ಯಪದವು ವಿಧೇಯಪದದ ಸ್ಥಾನದಲ್ಲಿ ಬಂದಿದ್ದರಿಂದ ಅವ್ಯಾಪ್ತವಾಗಿದೆ. ಆದರೆ ನಿರ್ಣಯ ವಾಕ್ಯವು 'E' ತಾರ್ಕಿಕ ವಾಕ್ಯವಾದ್ದರಿಂದ ಸಾಧ್ಯಪದವು ವ್ಯಾಪ್ತವಾಗಿದೆ.

**B. ಪಕ್ಷಪದ ಅತಿವ್ಯಾಪ್ತಿ ದೋಷ [Fallacy of Illicit Minor]:**

ಪಕ್ಷಪದವು ಪಕ್ಷವಾಕ್ಯದಲ್ಲಿ ಅವ್ಯಾಪ್ತವಾಗಿದ್ದು, ನಿರ್ಣಯ ವಾಕ್ಯದಲ್ಲಿ ವ್ಯಾಪ್ತವಾಗಿದ್ದರೆ ಆಗ **"ಪಕ್ಷಪದ ಅತಿವ್ಯಾಪ್ತಿ ದೋಷ"**ವು ಉಂಟಾಗುತ್ತದೆ.

M P

ಯಾವ ಮಾನವರು ಪರಿಪೂರ್ಣರಲ್ಲ. – ✓ ✓ MEP

M S

ಎಲ್ಲಾ ಮಾನವರು ಪ್ರಾಣಿಗಳು. – 3 X MAS

S P

∴ ಯಾವ ಪ್ರಾಣಿಗಳು ಪರಿಪೂರ್ಣರಲ್ಲ. – ✓ ✓ SAP

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇದು **'ಪಕ್ಷಪದ ಅತಿವ್ಯಾಪಿ ದೋಷ'ಕ್ಕೆ** ಗುರಿಯಾಗಿದೆ. ನಿರಪೇಕ್ಷ ವ್ಯವಹಿತ ಅನುಮಾನದ ನಾಲ್ಕನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

ನಿರಪೇಕ್ಷ ವ್ಯವಹಿತ ಅನುಮಾನವು ನಿಗಮನ ಅನುಮಾನದ ಒಂದು ರೂಪವಾದ್ದರಿಂದ ನಿರ್ಣಯ ವಾಕ್ಯದ ವ್ಯಾಪ್ತಿಯು ಆಧಾರ ವಾಕ್ಯದ ವ್ಯಾಪ್ತಿಗಿಂತ ಹೆಚ್ಚಾಗಿರಬಾರದು. ಈ ವಾದದಲ್ಲಿ ಪಕ್ಷವಾಕ್ಯವು 'A' ತಾರ್ಕಿಕ ವಾಕ್ಯವಾಗಿದೆ ಮತ್ತು ಪಕ್ಷಪದವು ವಿಧೇಯಪದದ ಸ್ಥಾನದಲ್ಲಿ ಬಂದಿದ್ದರಿಂದ ಅವ್ಯಾಪ್ತವಾಗಿದೆ. ಆದರೆ ನಿರ್ಣಯ ವಾಕ್ಯವು 'E' ತಾರ್ಕಿಕ ವಾಕ್ಯವಾದ್ದರಿಂದ ಪಕ್ಷಪದವು ವ್ಯಾಪ್ತವಾಗಿದೆ.

**ನಿಯಮ V – ಎರಡು ನಿಷೇಧಾತ್ಮಕ ಗೃಹೀತ ವಾಕ್ಯಗಳಿಂದ ನಿರ್ಣಯವನ್ನು ಊಹಿಸಲು ಸಾಧ್ಯವಿಲ್ಲ.**

**ಸಾಧನೆ:** ನಿಷೇಧಾತ್ಮಕ ತಾರ್ಕಿಕ ವಾಕ್ಯದಲ್ಲಿ ಉದ್ದೇಶ ಪದಕ್ಕೂ ಮತ್ತು ವಿಧೇಯ ಪದಕ್ಕೂ ಸಂಬಂಧವನ್ನು ನಿರಾಕರಿಸುತ್ತದೆ. ಆದ್ದರಿಂದ ಗೃಹೀತ ವಾಕ್ಯಗಳಲ್ಲಿ ಸಾಧ್ಯಪದವಾಗಲಿ ಅಥವಾ ಪಕ್ಷಪದವಾಗಲಿ ಮಧ್ಯಮ ಪದದೊಂದಿಗೆ ಸಂಬಂಧವನ್ನು ಹೊಂದುವುದಿಲ್ಲ. ಆದ್ದರಿಂದ ಮಧ್ಯಮಪದವು ಸಾಧ್ಯಪದಕ್ಕೂ ಮತ್ತು ಪಕ್ಷಪದಕ್ಕೂ ಸಂಬಂಧವನ್ನು ನಿರ್ಣಯ ವಾಕ್ಯದಲ್ಲಿ ಕಲ್ಪಿಸಲು ಸಾಧ್ಯವಿಲ್ಲ. ಈ ರೀತಿ ಎರಡು ನಿಷೇಧಾತ್ಮಕ ಗೃಹೀತವಾಕ್ಯಗಳು ಸುಸಂಬಂಧ ನಿರ್ಣಯ ವಾಕ್ಯವನ್ನು ಊಹಿಸುವುದಿಲ್ಲ.

ಉದಾ: ಯಾವ ಮಾನವರು ಚತುಷ್ಪಾಧಿಗಳಲ್ಲ.

ಯಾವ ಚತುಷ್ಪಾಧಿಗಳು ವಿಚಾರವಂತರಲ್ಲ.

ನಿರ್ಣಯವನ್ನು ಊಹಿಸಲು ಸಾಧ್ಯವಿಲ್ಲ.

ಈ ನಿಯಮದ ಉಲ್ಲಂಘನೆಯು **'ಎರಡು ನಿಷೇಧಾತ್ಮಕ ಗೃಹೀತ ವಾಕ್ಯಗಳ ದೋಷ'ಕ್ಕೆ** ಗುರಿಯಾಗುತ್ತದೆ.

**ನಿಯಮ VI – ಒಂದು ಗೃಹೀತ ವಾಕ್ಯವು ನಿಷೇಧಾತ್ಮಕವಾಗಿದ್ದರೆ, ನಿರ್ಣಯ ವಾಕ್ಯವು ನಿಷೇಧಾತ್ಮಕವಾಗಿರಬೇಕು; ಮತ್ತು ನಿಷೇಧಾತ್ಮಕ ನಿರ್ಣಯ ವಾಕ್ಯವನ್ನು ಸಾಧಿಸಲು ಒಂದು ಗೃಹೀತ ವಾಕ್ಯವು ನಿಷೇಧಾತ್ಮಕವಾಗಿರಬೇಕು.**

**ಸಾಧನೆ:** ನಿಯಮ 6ರ ಪ್ರಕಾರ ಎರಡೂ ಗೃಹೀತ ವಾಕ್ಯಗಳು ನಿಷೇಧಾತ್ಮಕವಾಗಿರಲು ಸಾಧ್ಯವಿಲ್ಲ, ಆದ್ದರಿಂದ ಸುಸಂಬದ್ಧ ನಿರ್ಣಯವಾಕ್ಯವನ್ನು ಪಡೆಯಲು ಒಂದು ಗೃಹೀತವಾಕ್ಯವಾದರೂ ಭಾವಾತ್ಮಕವಾಗಿರಬೇಕು. VIನೇ ನಿಯಮದ ಪ್ರಕಾರ ಒಂದು ಗೃಹೀತ ವಾಕ್ಯವು ನಿಷೇಧಾತ್ಮಕವಾಗಿದ್ದರೆ ನಿರ್ಣಯವಾಕ್ಯವೂ ಕೂಡ ನಿಷೇಧಾತ್ಮಕವಾಗಿರಬೇಕು. ನಿಷೇಧಾತ್ಮಕ ಗೃಹೀತ ವಾಕ್ಯದಲ್ಲಿ ಮಧ್ಯಮ ಪದಕ್ಕೂ ಮತ್ತು ಇನ್ನೊಂದು ಪದಕ್ಕೂ ಸಂಬಂಧ ಇರುವುದಿಲ್ಲ. ಇನ್ನೊಂದು ಗೃಹೀತ ವಾಕ್ಯವು ಭಾವಾತ್ಮಕವಾದ್ದರಿಂದ ಮಧ್ಯಮ ಪದಕ್ಕೂ ಮತ್ತು ಇನ್ನೊಂದು ಪದಕ್ಕೂ ಸಂಬಂಧ ಇರುತ್ತದೆ. ಆದ್ದರಿಂದ ಸಾಧ್ಯಪದ ಮತ್ತು ಪಕ್ಷಪದಗಳ ನಡುವೆ ಸಂಬಂಧ ಇರುವುದಿಲ್ಲ.

ಹಾಗೆಯೇ ನಿಷೇಧಾತ್ಮಕ ನಿರ್ಣಯವಾಕ್ಯವನ್ನು ಸಾಧಿಸಲು, ಒಂದು ಗೃಹೀತವಾಕ್ಯವು ನಿಷೇಧಾತ್ಮಕವಾಗಿರಬೇಕು. ನಿರ್ಣಯವಾಕ್ಯವು ನಿಷೇಧಾತ್ಮಕವಾಗಿದ್ದರೆ, ಸಾಧ್ಯಪದಕ್ಕೂ ಮತ್ತು ಪಕ್ಷಪದಕ್ಕೂ ಸಂಬಂಧ ಇರುವುದಿಲ್ಲ. ಒಂದು ಗೃಹೀತ ವಾಕ್ಯವು ನಿಷೇಧಾತ್ಮಕವಾಗಿದ್ದರೆ ಮಾತ್ರ ನಾವು ಇದನ್ನು ಸಾಧಿಸಲು ಸಾಧ್ಯ, ಅಲ್ಲಿ ಮಧ್ಯಮ ಪದಕ್ಕೂ ಮತ್ತು ಇನ್ನೊಂದು ಪದಕ್ಕೂ ಸಂಬಂಧ ಇರುವುದಿಲ್ಲ ಮತ್ತು ಇನ್ನೊಂದು ಗೃಹೀತವಾಕ್ಯವು ಭಾವಾತ್ಮಕವಾಗಿರುವುದರಿಂದ ಮಧ್ಯಮಪದಕ್ಕೂ ಮತ್ತು ಇನ್ನೊಂದು ಪದಕ್ಕೂ ಸಂಬಂಧ ಇರುವುದನ್ನು ಸೂಚಿಸುತ್ತದೆ.

**ನಿಯಮ–VII ಎರಡೂ ಗೃಹೀತ ವಾಕ್ಯಗಳು ಭಾವಾತ್ಮಕವಾಗಿದ್ದರೆ, ನಿರ್ಣಯ ವಾಕ್ಯವೂ ಭಾವಾತ್ಮಕವಾಗಿರಬೇಕು; ಮತ್ತು ನಿರ್ಣಯ ವಾಕ್ಯವು ಭಾವತ್ಮಕವಾಗಿದ್ದರೆ, ಎರಡೂ ಗೃಹೀತ ವಾಕ್ಯಗಳು ಭಾವಾತ್ಮಕವಾಗಿರಬೇಕು.**

**ಸಾಧನೆ:** ಎರಡೂ ಗೃಹೀತ ವಾಕ್ಯಗಳು ಭಾವಾತ್ಮಕವಾಗಿದ್ದರೆ, ಮಧ್ಯಮಪದವು ಸಾಧ್ಯಪದ ಮತ್ತು ಪಕ್ಷಪದಗಳ ನಡುವೆ ಸಂಬಂಧವನ್ನು ಹೊಂದಿದೆ ಎಂದಾಗುತ್ತದೆ. ಇದರಿಂದ ಸಾಧ್ಯಪದ ಮತ್ತು ಪಕ್ಷಪದಗಳು ಸಂಬಂಧವನ್ನು ಹೊಂದಿದೆ ಎಂದು ನಾವು ತಿಳಿಯಬಹುದು.

ಹಾಗೆಯೇ ನಿರ್ಣಯ ವಾಕ್ಯವು ಭಾವಾತ್ಮಕವಾಗಿದ್ದರೆ, ಎರಡೂ ಗೃಹೀತ ವಾಕ್ಯಗಳು ಭಾವಾತ್ಮಕವಾಗಿರಬೇಕು. ಎರಡೂ ಗೃಹೀತ ವಾಕ್ಯಗಳ ಭಾವಾತ್ಮಕವಾಗಿರದಿದ್ದರೆ,ಎರಡೂ ನಿಷೇಧಾತ್ಮಕವಾಗಿರುತ್ತವೆ. ಅಥವಾ ಒಂದು ಗೃಹೀತ ವಾಕ್ಯವು ನಿಷೇಧಾತ್ಮಕವಾಗಿರುತ್ತದೆ. ಇನ್ನೊಂದು ಭಾವಾತ್ಮಕವಾಗಿರುತ್ತದೆ. VIನೇ ನಿಯಮದ ಪ್ರಕಾರ ಎರಡೂ ಗೃಹೀತ ವಾಕ್ಯಗಳು ನಿಷೇಧಾತ್ಮಕವಾಗಿದ್ದರೆ, ನಿರ್ಣಯವನ್ನು ಊಹಿಸಲು ಸಾಧ್ಯವಿಲ್ಲ VIನೇ ನಿಯಮದ ಪ್ರಕಾರ ಒಂದು ಗೃಹೀತ ವಾಕ್ಯವು ನಿಷೇಧಾತ್ಮಕವಾಗಿದ್ದರೆ, ನಿರ್ಣಯವಾಕ್ಯವೂ ಕೂಡ ನಿಷೇಧಾತ್ಮಕವಾಗಿರಬೇಕು. ಆದ್ದರಿಂದ ಎರಡೂ ಗೃಹೀತ ವಾಕ್ಯಗಳು ಭಾವಾತ್ಮಕವಾಗಿದ್ದರೆ ಮಾತ್ರ ನಿರ್ಣಯವಾಕ್ಯವು ಭಾವಾತ್ಮಕವಾಗಿರುತ್ತದೆ.

**ನಿಯಮ VIII– ಎರಡೂ ಗೃಹೀತ ವಾಕ್ಯಗಳು ಅಪೂರ್ಣ ವ್ಯಾಪಕವಾಗಿದ್ದರೆ, ನಿರ್ಣಯವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ.**

**ಸಾಧನೆ:** ಈ ನಿಯಮವನ್ನು ಕೆಳಗಿನಂತೆ ಸಾಧಿಸಬಹುದು. ಎರಡೂ ಗೃಹೀತ ವಾಕ್ಯಗಳು ಅಪೂರ್ಣವ್ಯಾಪಕವಾಗಿದ್ದರೆ, ಸಾಧ್ಯವಿರುವ ಸಂಯೋಜನೆಗಳು II, IO, OI ಮತ್ತು OO.

II ಸಂಯೋಜನೆಯಿಂದ ನಿರ್ಣಯ ವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ ಏಕೆಂದರೆ, I ತಾರ್ಕಿಕ ವಾಕ್ಯದಲ್ಲಿ ಉದ್ದೇಶ ಪದ ಮತ್ತು ವಿಧೇಯ ಪದಗಳೆರಡೂ ಅವ್ಯಾಪ್ತವಾಗಿರುತ್ತವೆ. ಆದ್ದರಿಂದ ಎರಡೂ ಗೃಹೀತವಾಕ್ಯಗಳು ಅಪೂರ್ಣವ್ಯಾಪಕವಾಗಿದ್ದರೆ ಎರಡೂ ಗೃಹೀತವಾಕ್ಯಗಳಲ್ಲಿ ಒಂದು ಪದವು ವ್ಯಾಪ್ತವಾಗಿರುವುದಿಲ್ಲ. ಆದರೆ III ನೇ ನಿಯಮದ ಪ್ರಕಾರ ಮಧ್ಯಮಪದವು ಗೃಹೀತವಾಕ್ಯಗಳಲ್ಲಿ ಒಂದು ಸಾರಿಯಾದರೂ ವ್ಯಾಪ್ತಿಯನ್ನು ಹೊಂದಿರಬೇಕು. ಆದ್ದರಿಂದ ನಾವು ಮಧ್ಯಮಪದ ಅವ್ಯಾಪ್ತಿ ದೋಷಕ್ಕೆ ಗುರಿಯಾಗುತ್ತೇವೆ.

$\overset{x}{M}\,I\,\overset{x}{P}$

$\overset{x}{S}\,I\,\overset{x}{M}$ ಮಧ್ಯಮ ಪದ ಅವ್ಯಾಪ್ತಿದೋಷ.

IO ಮತ್ತು OI ಒಂದು ಗೃಹೀತ ವಾಕ್ಯವು I ತಾರ್ಕಿಕ ವಾಕ್ಯ ಮತ್ತು ಇನ್ನೊಂದು O ತಾರ್ಕಿಕ ವಾಕ್ಯವಾಗಿದ್ದರೆ, ಎರಡೂ ಗೃಹೀತ ವಾಕ್ಯಗಳಲ್ಲಿ ಒಂದೇ ಒಂದು ಪದವು ವ್ಯಾಪ್ತವಾಗಿರುತ್ತದೆ. ಮತ್ತು ಮಧ್ಯಪದವು ಅವ್ಯಾಪ್ತಿ ದೋಷ ಉಂಟಾಗದಂತೆ ನೋಡಿಕೊಳ್ಳಲು ವ್ಯಾಪ್ತವಾಗಿರುವ ಪದವು ಮಧ್ಯಮಪದವಾಗಿರಬೇಕು. ಅಂದರೆ ನಿಯಮ VI ರ ಪ್ರಕಾರ ಒಂದು ಗೃಹೀತ ವಾಕ್ಯವು ನಿಷೇಧಾತ್ಮಕವಾಗಿದ್ದರೆ, ನಿರ್ಣಯವಾಕ್ಯವೂ ಕೂಡ ನಿಷೇಧಾತ್ಮಕವಾಗಿರಬೇಕು. ಆಗ ಸಾಧ್ಯಪದವು ಸಾಧ್ಯವಾಕ್ಯದಲ್ಲಿ ವ್ಯಾಪ್ತವಾಗದೆ ನಿರ್ಣಯವಾಕ್ಯದಲ್ಲಿ ವ್ಯಾಪ್ತವಾಗುತ್ತದೆ ಆದ್ದರಿಂದ ನಾವು ನಿರ್ಣಯವಾಕ್ಯವನ್ನು ಊಹಿಸಲು ಪ್ರಯತ್ನಿಸಿದಾಗ ಮಧ್ಯಮಪದ ಅವ್ಯಾಪ್ತಿದೋಷ ಅಥವಾ **ಸಾಧ್ಯಪದ ಅತಿವ್ಯಾಪ್ತಿದೋಷ**ವನ್ನು ಎಸಗುತ್ತೇವೆ.

$\overset{x}{M}\,I\,\overset{x}{P}$ $\overset{x}{P}\,O\,\overset{4}{M}$

$\overset{x}{S}\,O\,\overset{3}{M}$ $\overset{x}{S}\,I\,\overset{x}{M}$ ಸಾಧ್ಯಪದ ಅತಿವ್ಯಾಪ್ತಿದೋಷ.

$\overset{x}{S}\,O\,\overset{3}{P}$ $\overset{x}{S}\,O\,\overset{3}{P}$

OO-Vನೇ ನಿಯಮದ ಪ್ರಕಾರ ಎರಡು ನಿಷೇಧಾತ್ಮಕ ಗೃಹೀತ ವಾಕ್ಯಗಳಿಂದ ನಿರ್ಣಯ ವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ.

ಈ ರೀತಿ ಎರಡು ಅಪೂರ್ಣವ್ಯಾಪಕ ಗೃಹೀತ ವಾಕ್ಯಗಳಿಂದ ನಿರ್ಣಯವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ.

**ನಿಯಮ IX- ಒಂದು ಗೃಹೀತವಾಕ್ಯವು ಅಪೂರ್ಣವ್ಯಾಪಕವಾಗಿದ್ದರೆ, ನಿರ್ಣಯವಾಕ್ಯವೂ ಅಪೂರ್ಣವ್ಯಾಪಕವಾಗಿರಬೇಕು.**

**ಸಾಧನೆ:** ಈ ನಿಯಮವನ್ನು ಹೀಗೆ ಸಾಧಿಸಬಹುದು.

ಒಂದು ಗೃಹೀತವಾಕ್ಯವು ಅಪೂರ್ಣವ್ಯಾಪಕವಾಗಿದ್ದರೆ, ಇನ್ನೊಂದು ಗೃಹೀತ ವಾಕ್ಯವು ಪೂರ್ಣವ್ಯಾಪಕವಾಗಿರಬೇಕು. ಆದ್ದರಿಂದ ಸಾಧ್ಯವಿರುವ ಸಂಯೋಜನೆಗಳು ಯಾವುವೆಂದರೆ – AI, IA, AO, OA, EI, IE, EO ಮತ್ತು OE.

ಈ ಎಂಟು ಸಂಯೋಜನೆಗಳಲ್ಲಿ EO ಮತ್ತು OE ಸಂಯೋಜನೆಗಳನ್ನು ಸಾಧಿಸುವ ಅಗತ್ಯವಿಲ್ಲ. V ನೇ ನಿಯಮದ ಪ್ರಕಾರ ಎರಡು ನಿಷೇಧಾತ್ಮಕ ಗೃಹೀತ ವಾಕ್ಯಗಳಿಂದ, ನಿರ್ಣಯ ವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ.

| **ಪೂರ್ಣವ್ಯಾಪಕ ನಿರ್ಣಯ ವಾಕ್ಯ** | | **ಅಪೂರ್ಣವ್ಯಾಪಕ ನಿರ್ಣಯ ವಾಕ್ಯ** | |
|---|---|---|---|
| $\overset{3}{M}A\overset{x}{P}$<br>$\overset{x}{S}I\overset{x}{M}$<br>$\overset{3}{S}A\overset{x}{P}$ | ಪಕ್ಷಪದ ಅತಿ ವ್ಯಾಪ್ತಿದೋಷ | $\overset{3}{M}A\overset{x}{P}$<br>$\overset{x}{S}I\overset{x}{M}$<br>$\overset{x}{S}I\overset{x}{P}$ | ಸಮಂಜಸ |
| $\overset{x}{M}I\overset{x}{P}$<br>$\overset{3}{M}A\overset{x}{S}$<br>$\overset{3}{S}A\overset{x}{P}$ | ಪಕ್ಷಪದ ಅತಿ ವ್ಯಾಪ್ತಿ ದೋಷ | $\overset{x}{M}I\overset{x}{P}$<br>$\overset{3}{M}A\overset{x}{S}$<br>$\overset{x}{S}I\overset{x}{P}$ | ಸಮಂಜಸ |
| $\overset{3}{M}A\overset{x}{P}$<br>$\overset{x}{M}O\overset{3}{S}$<br>$\overset{\checkmark}{S}E\overset{\checkmark}{P}$ | ಸಾಧ್ಯಪದ ಅತಿ ವ್ಯಾಪ್ತಿ ದೋಷ | $\overset{3}{P}A\overset{x}{M}$<br>$\overset{x}{S}O\overset{3}{M}$<br>$\overset{x}{S}O\overset{3}{P}$ | ಸಮಂಜಸ |
| $\overset{x}{P}O\overset{3}{M}$<br>$\overset{3}{S}A\overset{x}{M}$<br>$\overset{\checkmark}{S}E\overset{\checkmark}{P}$ | ಸಾಧ್ಯಪದ ಅತಿ ವ್ಯಾಪ್ತಿ ದೋಷ | $\overset{x}{M}O\overset{3}{P}$<br>$\overset{3}{M}A\overset{x}{S}$<br>$\overset{x}{S}O\overset{3}{P}$ | ಸಮಂಜಸ |
| $\overset{\checkmark}{M}E\overset{\checkmark}{P}$<br>$\overset{x}{S}I\overset{x}{M}$<br>$\overset{\checkmark}{S}E\overset{\checkmark}{P}$ | ಪಕ್ಷಪದ ಅತಿ ವ್ಯಾಪ್ತಿ ದೋಷ | $\overset{\checkmark}{P}E\overset{\checkmark}{M}$<br>$\overset{x}{S}I\overset{x}{M}$<br>$\overset{x}{S}O\overset{3}{P}$ | ಸಮಂಜಸ |
| $\overset{x}{M}I\overset{x}{P}$<br>$\overset{\checkmark}{S}E\overset{\checkmark}{M}$<br>$\overset{\checkmark}{S}E\overset{\checkmark}{P}$ | ಸಾಧ್ಯಪದ ಅತಿ ವ್ಯಾಪ್ತಿ ದೋಷ | $\overset{x}{M}I\overset{x}{P}$<br>$\overset{\checkmark}{S}E\overset{\checkmark}{M}$<br>$\overset{x}{S}O\overset{3}{P}$ | ಸಾಧ್ಯ ಪದ ಅತಿ ವ್ಯಾಪ್ತಿ ದೋಷ<br>**X** ನೇ ನಿಯಮದ ಉಲ್ಲಂಘನೆ |

ಈ ರೀತಿ ಒಂದು ಗೃಹೀತ ವಾಕ್ಯವು ಅಪೂರ್ಣ ವ್ಯಾಪಕವಾಗಿದ್ದರೆ, ನಿರ್ಣಯ ವಾಕ್ಯವೂ ಕೂಡ ಅಪೂರ್ಣವ್ಯಾಪಕವಾಗಿರಬೇಕು.

**ನಿಯಮ X- ಸಾಧ್ಯ ವಾಕ್ಯವು ಅಪೂರ್ಣವ್ಯಾಪಕವಾಗಿದ್ದು ಮತ್ತು ಪಕ್ಷ ವಾಕ್ಯವು ನಿಷೇಧಾತ್ಮಕವಾಗಿದ್ದರೆ ನಿರ್ಣಯ ವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ.**

**ಸಾಧನೆ:** ಪಕ್ಷ ವಾಕ್ಯವು ನಿಷೇಧಾತ್ಮಕವಾಗಿದ್ದರೆ, ಸಾಧ್ಯ ವಾಕ್ಯವು ಭಾವತ್ಮಕವಾಗಿರಬೇಕು ಮತ್ತು ನಿರ್ಣಯ ವಾಕ್ಯವು ನಿಷೇಧಾತ್ಮಕವಾಗಿರಬೇಕು. ನಿರ್ಣಯ ವಾಕ್ಯವು ನಿಷೇಧಾತ್ಮಕವಾಗಿದ್ದರೆ ಸಾಧ್ಯ ಪದವು ವ್ಯಾಪ್ತವಾಗುತ್ತದೆ. ಆದರೆ ಸಾಧ್ಯವಾಕ್ಯವು ಅಪೂರ್ಣವ್ಯಾಪಕ ಭಾವಾತ್ಮಕ ವಾದ್ದರಿಂದ ಯಾವ ಪದವೂ ವ್ಯಾಪ್ತವಾಗಿರುವುದಿಲ್ಲ ಆದ್ದರಿಂದ ನಿರ್ಣಯ ವಾಕ್ಯವನ್ನು ಉಹಿಸಲು ಪ್ರಯತ್ನಿಸಿದಾಗ ಸಾಧ್ಯ ಪದ ಅತಿವ್ಯಾಪ್ತಿ ದೋಷವು ಉಂಟಾಗುತ್ತದೆ.

ಸಾಧ್ಯತೆ ಇರುವ ಸಂಯೋಜನೆಗಳು IO, OE, OO ಮತ್ತು IE. ಈ ನಾಲ್ಕು ಸಂಯೋಜನೆಗಳಲ್ಲಿ OE ಮತ್ತು OO ಸಂಯೋಜನೆಗಳನ್ನು ಸಾಧಿಸುವ ಅಗತ್ಯವಿಲ್ಲ ಏಕೆಂದರೆ V ನೇ ನಿಯಮದ ಪ್ರಕಾರ ಎರಡು ನಿಷೇಧಾತ್ಮಕ ಗೃಹೀತ ವಾಕ್ಯಗಳಿಂದ ನಿರ್ಣಯ ವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ.

x x<br>
MIP

✓ ✓<br>
SEM ಸಾಧ್ಯ ಪದ ಅತಿವ್ಯಾಪ್ತಿದೋಷ

x 3<br>
SOP

IO ಸಂಯೋಜನೆಗಳನ್ನು ಸಾಧಿಸುವ ಅಗತ್ಯವಿಲ್ಲ. ಏಕೆಂದರೆ VIIIನೇ ನಿಯಮದ ಪ್ರಕಾರ ಎರಡು ಅಪೂರ್ಣವ್ಯಾಪಕ ಗೃಹೀತ ವಾಕ್ಯಗಳಿಂದ ನಿರ್ಣಯವಾಕ್ಯವನ್ನು ಉಹಿಸಲು ಸಾಧ್ಯವಿಲ್ಲ. ಈ ರೀತಿ ಸಾಧ್ಯ ವಾಕ್ಯವು ಅಪೂರ್ಣವ್ಯಾಪಕವಾಗಿದ್ದು ಮತ್ತು ಪಕ್ಷ ವಾಕ್ಯವು ನಿಷೇಧಾತ್ಮಕವಾಗಿದ್ದರೆ, ನಿರ್ಣಯ ವಾಕ್ಯವನ್ನು ಊಹಿಸಲು ಸಾಧ್ಯವಿಲ್ಲ.

**ತ್ರಿವಾಕ್ಯನುಮಾನದ ನಿಯಮಗಳ ಬಗ್ಗೆ ಉಪಸಂಹಾರ:**

ಕೊನೆಯ ನಾಲ್ಕು ನಿಯಮಗಳು ಮೊದಲನೆಯ ನಾಲ್ಕು ನಿಯಮಗಳ ಫಲಿತಾಂಶವಾಗಿದೆ. ಈ ನಾಲ್ಕು ನಿಯಮಗಳಲ್ಲಿ ಯಾವುದೇ ಒಂದು ನಿಯಮದ ಉಲಂಘನೆಯು ಬೇರೆ ಯಾವುದಾದರೂ ನಿಯಮದ ಉಲ್ಲಂಘನೆಯ ಪರಿಣಾಮವಾಗಿದೆ. ಆದ್ದರಿಂದ ಮೊದಲನೆಯ ಆರು ನಿಯಮಗಳನ್ನು ಪ್ರಧಾನ ನಿಯಮಗಳುಎಂದೂ, ಕೊನೆಯ ನಾಲ್ಕು ನಿಯಮಗಳನ್ನು ಮಾಧ್ಯಮಿಕ/ಗೌಣ ನಿಯಮಗಳೆಂದೂ ಕರೆಯಲಾಗಿದೆ.

ಮೊದಲನೆಯ ಎರಡು ನಿಯಮಗಳು ನಿರಪೇಕ್ಷ ವ್ಯವಹಿತ ಅನುಮಾನದ ರಚನೆಗೆ ಸಂಬಂಧಿಸಿವೆ. ಮೂರು ಮತ್ತು ನಾಲ್ಕನೆಯ ನಿಯಮಗಳು ಪದಗಳ ವ್ಯಾಪ್ತಿಗೆ ಸೇರಿವೆ, ಐದು, ಆರು ಮತ್ತು ಏಳನೆಯ ನಿಯಮಗಳು ತಾರ್ಕಿಕ ವಾಕ್ಯಗಳ ಗುಣದ ಮೇಲೆ ಆಧಾರಿತವಾಗಿದೆ. ಎಂಟು ಮತ್ತು ಒಂಬತ್ತನೆಯ ನಿಯಮಗಳು ತಾರ್ಕಿಕವಾಕ್ಯಗಳ ಪರಿಮಾಣದ ಮೇಲೆ ಆಧಾರಿತವಾಗಿದೆ. ಕೊನೆಯದಾಗಿ, ಹತ್ತನೆ ನಿಯಮವು ಪರಿಮಾಣ ಮತ್ತು ಗುಣ ಎರಡರ ಮೇಲೂ ಆಧಾರಿತವಾಗಿದೆ.

| | |
|---|---|
| I ಮತ್ತು II ನೇ ನಿಯಮಗಳು | ರಚನೆಗೆ ಸಂಬಂಧಿಸಿವೆ |
| III ಮತ್ತು IV ನೇ ನಿಯಮಗಳು | ಪದಗಳ ವ್ಯಾಪ್ತಿಗೆ ಸೇರಿವೆ |
| V, VI ಮತ್ತು VII ನೇ ನಿಯಮಗಳು | ತಾರ್ಕಿಕ ವಾಕ್ಯಗಳ ಗುಣದ ಮೇಲೆ ಆಧಾರಿತವಾಗಿದೆ |
| VIII ಮತ್ತು IX ನೇ ನಿಯಮಗಳು | ತಾರ್ಕಿಕ ವಾಕ್ಯಗಳ ಪರಿಮಾಣದ ಮೇಲೆ ಆಧಾರಿತವಾಗಿದೆ |
| X ನೇ ನಿಯಮ | ಪರಿಮಾಣದ ಮತ್ತು ಗುಣ ಎರಡನ್ನು ಅವಲಂಬಿಸಿದೆ. |

**2. ಮಿಶ್ರ ವ್ಯವಹಿತ ಅನುಮಾನ / ಮಿಶ್ರ ತ್ರಿವಾಕ್ಯಾನುಮಾನ (Mixed Syllogism)**

ಮಿಶ್ರತ್ರಿವಾಕ್ಯಾನುಮಾನದಲ್ಲಿ ನಿಯಮಾತ್ಮಕ / ಔಪಾಧಿಕ ಮತ್ತು ನಿರಪೇಕ್ಷ / ನಿರುಪಾಧಿಕ ತಾರ್ಕಿಕ ವಾಕ್ಯಗಳು ಸೇರಿಕೊಂಡಿರುತ್ತವೆ.

**ಮಿಶ್ರ ವ್ಯವಹಿತ ಅನುಮಾನದಲ್ಲಿ ಎರಡು ವಿಧಗಳಿವೆ ಅವುಗಳು :**

ಅ) ಮಿಶ್ರ ಕಾಲ್ಪನಿಕ ತ್ರಿವಾಕ್ಯಾನುಮಾನ

ಆ) ಮಿಶ್ರ ವೈಕಲ್ಪಿಕ ತ್ರಿವಾಕ್ಯಾನುಮಾನ

**ಅ) ಮಿಶ್ರ ಕಾಲ್ಪನಿಕ ತ್ರಿವಾಕ್ಯಾನುಮಾನ / ಹೇತ್ವಾಶ್ರಿತ ತ್ರಿವಾಕ್ಯಾನುಮಾನ: (Mixed Hypothetical Syllogism)**

ಕಾಲ್ಪನಿಕತ್ರಿವಾಕ್ಯಾನುಮಾನವು ಮಿಶ್ರವ್ಯವಹಿತ ಅನುಮಾನದ ಒಂದು ರೂಪ. ಇಲ್ಲಿ ಮೊದಲನೆಯ ಆಧಾರವಾಕ್ಯವು ಕಾಲ್ಪನಿಕ ತಾರ್ಕಿಕ ವಾಕ್ಯವಾಗಿರುತ್ತದೆ. ಎರಡನೆಯ ಗೃಹೀತ ವಾಕ್ಯವು ನಿರಪೇಕ್ಷ ತಾರ್ಕಿಕ ವಾಖ್ಯವಾಗಿರುತ್ತದೆ. ಮತ್ತು ನಿರ್ಣಯ ವಾಕ್ಯವು ನಿರಪೇಕ್ಷ ತಾರ್ಕಿಕ ವಾಕ್ಯವಾಗಿರುತ್ತದೆ. ಆದ್ದರಿಂದ ಕಾಲ್ಪನಿಕ ವ್ಯವಹಿತ ಅನುಮಾನವನ್ನು **"ಕಾಲ್ಪನಿಕ ನಿರಪೇಕ್ಷ ತ್ರಿವಾಕ್ಯಾನುಮಾನ"** ಎಂದೂ ಕರೆಯುತ್ತಾರೆ.

**ಉದಾ:** ಮಳೆ ಬಂದರೆ, ಒಳ್ಳೆಯ ಬೆಳೆ ಬರುತ್ತದೆ

ಮಳೆ ಬಂದಿದೆ

∴ ಒಳ್ಳೆಯ ಬೆಳೆ ಬಂದಿದೆ

ಸಾಂಕೇತಿಕ ಉದಾ: A ಯು B ಆಗಿದ್ದರೆ C ಯು D ಆಗಿರುತ್ತದೆ

A ಯು B ಆಗಿದೆ

∴ C ಯು D ಆಗಿದೆ

**ಕಾಲ್ಪನಿಕ ತ್ರಿವಾಕ್ಯಾನುಮಾನದ ನಿಯಮಗಳು ಮತ್ತು ದೋಷಗಳು:**

**ನಿಯಮ– ನಿರಪೇಕ್ಷ ಎರಡನೇ ಗೃಹೀತ ವಾಕ್ಯವು ಕಾಲ್ಪನಿಕ ಗೃಹೀತವಾಕ್ಯದ ಪೂರ್ವಾಂಗವನ್ನು ದೃಢೀಕರಿಸಬೇಕು, ಆಗ ನಿರಪೇಕ್ಷ ನಿರ್ಣಯ ವಾಕ್ಯವು ಕಾಲ್ಪನಿಕ ವಾಕ್ಯದ ಉತ್ತರಾಂಗವನ್ನು ದೃಢೀಕರಿಸುತ್ತದೆ.**

**ಉದಾ:** ಒಬ್ಬನು ಕಿವುಡನಾಗಿದ್ದರೆ, ಜೋರಾಗಿ ಮಾತನಾಡುತ್ತಾನೆ.

ಈ ಮನುಷ್ಯ ಕಿವುಡನಾಗಿದ್ದಾನೆ.

∴ ಈ ಮನುಷ್ಯ ಜೋರಾಗಿ ಮಾತನಾಡುತ್ತಾನೆ.

ಈ ನಿಯಮದ ಉಲ್ಲಂಘನೆಯು 'ಪೂರ್ವಾಂಗದ ನಿರಾಕರಣೆ' ಯ ದೋಷಕ್ಕೆ ಗುರಿಯಾಗುತ್ತದೆ.

**ಉದಾ:** ಮಳೆ ಬಂದರೆ, ಭೂಮಿ ತಣ್ಣಗಿರುತ್ತದೆ.

ಮಳೆ ಬಂದಿಲ್ಲ

∴ ಭೂಮಿ ತಣ್ಣಗಿಲ್ಲ

ಈ ವಾದವು ಅಸಮಂಜಸವಾಗಿದೆ ಇಲ್ಲಿ 'ಪೂರ್ವಾಂಗದ ನಿರಾಕರಣೆ'ಯ ದೋಷವು ಉಂಟಾಗಿದೆ. ಕಾಲ್ಪನಿಕ ವ್ಯವಹಿತ ಅನುಮಾನದ ಒಂದನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

ನಿಯಮದ ಪ್ರಕಾರ ನಿರಪೇಕ್ಷ ಗೃಹೀತ ವಾಕ್ಯವು ಕಾಲ್ಪನಿಕ ಗೃಹಿತ ವಾಕ್ಯದ ಪೂರ್ವಾಂಗವನ್ನು ದೃಡೀಕರಿಸಬೇಕು ಆಗ ನಿರಪೇಕ್ಷ ನಿರ್ಣಯ ವಾಕ್ಯವು ಕಾಲ್ಪನಿಕ ಗೃಹೀತ ವಾಕ್ಯದ ಉತ್ತರಾಂಗವನ್ನು ದೃಡೀಕರಿಸುತ್ತದೆ. ಆದರೆ ಈ ವಾದಲ್ಲಿ ನಿರಪೇಕ್ಷ ಗೃಹೀತವಾಕ್ಯವು ಪೂರ್ವಾಂಗವನ್ನು ದೃಡೀಕರಿಸುವುದರ ಬದಲಾಗಿ ನಿರಾಕರಿಸುತ್ತಿದೆ. ಆದ್ದರಿಂದ ನಿರಪೇಕ್ಷ ನಿರ್ಣಯ ವಾಕ್ಯವು ಉತ್ತರಾಂಗವನ್ನು ದೃಡೀಕರಿಸುವುದರ ಬದಲು ನಿರಾಕರಿಸುತ್ತಿದೆ.

**ನಿಯಮ 2 – ನಿರಪೇಕ್ಷ ಗೃಹೀತವಾಕ್ಯವು ಕಾಲ್ಪನಿಕಗೃಹೀತ ವಾಕ್ಯದ ಉತ್ತರಾಂಗವನ್ನು ನಿರಾಕರಿಸಬೇಕು, ಆಗ ನಿರಪೇಕ್ಷ ನಿರ್ಣಯ ವಾಕ್ಯವು ಕಾಲ್ಪನಿಕ ಗೃಹೀತ ವಾಕ್ಯದ ಪೂರ್ವಾಂಗವನ್ನು ನಿರಾಕರಿಸುತ್ತದೆ.**

ಉದಾ: ಒಬ್ಬನು ಕಿವುಡನಾಗಿದ್ದರೆ, ಜೋರಾಗಿ ಮಾತನಾಡುತ್ತಾನೆ.

ಈ ಮನುಷ್ಯ ಜೋರಾಗಿ ಮಾತನಾಡುತ್ತಿಲ್ಲ.

∴ ಈ ಮನುಷ್ಯ ಕಿವುಡನಲ್ಲ.

ಈ ನಿಯಮದ ಉಲ್ಲಂಘನೆಯು 'ಉತ್ತರಾಂಗದ ದೃಡೀಕರಣ' ದೋಷಕ್ಕೆ ಗುರುಯಾಗುತ್ತದೆ.

**ಉದಾ:** ಮಳೆ ಬಂದರೆ, ಭೂಮಿ ತಣ್ಣಗಿರುತ್ತದೆ

ಭೂಮಿ ತಣ್ಣಗಿದೆ

∴ ಮಳೆ ಬಂದಿದೆ

ಈ ವಾದವು ಅಸಮಂಜಸವಾಗಿದೆ ಏಕೆಂದರೆ ಇಲ್ಲಿ 'ಉತ್ತರಾಂಗದ ದೃಡೀಕರಣ" ದೋಷವು ಉಂಟಾಗಿದೆ. ಈ ದೋಷವು ಕಾಲ್ಪನಿಕ ತ್ರಿವಾಕ್ಯಾನುಮಾನದ ಎರಡನೆಯ ನಿಯಮವನ್ನು ಉಲ್ಲಂಘಿಸಿದಾಗ ಉಂಟಾಗುತ್ತದೆ.

ನಿಯಮದ ಪ್ರಕಾರ ನಿರಪೇಕ್ಷ ಗೃಹೀತ ವಾಕ್ಯವು ಕಾಲ್ಪನಿಕ ಗೃಹೀತ ವಾಕ್ಯದ ಉತ್ತರಾಂಗವನ್ನು ನಿರಾಕರಿಸಬೇಕು, ಆಗ ನಿರಪೇಕ್ಷ ನಿರ್ಣಯ ವಾಕ್ಯವು ಕಾಲ್ಪನಿಕ ಗೃಹೀತ ವಾಕ್ಯದ ಪೂರ್ವಾಂಗವನ್ನು ನಿರಾಕರಿಸುತ್ತದೆ. ಆದರೆ ಈ ವಾದದಲ್ಲಿ ನಿರಪೇಕ್ಷ ಗೃಹೀತ ವಾಕ್ಯವು ಕಾಲ್ಪನಿಕ ಗೃಹೀತ ವಾಕ್ಯದ ಉತ್ತರಾಂಗವನ್ನು ನಿರಾಕರಿಸುವುದರ ಬದಲಾಗಿ ದೃಡೀಕರಿಸುತ್ತದೆ. ಹಾಗಾಗಿ ನಿರಪೇಕ್ಷ ನಿರ್ಣಯ ವಾಕ್ಯವು ಪೂರ್ವಾಂಗವನ್ನು ನಿರಾಕರಿಸುವುದರ ಬದಲು ದೃಡೀಕರಿಸುತ್ತದೆ.

**ಆ) ಮಿಶ್ರ ವೈಕಲ್ಪಿಕ / ಪರ್ಯಾಯಾತ್ಮಕ ತ್ರಿವಾಕ್ಯಾನುಮಾನ (Mixed Disjunctive Syllogism):**

ವೈಕಲ್ಪಿಕ ತ್ರಿವಾಕ್ಯಾನುಮಾನವೂ ಕೂಡ ಮಿಶ್ರ ವ್ಯವಹಿತಅನುಮಾನದ ಒಂದು ರೂಪ. ಸಾಧ್ಯ ವಾಕ್ಯವು ವೈಕಲ್ಪಿಕ ತಾರ್ಕಿಕ ವಾಕ್ಯವಾಗಿರುತ್ತದೆ. ಪಕ್ಷ ವಾಕ್ಯವು ನಿರಪೇಕ್ಷ ತಾರ್ಕಿಕ ವಾಕ್ಯವಾಗಿರುತ್ತದೆ. ಮತ್ತು ನಿರ್ಣಯ ವಾಕ್ಯವು ನಿರಪೇಕ್ಷ ತಾರ್ಕಿಕ ವಾಕ್ಯವಾಗಿರುತ್ತದೆ. ಆದ್ದರಿಂದ ಪರ್ಯಾಯಾತ್ಮಕ ವ್ಯವಹಿತ ಅನುಮಾನವನ್ನು ' ಮಿಶ್ರ ವೈಕಲ್ಪಿಕ ತ್ರಿವಾಕ್ಯಾನುಮಾನ' ಎಂದೂ ಕರೆಯುತ್ತಾರೆ.

**ಉದಾ:** ಸೂಚನಾ ದೀಪವು ಕೆಂಪಾಗಿ ಅಥವಾ ಹಸಿರಾಗಿರುತ್ತದೆ

ಸೂಚನಾ ದೀಪವು ಕೆಂಪಾಗಿದೆ

∴ ಸೂಚನಾ ದೀಪವು ಹಸಿರಾಗಿಲ್ಲ.

**ಸಾಂಕೇತಿಕ ಉದಾ:**

A ಯು B ಆಗಿರುತ್ತದೆ ಅಥವಾ C ಆಗಿರುತ್ತದೆ

A ಯು B ಆಗಿದೆ

∴ A ಯು C ಆಗಿಲ್ಲ

**ವೈಕಲ್ಪಿಕ ತ್ರಿವಾಕ್ಯಾನುಮಾನದ ರೂಪಗಳು/ ಉಪವಿಧ (Moods of Disjunctive Syllogism):**

**ರೂಪ I: ದೃಡೀಕರಣ ಮೂಲವಾದ ನಿರಾಕರಣೆಯ ರೂಪ (Modus – Ponendo-Tollens):**

ಈ ರೂಪದಲ್ಲಿ ನಿರಪೇಕ್ಷ ಗೃಹೀತ ವಾಕ್ಯವು ಪರ್ಯಾಯಾತ್ಮಕ ಗೃಹೀತ ವಾಕ್ಯದ ಪರ್ಯಾಯಾಗಳಲ್ಲಿ ಒಂದು ಪರ್ಯಾಯವನ್ನು ದೃಡೀಕರಿಸಬೇಕು. ಆಗ ನಿರಪೇಕ್ಷ ನಿರ್ಣಯ ವಾಕ್ಯವು ಇನ್ನೊಂದು ಪರ್ಯಾಯವನ್ನು ನಿರಾಕರಿಸುತ್ತದೆ. ಈ ರೂಪವನ್ನು 'ನಿಷೇಧಾತ್ಮಕವೈಕಲ್ಪಿಕ ತ್ರಿವಾಕ್ಯಾನುಮಾನ' **'ದೃಡೀಕರಣದ ಮೂಲಕ ನಿರಾಕರಣೆ'** ಎನ್ನುತ್ತಾರೆ. ದೃಡೀಕರಿಸಿ ನಿರಾಕರಿಸುತ್ತದೆ.

**ಉದಾ:** ವಿದ್ಯಾರ್ಥಿಗಳು ಹುಡುಗರು ಅಥವಾ ಹುಡುಗಿಯರು

X ಹುಡುಗಿಯಾಗಿದ್ದಾಳೆ

∴ X ಹುಡುಗನಲ್ಲ.

**ರೂಪ II ನಿರಾಕರಣೆಯ ಮೂಲವಾದ ದೃಡೀಕರಣ ರೂಪ/ ಉಪವಿಧ (Modus –Tollendo -Ponens):**

ಈ ರೂಪದಲ್ಲಿ ನಿರಪೇಕ್ಷ ಗೃಹೀತವಾಕ್ಯವು ವೈಕಲ್ಪಿಕ ಗೃಹೀತ ವಾಕ್ಯದ ವಿಕಲ್ಪಗಳಲ್ಲಿ ಒಂದನ್ನು ನಿರಾಕರಿಸಬೇಕು ಆಗ ನಿರಪೇಕ್ಷ ನಿರ್ಣಯ ವಾಕ್ಯವು ವೈಕಲ್ಪಿಕ ತಾರ್ಕಿಕ ವಾಕ್ಯದ ಇನ್ನೊಂದು ವಿಕಲ್ಪವನ್ನು ದೃಡೀಕರಿಸುತ್ತದೆ. ಈ ರೂಪವನ್ನು **'ನಿರಾಕರಣೆಯ ಮೂಲಕ ದೃಢೀಕರಣ** ಎನ್ನುತ್ತಾರೆ. ನಿರಾಕರಿಸಿ ದೃಡೀಕರಿಸುತ್ತದೆ.

**ಉದಾ:** ಮಾನವರು ಪ್ರಾಮಾಣಿಕರು ಅಥವಾ ಅಪ್ರಾಮಾಣಿಕರು

ಅವನು ಅಪ್ರಾಮಾಣಿಕನಲ್ಲ

∴ ಅವನು ಪ್ರಾಮಾಣಿಕನು

## ಮಾದರಿ ಪ್ರಶ್ನೆಗಳು:

**ಒಂದು ಅಂಕದ ಪ್ರಶ್ನೆಗಳು:**

1. ಅಪ್ರತ್ಯಕ್ಷ ಅನುಮಾನ ಎಂದರೇನು?
2. ನಿರಪೇಕ್ಷ ವ್ಯವಹಿತ ಅನುಮಾನ ಎಂದರೇನು?
3. ಸಾಧ್ಯ ಪದ ಎಂದರೇನು?
4. ಪಕ್ಷ ಪದ ಎಂದರೇನು?
5. ಮಧ್ಯಮ ಪದ ಎಂದರೇನು?
6. ಮಿಶ್ರ ವ್ಯವಹಿತ ಅನುಮಾನ ಎಂದರೇನು?

**ಎರಡು ಅಂಕದ ಪ್ರಶ್ನೆಗಳು:**

1. ಮಿಶ್ರ ವ್ಯವಹಿತ ಅನುಮಾನದ ವಿಧಗಳು ಯಾವುವು?
2. ಸಾಧ್ಯಪದ ದ್ವಂದ್ವಾರ್ಥ ದೋಷವನ್ನು ನಿರೂಪಿಸಿ.
3. ಪಕ್ಷಪದ ದ್ವಂದ್ವಾರ್ಥ ದೋಷ ಎಂದರೇನು?
4. ಮಧ್ಯಮಪದ ದ್ವಂದ್ವಾರ್ಥ ದೋಷ ಎಂದರೇನು?
5. ಕಾಲ್ಪನಿಕ ವ್ಯವಹಿತ ಅನುಮಾನ ಎಂದರೇನು?
6. ವೈಕಲ್ಪಿಕ ವ್ಯವಹಿತ ಅನುಮಾನ ಎಂದರೇನು?

**ಐದು ಅಂಕದ ಪ್ರಶ್ನೆಗಳು:**

**ಕೆಳಗಿನ ವಾದಗಳ ಸಮಂಜಸತೆಯನ್ನು ಪರಿಶೀಲಿಸಿ ಮತ್ತು ವಿವರಿಸಿ**

1. ಕಾವ್ಯ ರಚಿಸುವವರು ಅರ್ಥಕ್ಕೆ ಗಮನಕೊಡುತ್ತಾರೆ.

   ಸಂನ್ಯಾಸಿಗಳಲ್ಲಿ ಕೆಲವರು ಕಾವ್ಯರಚಿಸುವವರಿದ್ದಾರೆ.

   ∴ ಸಂನ್ಯಾಸಿಗಳಲ್ಲಿ ಕೆಲವರು ಅರ್ಥಕ್ಕೆ ಗಮನ ಕೊಡುತ್ತಾರೆ.

2. ಪರಮೌಷಧವು ಕಾಯಿಲೆಯನ್ನು ಗುಣಪಡಿಸುತ್ತದೆ.

   ಲಂಘನವು ಪರಮೌಷಧ.

   ∴ ಲಂಘನವು ಕಾಯಿಲೆಯನ್ನು ಗುಣಪಡಿಸುತ್ತದೆ.

3. ಎಲ್ಲಾ ಚಳಿಯನ್ನು ಬೆಂಕಿಯಿಂದ ಹೋಗಲಾಡಿಸಬಹುದು.

   ಈತನ ರೋಗ ಚಳಿ.

   ∴ ಈತನ ರೋಗವನ್ನು ಬೆಂಕಿಯಿಂದ ಹೋಗಲಾಡಿಸಬಹುದು.

4. ಎಲ್ಲಾ ಬೇಸಾಯಗಾರರು ಕಷ್ಟಜೀವಿಗಳು.

   ಎಲ್ಲಾ ವಿಜ್ಞಾನಿಗಳು ಕಷಜೀವಿಗಳು.

   ∴ ಎಲ್ಲಾ ವಿಜ್ಞಾನಿಗಳು ಬೇಸಾಯಗಾರರು.

5. ಎಲ್ಲಾ ಹಸುಗಳು ಚತುಷ್ಪಾಧಿಗಳು.

   ಯಾವನಾಯಿಗಳು ಹಸುಗಳಲ್ಲ.

   ∴ ಯಾವ ನಾಯಿಗಳು ಚತುಷ್ಪಾಧಿಗಳಲ್ಲ.

6. ಯಾವ ಮಾನವರು ಪರಿಪೂರ್ಣರಲ್ಲ.

   ಎಲ್ಲಾ ಮಾನವರು ಪ್ರಾಣಿಗಳು.

   ∴ ಯಾವ ಪ್ರಾಣಿಗಳು ಪರಿಪೂರ್ಣರಲ್ಲ.

7. ಮಳೆ ಬಂದರೆ, ಭೂಮಿ ತಣ್ಣಗಿರುತ್ತದೆ.

   ಮಳೆ ಬಂದಿಲ್ಲ

   ∴ ಭೂಮಿ ತಣ್ಣಗಿಲ್ಲ

8. ಮಳೆ ಬಂದರೆ, ಭೂಮಿ ತಣ್ಣಗಿರುತ್ತದೆ

ಭೂಮಿ ತಣ್ಣಗಿದೆ

∴ ಮಳೆ ಬಂದಿದೆ

**ಹತ್ತು ಅಂಕದ ಪ್ರಶ್ನೆಗಳು:**

1. ನಿರಪೇಕ್ಷ ವ್ಯವಹಿತ ಅನುಮಾನದ ಎಲ್ಲ ನಿಯಮಗಳನ್ನು ಬರೆಯಿರಿ.
2. ಮಿಶ್ರ ವ್ಯವಹಿತ ಅನುಮಾನದ ವಿಧಗಳನ್ನು ವಿವರಿಸಿ

❖ ❖ ❖ ❖ ❖

# ಅಧ್ಯಾಯ– 6

## ತಾರ್ಕಿಕ ವ್ಯಾಖ್ಯೆ

ವ್ಯಾಖ್ಯೆಯು ಸ್ಪಷ್ಟವಾಗಿ ಆಲೋಚನೆಯಿಂದ ವಿಚಾರದ ಸಂಬಂಧಗಳನ್ನು ತಿಳಿಯಲು ಅತ್ಯವಶ್ಯಕವಾಗಿದೆ. ನಾವು ವಸ್ತುಗಳನ್ನು ಕುರಿತು ಆಲೋಚಿಸುವಾಗ ಗೊಂದಲ ಉಂಟಾದಾಗ ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ವಿಚಾರವನ್ನು ಸ್ಪಷ್ಟವಾಗಿ ಅರ್ಥಮಾಡಿಕೊಂಡು ಕಾರ್ಯರೂಪಕ್ಕೆ ತರಲು ಮತ್ತು ಸಂಕ್ಷಿಪ್ತವಾಗಿ ತೀರ್ಮಾನಿಸಲು ವ್ಯಾಖ್ಯೆಯು ಅವಶ್ಯಕವಾಗಿರುತ್ತದೆ. ಇಲ್ಲವಾದರೆ ನಾವು ಕಲ್ಪಿಸುವ ತರ್ಕ ಪದಗಳು ಸಂಕ್ಷಿಪ್ತವಾಗಿ ಇಲ್ಲದಿದ್ದರೆ ಅರ್ಥವತ್ತಾಗಿ ಬಳಸಲು ಸಾಧ್ಯವಿಲ್ಲ. ಹೀಗೆ ನಮ್ಮ ಅಭಿಪ್ರಾಯಗಳನ್ನು ಅರ್ಥಪೂರ್ಣವಾಗಿ ಸರಿಯಾಗಿ ಪದಗಳನ್ನು ಕಾರ್ಯ ರೂಪಕ್ಕೆ ತರಲು ತೀರ್ಮಾನಿಸುತ್ತೇವೆ.

ವ್ಯಾಖ್ಯೆಯಲ್ಲಿ ಸಂಬಂಧಿಸಿದ ವಿಷಯದ ಸಮಗ್ರ ಗುಣ ಸೂಚನೆಯನ್ನು ವ್ಯಕ್ತಪಡಿಸುತ್ತೇವೆ. ವ್ಯಾಖ್ಯೆಯು ವಿಚಾರವನ್ನು ಆಲೋಚನೆಯ ಸಹಾಯದಿಂದ ಹೇಳುತ್ತದೆ.

ವ್ಯಾಖ್ಯೆಯು ವೈಜ್ಞಾನಿಕವಾಗಿರುತ್ತದೆ. ವಸ್ತುಗಳ ವಿಚಾರಗಳನ್ನು ಅಥವಾ ಕಲ್ಪನೆಗಳನ್ನು ಸ್ಪಷ್ಟಪಡಿಸುವುದು ವ್ಯಾಖ್ಯೆಯ ಗುರಿಯಾಗಿರುತ್ತದೆ. ವ್ಯಾಖ್ಯೆಯು ತರ್ಕಪದ ತರ್ಕವಾಕ್ಯಗಳನ್ನು ನಿರೂಪಿಸುತ್ತದೆ. ಆದರೆ ತರ್ಕಪದವು ಯಾವ ವಸ್ತುವಿನ ನಾಮವನ್ನು ವರ್ಣಿಸುತ್ತದೆ. ಒಂದು ತರ್ಕಪದದ ಗುಣ ಸೂಚನೆಯನ್ನು ಸೂಚಿಸುವ ಹೇಳಿಕೆಯು ವ್ಯಾಖ್ಯೆಯಾಗಿದೆ. ಗುಣ ಸೂಚನೆಯನ್ನು ಹೊಂದಿರದೆ ತರ್ಕಪದಗಳನ್ನು ವ್ಯಾಖ್ಯಾನಿಸಲು ಸಾಧ್ಯವಿಲ್ಲ. ಅಂತಹ ಸನ್ನಿವೇಶಗಳಲ್ಲಿ ತರ್ಕಪದಗಳು ಸೂಚಿಸುವ ವಸ್ತುಗಳನ್ನು, ಆ ವಸ್ತುಗಳು ಹೋಲುವಂತಹ ಇನ್ನಾವುದೇ ಗುಣ ವಿಶೇಷಗಳನ್ನು ಉಲ್ಲೇಖಿಸಿ ವರ್ಣಿಸುತ್ತೇವೆ.

ಒಂದು ತರ್ಕಪದದ ಸಮಗ್ರ ಗುಣ ಸೂಚನೆಯನ್ನು ಸ್ಪಷ್ಟವಾಗಿ ವ್ಯಕ್ತಪಡಿಸುವ ಹೇಳಿಕೆಯು ವ್ಯಾಖ್ಯೆ ಆಗುತ್ತದೆ. ಒಂದು ತರ್ಕಪದದ ಗುಣ ಸೂಚನೆಯನ್ನು ಆ ತರ್ಕಪದವು ಸೂಚಿಸುವ ಗುಣ ವಿಶೇಷವನ್ನು ಅಥವಾ ಗುಣವಿಶೇಷಗಳ ಸಮೂಹವನ್ನು ಒಳಗೊಂಡಿರುತ್ತದೆ. ಆದ್ದರಿಂದ "ವ್ಯಾಖ್ಯೆ" ಎಂದರೆ ಸಮಗ್ರ ಗುಣ ಸೂಚನೆಯನ್ನು ಒಳಗೊಂಡಿರುತ್ತದೆ ಎಂದರ್ಥ.

ವ್ಯಾಖ್ಯೆಯನ್ನು ಹೀಗೆ ನಿರೂಪಿಸಲಾಗಿದೆ. ತರ್ಕಪದದ ಸಮೀಪ ಜಾತಿ (Proximate senns) ಮತ್ತು ವಿಶೇಷ ಲಕ್ಷಣ (Differrentia)ದ ಗುಣ ಸೂಚನೆಯ ನಿರೂಪಣೆಯೇ ವ್ಯಾಖ್ಯೆಯಾಗುತ್ತದೆ. ಸಮೀಪ ಉಪಜಾತಿಗಳಿಗೆ ಸಾಮಾನ್ಯವಾಗಿರುವ ಎಲ್ಲಾ ಗುಣ ವಿಶೇಷಗಳನ್ನು ಒಳಗೊಂಡಿರುತ್ತದೆ. ಅದಕ್ಕೆ ವಿಶೇಷ ಲಕ್ಷಣಗಳನ್ನು ಸೇರಿಸಿದಾಗ ಮಾತ್ರ ಗುಣ ಸೂಚನೆಯ ನಿರೂಪಣೆಯು ಸಂಪೂರ್ಣವಾಗುತ್ತದೆ. ಒಂದು ತರ್ಕ ಪದವನ್ನು ನಿರೂಪಿಸುವ ಮೊದಲು ವಸ್ತು ಯಾವ ವರ್ಗಕ್ಕೆ ಸೇರುತ್ತದೆ ಮತ್ತು ಯಾವ ಗುಣ ವಿಶೇಷತೆಗಳು ಅದನ್ನು ಇತರ ಸದಸ್ಯರಿಗಿಂತ ಭಿನ್ನವಾಗಿದೆ ಎಂಬುದನ್ನು ನಾವು ಸ್ಪಷ್ಟವಾಗಿ ತಿಳಿದುಕೊಂಡಿರಬೇಕು. ಮಾನವನು

ವಿಚಾರಶೀಲ ಪ್ರಾಣಿ ಎಂದು ನಾವು ಹೇಳುತ್ತೇವೆ. ಅಂದರೆ ಮಾನವನು ಪ್ರಾಣಿ ವರ್ಗಕ್ಕೆ ಸೇರಿದ ಉಪಜಾತಿಯೊಂದರಲ್ಲಿ ಸೇರಿದ್ದಾನೆ ಎಂದರ್ಥ ಹಾಗೂ ಪ್ರಾಣಿ ವರ್ಗದಿಂದ ಯಾವ ರೀತಿಯಲ್ಲಿ ಮಾನವನು ಪ್ರತ್ಯೇಕತೆ ಯಾವ ವಿಭಿನ್ನತೆಯನ್ನು ಹೊಂದಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಆದ್ದರಿಂದ ಮಾನವ ಎಂಬ ಪದವು ಪ್ರಾಣಿಯಾಗಿದೆ. ವಿಚಾರಶೀಲತೆ ಎಂಬ ಪದವು ಮಾನವನ ವಿಶೇಷ ಲಕ್ಷಣವಾಗಿದೆ.

ಹೀಗೆ ನಮ್ಮ ವಿಚಾರಗಳನ್ನು ಮತ್ತು ಕಲ್ಪನೆಗಳನ್ನು ಸಂಪೂರ್ಣವಾಗಿ ತಿಳಿಸುವುದೇ ವ್ಯಾಖ್ಯೆಯ ಉದ್ದೇಶವಾಗಿದೆ. ವ್ಯಾಖ್ಯೆಯು ನಮ್ಮ ಆಲೋಚನೆಗಳನ್ನು ಹೇಳುತ್ತದೆ. (ಆದರೆ ವರ್ಣನೆಯ ಉದ್ದೇಶ ವಸ್ತುಗಳ ಬಗೆಗಿನ ಮಾನಸಿಕ ಸ್ಥಿತಿ ಅಥವಾ ಕಲ್ಪನೆಯನ್ನು ಕೊಡುವುದಾಗಿರುತ್ತದೆ. ವರ್ಣನೆಯು ನಮಗೆ ವಸ್ತುವನ್ನು ಗುರುತಿಸಲು ನೆರವಾಗುತ್ತದೆ. ಅದು ನಮ್ಮ ಕಲ್ಪನೆಯನ್ನು ತಿಳಿಸುತ್ತದೆ)

**ವ್ಯಾಖ್ಯೆಯ ನಿಯಮಗಳು**

ಸಮಂಜಸ ವ್ಯಾಖ್ಯೆಯ ಕೆಳಗಿನ ನಿಯಮಗಳನ್ನು ನಿರೂಪಿಸುತ್ತದೆ.

1. **"ವ್ಯಾಖ್ಯೆಯು ತರ್ಕ ಪದದ ಸಮಸ್ತ ಜಾತಿ/ಗುಣ ಸೂಚನೆಯನ್ನು ಹೆಚ್ಚು ಕಡಿಮೆ ಮಾಡದೆ ವ್ಯಾಖ್ಯೆಯನ್ನು ನಿರೂಪಿಸಬೇಕು"** ಒಂದು ತರ್ಕಪದದ ಗುಣ ಸೂಚನೆಯು ಸಾಮಾನ್ಯ ಮತ್ತು ಅಗತ್ಯವಾದ ಗುಣ ವಿಶೇಷಗಳನ್ನು ಒಳಗೊಂಡಿರುತ್ತದೆ. ತರ್ಕಪದವನ್ನು ವ್ಯಾಖ್ಯಾನಿಸುವಾಗ ಅದರ ಅನವಶ್ಯಕ ಗುಣ ವಿಶೇಷಗಳನ್ನು ಸೇರಿಸದಂತೆ ಕಾಳಜಿ ವಹಿಸಬೇಕು".

   **<u>ಉದಾಹರಣೆ:</u>** ಮಾನವನು ವಿಚಾರ ಶೀಲ ಪ್ರಾಣಿ.

   ಮಾನವ ಎಂಬ ತರ್ಕಪದದ ಗುಣ ಸೂಚನೆಯು ಪ್ರಾಣಿತ್ವ ಮತ್ತು ವಿಚಾರಶೀಲತೆ ಎಂಬ ಸಾರ ಗುಣಗಳನ್ನು ಒಳಗೊಂಡಿರುತ್ತದೆ. ಆದರೆ ಮಾನವ ವಿಚಾರಶೀಲ ನಗುವ ಪ್ರಾಣಿ ಎಂದು ನಾವು ಹೇಳಿದಾಗ ಆಗ ವ್ಯಾಖ್ಯೆಯನ್ನು "ಆಗಂತುಕ ಗುಣ ವ್ಯಾಖ್ಯೆ" ಎಂದು ಕರೆಯಲಾಗುತ್ತದೆ. ಇದರಲ್ಲಿ "ನಗುವ" ಎಂಬ ಗುಣವು ಸಾಮಾನ್ಯವಾಗಿ ಕಂಡು ಬಂದರೂ ಅದು ಮಾನವ ಎಂಬ ತರ್ಕಪದದ ಗುಣವನ್ನು ಅದು ಸೂಚಿಸುವುದಿಲ್ಲ ಎಂಬುದನ್ನು ಗಮನಿಸಬೇಕು.

2. ತರ್ಕಪದವು ಸೂಚಿಸುವ ನಾಮಪದದ ಗುಣ ಸೂಚನೆಯು ಕಡಿಮೆ ಗುಣಗಳನ್ನು ವ್ಯಾಖ್ಯೆಯು ನಿರೂಪಿಸಿದರೆ ಅಂತಹ ವ್ಯಾಖ್ಯೆ "ಅತಿ ವ್ಯಾಪಕ ವ್ಯಾಖ್ಯೆಯ (Too wide dfefinition) ದೋಷವಾಗುತ್ತದೆ. ವ್ಯಾಖ್ಯೆಯು ತರ್ಕಪದದ ವಸ್ತು ನಿರ್ದೇಶನದಲ್ಲಿ ಸೇರಿಸಬೇಕಾಗಿರುವುದಕ್ಕಿಂತ ಹೆಚ್ಚಿನ ವಸ್ತುಗಳಿಗೆ ಅನ್ವಯವಾಗುತ್ತದೆ.

   **ಉದಾಹರಣೆ:**

   1. ಮಾನವನು ಪ್ರಾಣಿಯಾಗಿದ್ದಾನೆ.
   2. ಕಲ್ಲು ಬಂಡೆ ಕಠಿಣ ಅಥವಾ ಗಟ್ಟಿವಸ್ತು.
   3. ಒಂದು ತ್ರಿಭುಜವು ಸಮನಾದ ಬಾಹುಗಳನ್ನು ಹೊಂದಿದೆ.

   ಒಟ್ಟಾರೆ ವ್ಯಾಖ್ಯೆಯು ಅತ್ಯಂತ ಸಮರ್ಪಕವಾಗಿರಬೇಕು, ಸಂಕ್ಷಿಪ್ತವಾಗಿರಬೇಕು ಮತ್ತು ಸಮಗ್ರವಾಗಿರಬೇಕು.

3. ವ್ಯಾಖ್ಯೆಯಲ್ಲಿ ಅಸ್ಪಷ್ಟ ಮತ್ತು ಕ್ಲಿಷ್ಟವಾದ ತರ್ಕಪದಗಳನ್ನು ಒಳಗೊಂಡಿರಬಾರದು. ಆಗ ವ್ಯಾಖೆಯು ಹೆಚ್ಚು ಕಠಿಣ ಪದಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ "ಕ್ಲಿಷ್ಟ ವ್ಯಾಖ್ಯೆಯ ದೋಷಕ್ಕೆ ಒಳಗಾಗುತ್ತದೆ".

**ಉದಾಹರಣೆಗಳು:**

1. ನಿವೃತ್ತಿ ವೇತನ ಎಂದರೆ ಯಾರಿಗಾದರೂ ಅದಕ್ಕೆ ಪ್ರತಿಯಾಗಿ ಏನನ್ನು ಮಾಡದಿರುವುದಕ್ಕೆ ನೀಡುವ ಸಂಭಾವನೆ.
2. ಕಾಮದೇನು ಒಂದು ತರಹದ ವಸ್ತು.
3. ವಾಗ್ಸ್ಫುರಿಯು ಅಡೆತಡೆಯಿಲ್ಲದೆ ನಿರಾಂತಕವಾಗಿ ಹರಿಯುವ ವೇಗ.
4. ವ್ಯಾಖ್ಯೆಯಲ್ಲಿ ಅಲಂಕಾರ ಪದಗಳನ್ನು ಬಳಸಿದರೆ ಆಗ ವ್ಯಾಖ್ಯೆಯು "ಅಲಂಕಾರ ವ್ಯಾಖ್ಯೆಯ ದೋಷಕ್ಕೆ ಒಳಗಾಗುತ್ತದೆ. ಇಂತಹ ವ್ಯಾಖ್ಯೆಯು ಕೆಲವು ವೇಳೆ ತಪ್ಪು ಅರ್ಥವನ್ನು ನೀಡುವುದಲ್ಲದೇ, ಒಂದಕ್ಕಿಂತ ಹೆಚ್ಚು ವಿವರಣೆಯನ್ನು ನೀಡುತ್ತದೆ.

   **ಉದಾಹರಣೆಗಳು:**

   1. ಸಿಂಹವು ಮೃಗಗಳ ರಾಜ
   2. ಅವಶ್ಯಕತೆಯು ಶೋಧನೆಯ ತಾಯಿ.
   3. ಸಂಗೀತವು ವೆಚ್ಚದಾಯಿಕ ಗೊಂದಲ.
   4. ತರ್ಕಶಾಸ್ತ್ರವು ಮನಸ್ಸಿನ ಔಷಧಿ.
   5. ಮಾನವನು ಸೃಷ್ಟಿಯ ಕಳಸ.
   6. ಒಂಟೆಯು ಮರಳುಗಾಡಿನ ಹಡುಗು.

5. ವ್ಯಾಖ್ಯೆಯು ಪರ್ಯಾಯ ಪದಗಳನ್ನು ಒಳಗೊಂಡಿರಬಾರದು. ವ್ಯಾಖ್ಯೆಯಲ್ಲಿ ವಿಷಯ ಮತ್ತು ವಿಧೇಯ ಪದಗಳು ಪರ್ಯಾಯ ಪದಗಳಾಗಿರಬಾರದು. ಆದರೆ ವ್ಯಾಖ್ಯೆಯು ಪರ್ಯಾಯ ಪದಗಳನ್ನು ಒಳಗೊಂಡಿದ್ದರೆ ಆಗ ಅದು "ಪರ್ಯಾಯ ವ್ಯಾಖ್ಯೆಯ" ದೋಷಕ್ಕೆ ಒಳಗಾಗುತ್ತದೆ.

**ಉದಾಹರಣೆಗಳು:**

1. ಮಾನವ ಎಂದರೆ ಮಾನವೀಯತೆ ಇರುವವನು.
2. ಜೀವನ ಎಂದರೆ ಜೀವನಕ್ಕೆ ಅಗತ್ಯವಾದ ಬಲ.
3. ಸಸ್ಯ ಎಂದರೆ ತೋಟದಲ್ಲಿ ಬೆಳೆಯುವ ತರಕಾರಿ
4. ಹಾಸ್ಯಗಾರ ಎಂದರೆ ಹಾಸ್ಯ ಮಾಡುವವನು.

6. ವ್ಯಾಖ್ಯೆಯು ಯಾವಾಗಲೂ ಭಾವಾತ್ಮಕವಾಗಿಯೇ ಇರಬೇಕು. ವ್ಯಾಖ್ಯೆಯು ನಿಷೇಧಾತ್ಮಕವಾಗಿರಬಾರದು. ಭಾವಾತ್ಮಕ ಅರ್ಥವು ಸಮಗ್ರವಾಗಿ ನಿಷೇಧಾತ್ಮಕವಾಗಿದ್ದರೆ ಮಾತ್ರ ವ್ಯಾಖ್ಯೆಯು ನಿಷೇಧಾತ್ಮಕವಾಗಿರುತ್ತದೆ. ತರ್ಕಪದದ ಅರ್ಥವನ್ನು ವಿವರಿಸವುದೇ ವ್ಯಾಖೆಯ ಮೂಲ ಉದ್ದೇಶವಾಗಿದೆ. ಒಂದೇ ಒಂದು ತರ್ಕಪದವು ಯಾವ ಅರ್ಥವನ್ನು ಒಳಗೊಂಡಿರುವುದಿಲ್ಲ ಎಂಬುದನ್ನು ಮಾತ್ರ ನಿಷೇದಾತ್ಮಕ ತರ್ಕ ವಾಕ್ಯ ತಿಳಿಸುತ್ತದೆ. ಆದ ಕಾರಣ ವ್ಯಾಖ್ಯೆಯು ಭಾವಾತ್ಮಕವಾಗಿದ್ದರೆ ಮಾತ್ರ ಅದರ ವಿವರಣೆಯ ಉದ್ದೇಶವನ್ನ ಮಾತ್ರ ಈಡೇರಿಸಬಲ್ಲದು. ಈ ನಿಯಮವನ್ನು ಉಲ್ಲಂಘಿಸಿದರೆ ಅದು ನಿಷೇದಾತ್ಮಕ ವ್ಯಾಖ್ಯೆಯ ದೋಷಕ್ಕೆ ಒಳಗಾಗುತ್ತದೆ.

**ಉದಾಹರಣೆಗಳು:**

1. ಶಾಂತಿಯು ಯುದ್ಧದ ಅನುಪಸ್ಥಿತಿಯು.
2. ಅಜ್ಞಾನ ಎಂಬುದು ಜ್ಞಾನಕ್ಕೆ ವಿರುದ್ಧವಾದದು.
3. ಆಲೋಚನೆ ವಿಚಾರ ಮಾಡುವ ವಸ್ತುವಲ್ಲ.
4. ಬೆಳಕು ಕತ್ತಲೆಯಲ್ಲ.

**ಉಪಸಂಹಾರ:**

ವ್ಯಾಖ್ಯೆಯು ಸುಸ್ಪಷ್ಟತೆಯನ್ನು ನಿಖರತೆಯನ್ನು ಒಳಗೊಂಡಿರಬೇಕು. ಅರ್ಥದೃಷ್ಟಿಯಿಂದ ಅರಿವಿನ ದೃಷ್ಟಿಯಿಂದ ಯಥಾರ್ಥತೆಯನ್ನು ಒಳಗೊಂಡಿರಬೇಕು.

V V V V V

## ಮಾದರಿ ಪ್ರಶ್ನೆಗಳು

**ಒಂದು ಅಂಕದ ಪ್ರಶ್ನೆಗಳು**

1. ತಾರ್ಕಿಕ ವ್ಯಾಖ್ಯೆ ಎಂದರೇನು?
2. ತರ್ಕಪದದ ಸಮೀಪ ಜಾತಿ ಎಂದರೇನು?
3. ಆಗಂತುಕ ಗುಣ ವ್ಯಾಖ್ಯೆ ಎಂದರೇನು?
4. ಕ್ಲಿಷ್ಟ ವ್ಯಾಖ್ಯೆ ಎಂದರೇನು?
5. ಅಲಂಕಾರಿಕ ವ್ಯಾಖ್ಯೆ ಎಂದರೇನು?

**ಎರಡು ಅಂಕದ ಪ್ರಶ್ನೆಗಳು**

6. ಅತಿವ್ಯಾಪಕ ವ್ಯಾಖ್ಯೆ ಎಂದರೇನು?
7. ಪರ್ಯಾಯ ವ್ಯಾಖ್ಯೆ ಎಂದರೇನು?
8. ನಿಷೇಧಾತ್ಮಕ ವ್ಯಾಖ್ಯೆ ಎಂದರೇನು?
9. 'ಮಾನವನೆಂದರೆ ಮಾನವೀಯತೆ ಇರುವವನು' ಈ ದೋಷವನ್ನು ಹೆಸರಿಸಿ..
10. 'ಸಿಂಹವು ಮೃಗಗಳ ರಾಜ' ಈ ದೋಷವನ್ನು ಹೆಸರಿಸಿ.

**ಐದು ಅಂಕದ ಪ್ರಶ್ನೆಗಳು**

11. ಅಲಂಕಾರಿಕ ವ್ಯಾಖ್ಯೆಯನ್ನು ಉದಾಹರಣೆಯೊಂದಿಗೆ ವಿವರಿಸಿ.
12. ಕ್ಲಿಷ್ಟ ವ್ಯಾಖ್ಯೆಯನ್ನು ವಿವರಿಸಿ.
13. ತಾರ್ಕಿಕ ವ್ಯಾಖ್ಯೆಯ ನಿಯಮಗಳನ್ನು ವಿವರಿಸಿ.

**ಹತ್ತು ಅಂಕದ ಪ್ರಶ್ನೆಗಳು**

14. ತರ್ಕ ಪದದ ಸಮೀಪದ ಜಾತಿ ಮತ್ತು ವಿಶೇಷ ಲಕ್ಷಣದ ಗುಣ ಸೂಚನೆಯ ನಿರೂಪಣೆಯೇ ವ್ಯಾಖ್ಯೆ– ಈ ಹೇಳಿಕೆಯನ್ನು ಉದಾಹರಣೆಯೊಂದಿಗೆ ವಿವರಿಸಿ.
15. ಒಳ್ಳೆಯ ವ್ಯಾಖ್ಯೆಯ ಮುಖ್ಯ ಅವಶ್ಯಕ ಅಂಶಗಳಾವುವು.

❖ ❖ ❖ ❖ ❖

# ಅಧ್ಯಾಯ – 7

## ಅ. ಆಧುನಿಕ ಮತ್ತು ಸಾಂಕೇತಿಕ ತರ್ಕಶಾಸ್ತ್ರ

**ಆಧುನಿಕ ತರ್ಕಶಾಸ್ತ್ರ:**

ಸಾಂಪ್ರದಾಯಿಕ ತರ್ಕದಲ್ಲಿ ತಾರ್ಕಿಕವಾಕ್ಯವನ್ನು "ಯಾವುದಾದರೊಂದು ವಿಷಯದ ಬಗ್ಗೆ ಇನ್ನೊಂದು ವಿಷಯವನ್ನು ತಿಳಿಸುವುದು" ಎಂದು ನಿರೂಪಿಸಲಾಗುತ್ತದೆ. ಎಲ್ಲಾ ತಾರ್ಕಿಕ ವಾಕ್ಯಗಳಲ್ಲೂ ಉದ್ದೇಶಪದ ಹಾಗೂ ವಿಧೇಯ ಪದಗಳಿರುತ್ತವೆ. ಉದ್ದೇಶಪದ ಒಂದು ವಸ್ತು, ವ್ಯಕ್ತಿ ಅಥವಾ ವರ್ಗವೂ ಆಗಿರಬಹುದು. ವಿಧೇಯಪದ ಒಂದು ಗುಣವಾಗಿರುತ್ತದೆ. ಹೀಗೆ ಯಾವುದಾದರೊಂದು ಗುಣವನ್ನು ಉದ್ದೇಶಪದಕ್ಕೆ ಅನ್ವಯಿಸುವುದು ಅಥವಾ ನಿರಾಕರಿಸುವುದು ಸಾಂಪ್ರದಾಯಿಕ ತಾರ್ಕಿಕವಾಕ್ಯದ ಲಕ್ಷಣವಾಗಿರುತ್ತದೆ.

**ಉದಾ:–** –1 ರಾಮ ಬುದ್ಧಿವಂತ

2 ರಾಮ ಭಾರತೀಯ

ಸಾಂಪ್ರದಾಯಿಕ ತರ್ಕದಲ್ಲಿ ಈ ವಾಕ್ಯಗಳು ಉದ್ದೇಶಪದ ಮತ್ತು ವಿಧೇಯಪದಗಳ ರೂಪದಲ್ಲಿ ಪರಿಗಣಿಸಲಾಗಿದೆ. ರಾಮ ಬುದ್ಧಿವಂತ, ಇದು ರಾಮನ ಗುಣವನ್ನು ಸೂಚಿಸುತ್ತದೆ. ರಾಮ ಭಾರತೀಯ, ರಾಮನು ಭಾರತೀಯ ವರ್ಗಕ್ಕೆ ಸೇರಿದವನು ಎಂಬುದನ್ನು ಸೂಚಿಸುತ್ತದೆ. ಹೀಗೆ ಸಾಂಪ್ರದಾಯಿಕ ತರ್ಕದಲ್ಲಿ ಉದ್ದೇಶಪದ ಮತ್ತು ವಿಧೇಯಪದಗಳ ನಡುವೆ ಸಂಬಂಧವನ್ನು ಮಾತ್ರ ಗಮನಿಸಿ ಉಳಿದ ರೀತಿಯ ಸಂಬಂಧಗಳನ್ನು ನಿರ್ಲಕ್ಷಿಸಲಾಗಿದೆ.

**ತಾರ್ಕಿಕವಾಕ್ಯಗಳ ಆಧುನಿಕ ವರ್ಗೀಕರಣ**

ತಾರ್ಕಿಕ ವಾಕ್ಯಗಳನ್ನು ಆಧುನಿಕ ತರ್ಕದಲ್ಲಿ 3 ವಿಧಗಳಾಗಿ ವರ್ಗೀಕರಿಸಲಾಗಿದೆ.

1 ಸರಳ ತಾರ್ಕಿಕ ವಾಕ್ಯಗಳು.

2 ಸಂಯುಕ್ತ ತಾರ್ಕಿಕ ವಾಕ್ಯಗಳು.

3 ಸಾಮಾನ್ಯ ತಾರ್ಕಿಕ ವಾಕ್ಯಗಳು.

**1 ಸರಳ ತಾರ್ಕಿಕ ವಾಕ್ಯಗಳು**

ಒಂದೇ ಒಂದು ಸರಳ ಹೇಳಿಕೆಯನ್ನು ಒಳಗೊಂಡ ವಾಕ್ಯವನ್ನು ಸರಳ ತಾರ್ಕಿಕ ವಾಕ್ಯ ಎಂದು ಕರೆಯುತ್ತಾರೆ.

ಉದಾ:– ಕ್ರಾಂತಿ ವೀರ ಸಂಗೊಳ್ಳಿರಾಯಣ್ಣ ಸ್ವಾತಂತ್ರ ಹೋರಾಟಗಾರ.

**2. ಸಂಯುಕ್ತ ತಾರ್ಕಿಕ ವಾಕ್ಯಗಳು**

ಯಾವ ವಾಕ್ಯದಲ್ಲಿ ಒಂದಕ್ಕಿಂತ ಹೆಚ್ಚು ಹೇಳಿಕೆಗಳಿರುತ್ತವೆ ಅಂತಹ ವಾಕ್ಯಗಳನ್ನು ಸಂಯುಕ್ತ ತಾರ್ಕಿಕ ವಾಕ್ಯ ಎಂದು ಕರೆಯುತ್ತೇವೆ.

ಉದಾ :– ಭಾರತೀಯರು ಪ್ರಾಮಾಣಿಕರು ಮತ್ತು ಬುದ್ಧಿವಂತರು.

**3. ಸಾಮಾನ್ಯ ತಾರ್ಕಿಕ ವಾಕ್ಯಗಳು**

ಒಂದು ವಾಕ್ಯದ ಉದ್ದೇಶಪದ ಹಾಗೂ ವಿಧೇಯ ಪದಗಳೆರಡೂ ವರ್ಗಸೂಚಕ ಪದಗಳಾಗಿದ್ದರೆ, ಅಂತಹ ವಾಕ್ಯಕ್ಕೆ ಸಾಮಾನ್ಯ ತಾರ್ಕಿಕ ವಾಕ್ಯ ಎಂದು ಹೆಸರು. ಒಂದು ಸಾಮಾನ್ಯ ತಾರ್ಕಿಕ ವಾಕ್ಯ ವರ್ಗಗಳನ್ನು ಅಪೂರ್ಣ ಅಥವಾ ಪೂರ್ಣವಾಗಿ ಸೂಚಿಸುತ್ತದೆ. ಒಂದು ವರ್ಗವನ್ನು ಮತ್ತೊಂದು ವರ್ಗದಲ್ಲಿ ಸೇರಿಸಬಹುದು ಅಥವಾ ಒಂದು ವರ್ಗವನ್ನು ಇನ್ನೊಂದು ವರ್ಗದಿಂದ ಬೇರ್ಪಡಿಸಬಹುದು.

ಉದಾ:– 1 ಬೆಂಗಳೂರಿನವರು ಭಾರತೀಯರು

2. ಕುದುರೆಗಳು ಕತ್ತೆಗಳಲ್ಲ

**ಸಾಂಕೇತಿಕ ತರ್ಕಶಾಸ್ತ್ರ**

ಆಧುನಿಕ ಸಾಂಕೇತಿಕ ತರ್ಕಶಾಸ್ತ್ರದ ಸ್ಥಾಪಕರು ಜಾರ್ಜ್ ಬೊಲ್ (George Boole) (1815–1864). ಇವರು ಇಂಗ್ಲೆಂಡ್ ದೇಶದ ಒಬ್ಬ ಮಹಾನ್ ಗಣಿತ ಶಾಸ್ತ್ರ ಪಂಡಿತರು ಹಾಗೂ ತತ್ವಜ್ಞಾನಿಗಳಾಗಿದ್ದರು.

ಅನುಮಾನವನ್ನು ಯಾವುದಾದರೊಂದು ಸ್ವಾಭಾವಿಕ ಭಾಷೆಯ ಮೂಲಕ ವ್ಯಕ್ತ ಪಡಿಸುತ್ತೇವೆ. ಅನೇಕ ವೇಳೆ ನಾವು ಬಳಸುವ ಭಾಷೆ ಅಸ್ಪಷ್ಟ, ಸಂದಿಗ್ಧ ಅಲಂಕಾರಿಕ ಆಗಿರಬಹುದು. ಈ ಅಡಚಣೆಗಳನ್ನು ನಿವಾರಿಸಲು ತಾರ್ಕಿಕರು ಕೃತಕ ಸಾಂಕೇತಿಕ ಭಾಷೆಯನ್ನು ಬಳಸುತ್ತಾರೆ. ಸಂಕೇತಗಳನ್ನು ಬಳಸಿದಾಗ ಅನುಮಾನಗಳನ್ನು ನಿಖರವಾಗಿ ವ್ಯಕ್ತಪಡಿಸುವುದು ಸಾಧ್ಯವಾಗುತ್ತದೆ.

ವಸ್ತುಗಳನ್ನು ಮತ್ತು ಗುಣಗಳನ್ನು ಸೂಚಿಸಲು ಎರಡು ರೀತಿಯ ಸಂಕೇತಗಳನ್ನು ಬಳಸುತ್ತೇವೆ. ಆಂಗ್ಲ ವರ್ಣಮಾಲೆಯ a ಯಿಂದ w ವರೆಗಿನ ಸಣ್ಣ ಅಕ್ಷರಗಳನ್ನು ವಸ್ತು ಅಥವಾ ವ್ಯಕ್ತಿಗಳನ್ನು ಸೂಚಿಸಲು ಬಳಸುತ್ತೇವೆ. "ಸಾಕ್ರೇಟಿಸ್'ನ ಸಂಕೇತ 'S', 'ರಾಮ' ನ ಸಂಕೇತ 'r', ವಸ್ತು ಅಥವಾ ವ್ಯಕ್ತಿಗಳ ಗುಣಗಳನ್ನು ಆಂಗ್ಲ ವರ್ಣಮಾಲೆಯ ದೊಡ್ಡ ಅಕ್ಷರಗಳು ಸೂಚಿಸುತ್ತವೆ. ಮೇಲಿನ ಎರಡು ವಾಕ್ಯಗಳ ವಿಧೇಯ ಪದಗಳನ್ನು 'H' ಎಂಬ ಸಂಕೇತದಿಂದ ಸೂಚಿಸುತ್ತೇವೆ. Human= ಮಾನವ Human ಪದದ ಮೊದಲ ಅಕ್ಷರ 'H'. ಸಂಪ್ರದಾಯದಂತೆ ಮೊದಲು ಗುಣವನ್ನು ಸೂಚಿಸಿ ನಂತರ ವಸ್ತು ಅಥವಾ ವ್ಯಕ್ತಿಯನ್ನು ಸೂಚಿಸುತ್ತೇವೆ. ಮೇಲಿನ ಉದಾಹರಣೆಯನ್ನು ಸಾಂಕೇತಿಕವಾಗಿ ಈ ಕೆಳಕಂಡಂತೆ ಬರೆಯಬಹುದು.

ಸಾಕ್ರಟೀಸ್ ಮಾನವ = Hs.

ರಾಮ ಮಾನವ = Hr.

ಸಂಯೋಜನೆ, ನಿರಾಕರಣೆ, ವೈಕಲ್ಪಿಕತೆ ಮತ್ತು ಸೂಚಕತ್ವದ ಸಂಕೇತಗಳು; ಸಂಯುಕ್ತ ವಾಕ್ಯಗಳ ಸತ್ಯಾತಾಕೋಷ್ಟಕಗಳು.

**1. ಸಂಯೋಜನೆ**

ಎರಡು ಹೇಳಿಕೆಗಳನ್ನು 'ಮತ್ತು' ಎನ್ನುವ ಪದದಿಂದ ಒಟ್ಟು ಗೂಡಿಸುವುದನ್ನು ಸಂಯೋಜನೆ ಎನ್ನುತ್ತೇವೆ.

ಉದಾ:– 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ' ಧೀರ 'ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಪ್ರಾಮಾಣಿಕ' ವಾಕ್ಯಗಳನ್ನು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಧೀರನು ಮತ್ತು ಪ್ರಾಮಾಣಿಕ ಎಂದು ಸಂಯೋಜಿಸಬಹುದು.

ಸಂಯೋಜನೆಯ ಸಂಕೇತ "." (ಡಾಟ್). P ಮತ್ತು q ಎರಡು ಹೇಳಿಕೆಗಳಾದರೆ, ಅವುಗಳ ಸಂಯೋಜನೆಯನ್ನು P.q ಎಂದು ಸಾಂಕೇತಿಸಬಹುದು.

ಪ್ರತಿಯೊಂದು ಹೇಳಿಕೆಯೂ ಸತ್ಯ ಅಥವಾ ಅಸತ್ಯವಾಗುತ್ತದೆ. ಆದ್ದರಿಂದ ಪ್ರತಿಯೊಂದು ಹೇಳಿಕೆಗೂ ಸತ್ಯತಾ ಮೌಲ್ಯ ಇರುತ್ತದೆ. ಸತ್ಯವಾದ ಹೇಳಿಕೆಯ ಸತ್ಯತಾ ಮೌಲ್ಯ ಸತ್ಯ (T). ಅಸತ್ಯವಾದ ಹೇಳಿಕೆಯ ಸತ್ಯತಾ ಮೌಲ್ಯ ಅಸತ್ಯ (F). ಸಂಯೋಜಕ ತರ್ಕವಾಕ್ಯಗಳ ಸತ್ಯ ಅದರ ಘಟಕಗಳ ಸತ್ಯದ ಮೇಲೆ ಅವಲಂಬಿತವಾಗುತ್ತದೆ. ಎರಡು ಘಟಕಗಳು ಸತ್ಯವಾದಾಗ ಸಂಯೋಜಕ ವಾಕ್ಯ ಸತ್ಯವಾಗುತ್ತದೆ.

P ಮತ್ತು q ಎರಡು ಹೇಳಿಕೆಗಳೆಂದು ಪರಿಗಣಿಸಿದರೆ, ಅವುಗಳ ಸಂಯೋಜನೆ ಈ ಕೆಳಕಂಡಂತೆ ಸತ್ಯತಾ ಮೌಲ್ಯ ಪಡೆದಿರುತ್ತದೆ.

P ಸತ್ಯವಾದಾಗ q ಸತ್ಯವಾದಾಗ p.q ಸತ್ಯವಾಗುತ್ತದೆ.

P ಸತ್ಯವಾದಾಗ q ಅಸತ್ಯವಾದಾಗ p.q ಅಸತ್ಯವಾಗುತ್ತದೆ.

P ಅಸತ್ಯವಾದಾಗ q ಸತ್ಯವಾದಾಗ p.q ಅಸತ್ಯವಾಗುತ್ತದೆ.

P ಅಸತ್ಯವಾದಾಗ q ಅಸತ್ಯವಾದಾಗ p.q ಅಸತ್ಯವಾಗುತ್ತದೆ.

ಮೇಲಿನ ಸಾಧ್ಯತೆಗಳನ್ನು ಸಂಕ್ಷಿಪ್ತವಾಗಿ ಸತ್ಯತಾ ಮೌಲ್ಯ ಕೋಷ್ಟಕದ ಮೂಲಕ ಸೂಚಿಸಬಹುದು.

| P | Q | P.Q |
|---|---|---|
| T | T | T |
| T | F | F |
| F | T | F |
| F | F | F |

**2. ನಿರಾಕರಣೆ ಅಥವಾ ಅಲ್ಲಗಳೆಯುವಿಕೆ**

ಒಂದು ಹೇಳಿಕೆಯನ್ನು ನಿರಾಕರಿಸಲು ಅಥವಾ ಅಲ್ಲಗಳೆಯಲು 'ಇಲ್ಲ', 'ಆಗಿಲ್ಲ' ಎಂಬ ಪದಗಳನ್ನು ಹೇಳಿಕೆಯಲ್ಲಿ ಬಳಸುತ್ತೇವೆ. ಅಲ್ಲಗಳೆಯುವಿಕೆಯ ಸಂಕೇತ "~"(ಕರ್ಲ್).

P ಯಾವುದಾದರೂ ಒಂದು ಹೇಳಿಕೆಯಾದರೆ ಅದರ ನಿಷೇದಾತ್ಮಕ ರೂಪ ~ P. ಇದರ ಸತ್ಯತಾ ಮೌಲ್ಯ ಕೋಷ್ಟಕ ಈ ಕೆಳಕಂಡಂತೆ ಇದೆ.

| P | ~ P |
|---|---|
| T | F |
| F | T |

**3. ವೈಕಲ್ಪಿಕತೆ**

ಎರಡು ಹೇಳಿಕೆಗಳನ್ನು 'ಅಥವಾ' ಎಂಬ ಪದದಿಂದ ಒಟ್ಟುಗೂಡಿಸಿದರೆ, ವೈಕಲ್ಪಿಕ ಸಂಯುಕ್ತವಾಕ್ಯವಾಗುತ್ತದೆ.

ಉದಾ:– ದಿಲ್ಲಿಯು ಭಾರತದ ರಾಜಧಾನಿ ಅಥವಾ ಬೆಂಗಳೂರು ಭಾರತದ ರಾಜಧಾನಿ. ವೈಕಲ್ಪಿಕತೆಯ ಸಂಕೇತ " V " (ವೆಜ್). ಮೇಲಿನ ಸಂಯುಕ್ತ ವಾಕ್ಯವನ್ನು ದಿಲ್ಲಿಯು ಭಾರತದ ರಾಜಧಾನಿ V ಬೆಂಗಳೂರು ಭಾರತದ ರಾಜಧಾನಿಯಾಗಿದೆ ಎಂದು ಬರೆಯಬಹುದು. P ಮತ್ತು q ಎರಡು ಹೇಳಿಕೆಗಳಾದರೆ, ಅವುಗಳ ಜೋಡಣೆಯನ್ನು PVq ಎಂದು ಸಾಂಕೇತಿಸಬಹುದು.

ವೈಕಲ್ಪಿಕತೆಯು ಈ ಕೆಳಕಂಡಂತೆ ಸತ್ಯತಾ ಮೌಲ್ಯ ಪಡೆದಿರುತ್ತದೆ.

P ಸತ್ಯವಾಗಿ q ಸತ್ಯವಾಗಿ PVq ಸತ್ಯವಾಗುತ್ತದೆ.

P ಸತ್ಯವಾಗಿ q ಅಸತ್ಯವಾದಾಗ PVq ಸತ್ಯವಾಗುತ್ತದೆ.

P ಅಸತ್ಯವಾಗಿ q ಸತ್ಯವಾದಾಗ PVq ಸತ್ಯವಾಗುತ್ತದೆ.

P ಅಸತ್ಯವಾಗಿ q ಅಸತ್ಯವಾದಾಗ PVq ಅಸತ್ಯವಾಗುತ್ತದೆ.

ಮೇಲಿನ ಸಾಧ್ಯತೆಗಳನ್ನು ಸಂಕ್ಷಿಪ್ತವಾಗಿ ಸತ್ಯತಾ ಮೌಲ್ಯಕೋಷ್ಟಕದ ಮೂಲಕ ಸೂಚಿಸಬಹುದು.

| P | Q | PVQ |
|---|---|---|
| T | T | T |
| T | F | T |
| F | T | T |
| F | F | F |

**4. ಸೂಚಕತೆ**

ಎರಡು ಹೇಳಿಕೆಗಳನ್ನು 'ರೆ' ಎಂಬ ಪದದಿಂದ ಒಟ್ಟುಗೂಡಿಸಿದರೆ, ಸೂಚಕ ಸಂಯುಕ್ತ ವಾಕ್ಯ ದೊರೆಯುತ್ತದೆ.

ಉದಾ:– ಅವನು ಸನ್ಯಾಸಿಯಾಗಿದ್ದರೆ, ಕಾವಿ ಬಟ್ಟೆಯನ್ನು ತೊಟ್ಟಿರುತ್ತಾನೆ.

ಸೂಚಕತೆಯ ಸಂಕೇತ "$\supset$" (ಲಾಳ) P ಮತ್ತು q ಎರಡು ಹೇಳಿಕೆಗಳಾದರೆ, ಅವುಗಳ ಸಂಯುಕ್ತ ರೂಪವನ್ನು P $\supset$ q ಎಂದು ಸಾಂಕೇತಿಸಬಹುದು.

ಸೂಚಕತೆಯು ಈ ಕೆಳಕಂಡಂತೆ ಸತ್ಯತಾ ಮೌಲ್ಯ ಪಡೆದಿರುತ್ತದೆ.

P ಸತ್ಯವಾಗಿ q ಸತ್ಯವಾದಾಗ p$\supset$q ಸತ್ಯವಾಗುತ್ತದೆ.

P ಸತ್ಯವಾಗಿ q ಅಸತ್ಯವಾದಾಗ p⊃q ಅಸತ್ಯವಾಗುತ್ತದೆ.

P ಅಸತ್ಯವಾಗಿ q ಸತ್ಯವಾದಾಗ p⊃q ಸತ್ಯವಾಗುತ್ತದೆ.

P ಅಸತ್ಯವಾಗಿ q ಅಸತ್ಯವಾದಾಗ p⊃q ಸತ್ಯವಾಗುತ್ತದೆ.

| P | Q | P⊃Q |
|---|---|---|
| T | T | T |
| T | F | F |
| F | T | T |
| F | F | T |

## ಬ. ಆಲೋಚನೆಯ ಮೂಲ ನಿಯಮಗಳು

ಸಾಂಪ್ರದಾಯಿಕವಾಗಿ ತರ್ಕಶಾಸ್ತ್ರಜ್ಞರು, ತರ್ಕಶಾಸ್ತ್ರವು ವೈಜ್ಞಾನಿಕವಾಗಿ ಸಮರ್ಪಕ ಚಿಂತನೆಯನ್ನು ನಿರೂಪಿಸುತ್ತದೆ ಎಂದು ಹೇಳುತ್ತಾರೆ. ಇವರ ಪ್ರಕಾರ ಅನೇಕ ಅನುಮಾನದ ರೂಪಗಳನ್ನು ಕಂಡು ಹಿಡಿಯುವ ಉದ್ದೇಶವಾಗಿರುತ್ತದೆ.

ಇಂತಹ ಅನುಮಾನಗಳು ಸಮರ್ಪಕತೆಯ ತತ್ವಗಳಾಗಿರುತ್ತವೆ. ಈ ಸಮರ್ಪಕ ಚಿಂತನೆಯ ತತ್ವಗಳನ್ನು ಅಥವಾ ಸಮಂಜಸ ಅನುಮಾನಗಳನ್ನು ಆಲೋಚನೆಯ ಮೂಲ ನಿಯಮಗಳೆಂದು ಕರೆಯಲಾಗಿದೆ.

ಸಾಂಪ್ರದಾಯಿಕ ತರ್ಕಶಾಸ್ತ್ರಜ್ಞರ ಪ್ರಕಾರ, ಆಲೋಚನೆಯ ಮೂಲ ನಿಯಮಗಳನ್ನು ಮೂರು ವಿಧಗಳಾಗಿ ವಿಂಗಡಿಸಲಾಗಿದೆ.

1. ಅನನ್ಯತಾ ನಿಯಮ ಅಥವಾ ಏಕತೆಯ ನಿಯಮ (The law of identity)
2. ಧ್ರುವ ವಿರೋಧ ನಿಯಮ ಅಥವಾ ಪರಸ್ಪರ ವಿರೋಧ ನಿಯಮ (The law of contradiction)
3. ವಿಮಧ್ಯ ನಿಯಮ (The law of excluded middle)

### 1. ಅನನ್ಯತಾ ನಿಯಮ

ಈ ನಿಯಮವು ಸಹಜವಾಗಿ 'ಎ' ಯು 'ಎ' ಆಗಿರುತ್ತದೆ. ಅಥವಾ 'ಎ' ವಸ್ತು ಎಷ್ಟಾಗಿರುತ್ತದೆ ಅಥವಾ ಎಷ್ಟಿರುತ್ತದೆ ಎಂದು ಹೇಳುತ್ತದೆ. ಒಂದು ವಸ್ತುವಿನ ದ್ರವ್ಯಾಂಶವನ್ನು ಹೋಲುವಂತಹ ವೈವಿದ್ಯತೆ ಸನ್ನಿವೇಶಗಳು ಬದಲಾಗದೆ ಒಂದೇ ರೀತಿಯಾಗಿ ಉಳಿದಿರುತ್ತವೆ. ಆದರೆ ಅವುಗಳ ಗುಣಾಂಶಗಳು ಬದಲಾಗಬಹುದು. ಆದರೆ 'ಸಾಕ್ರೆಟಿಸ್' ಎಂಬ ವ್ಯಕ್ತಿಯು ಶೈಶವ, ಬಾಲ್ಯ, ಯೌವನ ಮುಂತಾದ ಅವಸ್ಥೆಗಳನ್ನು ಅನುಭವಿಸಿದರು, ಈ ಎಲ್ಲ ಅವಸ್ಥೆಗಳು ಅವನು ಸಾಕ್ರೆಟಿಸ್‌ನಾಗಿಯೆ ಇರುತ್ತಾನೆ ಎಂದು ಹೇಳುತ್ತದೆ. ಇದರಂತೆ ಎಲ್ಲಾ

ಬದಲಾವಣೆಗಳಲ್ಲಿಯೂ ಅವನ ಅನನ್ಯತೆ ಅಥವಾ ಏಕತೆ ಬದಲಾಗದೆ ಇರುತ್ತದೆ ಎಂಬುದು ಅನನ್ಯತಾ ನಿಯಮದ ಸಾರಂಶ.

**2. ಧ್ರುವ ವಿರೋಧ ನಿಯಮ**

ಧ್ರುವ ವಿರೋಧ ನಿಯಮದ ತತ್ವಗಳನ್ನು ಹಲವು ರೀತಿಯಲ್ಲಿ ತಿಳಿಸಲಾಗಿದೆ. 'ಎ' ಎಂಬ ವಸ್ತು 'ಎ' ಆಗಿಯು 'ಎ' ಅಲ್ಲದೆಯು, ಎರಡು ಆಗಿರಲಾರದು ಅಥವಾ 'ಎ' ಆಗಿರುತ್ತದೆ ಮತ್ತು 'ಎ' ಆಗಿರುವುದಿಲ್ಲ. ಎಂದು ಅಥವಾ ಎ ಇಲ್ಲ ಎಂಬ ವಿರೋಧವನ್ನು ತಿಳಿಸುತ್ತದೆ.

ಹೀಗೆ ಎರಡು ವಿರೋಧಾತ್ಮಕ ದ್ರವ್ಯಾಂಶಗಳು ಹೇಳುವ ನಿರ್ಣಯಗಳು ಒಂದೇ ರೀತಿ ಸತ್ಯವಾಗಿರುವುದಿಲ್ಲ. ಅಥವಾ ಎರಡು ಅಸಮಂಜಸ ಗುಣಗಳು ಅದೇ ಸಮಯದಲ್ಲಿ ಒಂದೇ ವಸ್ತು ಒಂದೇ ರೀತಿಯ ಗುಣಗಳನ್ನು ಹೊಂದಿರುವುದಿಲ್ಲ.

ಉದಾಹರಣೆ :– ಈ ಪಾನೀಯ ಸಿಹಿಯಾಗಿದೆ.

ಇದು ಸಿಹಿಯಾಗಿದೆ ಎಂದಾಗ ಅದು ಸಿಹಿಯಾಗಿಲ್ಲ ಮತ್ತು ಸಿಹಿಯಾಗಿದೆ ಎಂದು ವಿರೋಧವನ್ನು ಹೇಳುತ್ತದೆ. ಅದೇ ಸಂದರ್ಭದಲ್ಲಿ 'ಸಿಹಿ' ಮತ್ತು 'ಸಿಹಿ' ಅಲ್ಲ ಎಂಬುದು ಒಂದೇ ರೀತಿಯ ಗುಣಗಳನ್ನು ಹೊಂದಿರುವುದಿಲ್ಲ.

ಹೀಗೆ ಒಂದೇ ವಸ್ತುವಿನಲ್ಲಿ ಅಸಮಂಜಸ ತರ್ಕ ಪದಗಳು ಎರಡು ರೀತಿಯ ಗುಣಗಳನ್ನು ಹೊಂದಿರುವುದಿಲ್ಲ ಎಂಬ ತತ್ವಗಳನ್ನು ಹೇಳುತ್ತದೆ ಮತ್ತು ಎರಡು ವಿರೋಧಾತ್ಮಕ ತರ್ಕವಾಕ್ಯಗಳು ಅದೇ ಸಂದರ್ಭದಲ್ಲಿ ಎರಡು ರೀತಿಯ ಸತ್ಯವನ್ನು ಹೊಂದಿರುವುದಿಲ್ಲ ಎಂದು ತಿಳಿಸುತ್ತದೆ.

**3. ವಿಮಧ್ಯ ನಿಯಮ**

ವಿಮಧ್ಯ ನಿಯಮದ ಪ್ರಕಾರ ಎರಡು ಧ್ರುವವಿರೋಧ ತರ್ಕವಾಕ್ಯಗಳು ಒಂದೇ ಬಾರಿಗೆ ಅಸತ್ಯವು ಆಗಿರುವುದಿಲ್ಲ. ಅಥವಾ ಸತ್ಯವೂ ಆಗಿರುವುದಿಲ್ಲ. ಒಂದು ಸತ್ಯವಾದರೆ, ಮತ್ತೊಂದು ಅಸತ್ಯವಾಗಿರಬೇಕು. ಉದಾ : ಜವಹರಲಾಲ್ ನೆಹರು ಬದುಕಿದ್ದಾರೆ ಎಂದರೆ, ಇದು ಅಸತ್ಯವಾಗಿದೆ. ಆದರ ಪರಸ್ಪರ ವಿರೋಧ ಹೇಳಿಕೆಯು ಜವಹರಲಾಲ್‌ನೆಹರು ಬದುಕಿರುವುದಿಲ್ಲ ಎಂಬ ವಾಕ್ಯವು ಸತ್ಯವಾಗಿರುತ್ತದೆ.

ಧ್ರುವವಿರೋಧ ನಿಯಮದಂತೆ ವಿಮಧ್ಯ ನಿಯಮವು ಪರಸ್ಪರ ವಿರೋಧ ತರ್ಕ ವಾಕ್ಯಗಳನ್ನು ಅನ್ವಯಿಸಿ ಕಲ್ಪನೆ ಆಧಾರದ ಮೇಲೆ ಸಂದರ್ಭನುಸಾರ ಉಲ್ಲೇಖಿಸುತ್ತದೆ. ಮಿಲ್ಲನು ಈ ನಿಯಮವನ್ನು ಹೆಚ್ಚಾಗಿ ಆಕ್ಷೇಪಿಸುತ್ತಾನೆ. ಅವನು ತರ್ಕವಾಕ್ಯಕ್ಕೆ ಸಂಬಂಧಿಸಿದ ಮೂರು ರೀತಿಯ ಸಾಧ್ಯವಿರುವ ಅಂಶಗಳನ್ನು ಹೊರಗೆಳೆಯುತ್ತಾನೆ. ಒಂದು ವಾಕ್ಯವು ಸತ್ಯವಾಗಿರಬಹುದು ಅಥವಾ ಅಸತ್ಯವಾಗಿರಬಹುದು ಅಥವಾ ಅರ್ಥಪೂರ್ಣವಾಗಿಲ್ಲದಿರಬಹುದು. ಆದುದರಿಂದ ತರ್ಕ ವಾಕ್ಯಗಳು ಯಾವಾಗಲು ಸತ್ಯವಾಗಿಯೆ ಇರುತ್ತವೆ. ಅದೇ ಅನ್ಯ ಪರಸ್ಪರ ವಿರೋಧ ತರ್ಕವಾಕ್ಯಗಳು ಎರಡರಲ್ಲಿ ಒಂದು ಸತ್ಯವಾಗಿರಬಹುದು ಅಥವಾ ಅರ್ಥಪೂರ್ಣವಾಗಿಲ್ಲದಿರಬಹುದು. ಏನೇ ಆದರು ಅರ್ಥವಿಲ್ಲದ ಹೇಳಿಕೆಯು ತರ್ಕವಾಕ್ಯವಾಗಲಾರದು. ಆದರೆ ಇದು ಯೋಗ್ಯವಾದ ಆಕ್ಷೇಪಣೆ ಅಲ್ಲ. ಆದುದರಿಂದ ಒಂದು ವಸ್ತುವಿಗೆ ಅನ್ವಯಿಸಲಾಗುತ್ತದೆ. (ಹೀಗೆ ವಿಮಧ್ಯ ನಿಯಮವು ಪುನರ್ ವಿಮರ್ಶೆ ಮಾಡುತ್ತದೆ) ಎಂಬ ವಿಮಧ್ಯ ನಿಯಮವು ಈ ರೀತಿಯಾಗಿ

ವಿವರಿಸುತ್ತದೆ. " ಒಂದು ವಸ್ತುವು ಎರಡರಲ್ಲಿ ಒಂದು ಆಗಿರುತ್ತದೆ. ಅದು 'ಎ' ಆಗಿರುತ್ತದೆ ಅಥವಾ 'ಎ' ಆಗಿರುವುದಿಲ್ಲ". ಹೀಗೆ ಒಂದು ವಸ್ತುವಿನ ಪರಸ್ಪರ ವಿರೋಧ ನಿಯಮವು ಎರಡು ರೀತಿಯ ಗುಣಗಳ ಸಾಮ್ಯವನ್ನು ಹೊಂದಿರುತ್ತದೆ.

## ಮಾದರಿ ಪ್ರಶ್ನೆಗಳು

**ಒಂದು ಅಂಕಗಳ ಪ್ರಶ್ನೆಗಳು:**

1. ಆಲೋಚನೆಯ ನಿಯಮ ಎಂದರೇನು?
2. ಅನನ್ಯತಾ ನಿಯಮ ಎಂದರೇನು?
3. ಧ್ರುವ ವಿರೋಧ ನಿಯಮ ಅಥವಾ ಪರಸ್ಪರ ವಿರೋಧ ನಿಯಮ ಎಂದರೇನು?
4. ವಿಮಧ್ಯ ನಿಯಮ ಎಂದರೇನು?
5. ಸರಳ ತಾರ್ಕಿಕವಾಕ್ಯ ಎಂದರೇನು?
6. ಸಂಯುಕ್ತ ತಾರ್ಕಿಕವಾಕ್ಯ ಎಂದರೇನು?
7. ಆಧುನಿಕ ಸಾಂಕೇತಿಕ ತರ್ಕಶಾಸ್ತ್ರದ ಸ್ಥಾಪಕರು ಯಾರು?

**ಎರಡು ಅಂಕಗಳ ಪ್ರಶ್ನೆಗಳು:**

8. ಸಾಮಾನ್ಯ ತಾರ್ಕಿಕವಾಕ್ಯ ಎಂದರೇನು?
9. ಸಂಯೋಜನೆ ಎಂದರೇನು?
10. ನಿರಾಕರಣೆ ಅಥವಾ ಅಲ್ಲಗಳೆಯುವಿಕೆ ಎಂದರೇನು?
11. ವೈಕಲ್ಪಿಕ ತರ್ಕವಾಕ್ಯ ಎಂದರೇನು?
12. ಸೂಚಕ ಸಂಯುಕ್ತ ತರ್ಕವಾಕ್ಯ ಎಂದರೇನು?

**ಐದು ಅಂಕಗಳ ಪ್ರಶ್ನೆಗಳು:**

13. ಅನನ್ಯತಾ ನಿಯಮವನ್ನು ವಿವರಿಸಿ.
14. ಧ್ರುವ ವಿರೋಧ ನಿಯಮವನ್ನು ವಿವರಿಸಿ.
15. ವಿಮಧ್ಯ ನಿಯಮವನ್ನು ವಿವರಿಸಿ.
16. ಸಂಯೊಜನೆಯ ಸತ್ಯತಾ ಕೋಷ್ಠಕವನ್ನು ವಿವರಿಸಿ.
17. ನಿರಾಕರಣೆ ಅಥವಾ ಅಲ್ಲಗಳೆಯುವಿಕೆಯ ಸತ್ಯತಾ ಕೋಷ್ಠಕವನ್ನು ವಿವರಿಸಿ.
18. ವೈಕಲ್ಪಿಕತೆಯ ಸತ್ಯತಾ ಕೋಷ್ಠಕವನ್ನು ತಿಳಿಸಿ.
10. ಸೂಚಕತೆಯ ಸತ್ಯತಾ ಕೋಷ್ಠಕವನ್ನು ರಚಿಸಿ ವಿವರಿಸಿ.

**ಹತ್ತು ಅಂಕಗಳ ಪ್ರಶ್ನೆಗಳು:**

20. ಆಲೋಚನೆಯ ಮೂಲ ನಿಯಮಗಳನ್ನು ವಿವರಿಸಿ.

❖ ❖ ❖ ❖ ❖

# ಅಧ್ಯಾಯ – 8

## ಭಾರತೀಯ ತರ್ಕಶಾಸ್ತ್ರದ ಮೂಲಾಂಶಗಳು

**ಪೀಠಿಕೆ:**

ಭಾರತೀಯ ತರ್ಕಶಾಸ್ತ್ರ ಪ್ರಾಚೀನ ಕಾಲದಲ್ಲಿ ವಿಕಸನ ಹೊಂದಿತ್ತು. **ಭಾರತೀಯ ತರ್ಕಶಾಸ್ತ್ರದ ಪಿತಾಮಹ ಗೌತಮ**. ಗೌತಮರ ನ್ಯಾಯಸೂತ್ರ ಭಾರತೀಯ ತರ್ಕಶಾಸ್ತ್ರದ ಮೂಲಗ್ರಂಥವಾಗಿದೆ. ಆ ನಂತರದಲ್ಲಿ ವಾತ್ಸಾಯನ, ಉದ್ಯೋತಕ, ವಾಚಸ್ಪತಿ, ಮೊದಲಾದ ಪಂಡಿತರು ತರ್ಕಶಾಸ್ತ್ರದ ವಿಕಸನಕ್ಕೆ ನೆರವಾದರು. ಪ್ರಾಚೀನ ಭಾರತದಲ್ಲಿ ತರ್ಕವನ್ನು **"ಪದಾರ್ಥ ಪ್ರತಿಪಾದನೆ"** ಎಂದು ಸಂಭೋದಿಸಲಾಗುತ್ತಿತ್ತು.

**ಅನುಮಾನ:**

ಭಾರತೀಯ ತರ್ಕಶಾಸ್ತ್ರದ ಪ್ರಕಾರ ಅನುಮಾನ ಜ್ಞಾನದ ಪರೋಕ್ಷ ಮೂಲ. **ಅನುಮಾನ** ಎಂಬ ಪದ **'ಅನು'** ಮತ್ತು **'ಮಾನ'** ಎಂಬ ಪದಗಳಿಂದ ಹುಟ್ಟಿದೆ. **'ಅನು'** ಎಂದರೆ ನಂತರ; **'ಮಾನ'** ಎಂದರೆ ಜ್ಞಾನ. ಇವೆರಡೂ ಅರ್ಥಗಳನ್ನು ಒಂದುಗೂಡಿಸಿದರೆ ಪ್ರತ್ಯಕ್ಷದ ನಂತರ ಜ್ಞಾನ ಅನುಮಾನವಾಗುತ್ತದೆ. ಭಾರತೀಯ ತರ್ಕದ ಪ್ರಾರಂಭದಲ್ಲಿ ಹತ್ತು ವಾಕ್ಯಗಳುಳ್ಳ ಅನುಮಾನ ಪ್ರಚಲಿತದಲ್ಲಿತ್ತು. ಕಾಲಾನುಕ್ರಮೇಣ ಇದು ಪರಿಷ್ಕಾರಗೊಂಡು ನ್ಯಾಯದರ್ಶನದ ಗೌತಮನ ಕಾಲಕ್ಕೆ ಐದು ವಾಕ್ಯಗಳಿಗೆ ಸೀಮಿತವಾಯಿತು. ಆದರೆ ಭೌದ್ಧ ತಾರ್ಕಿಕರು ಎರಡು ಅವಯವಗಳುಳ್ಳ ನ್ಯಾಯವನ್ನು ಮಾತ್ರ ಅಂಗೀಕರಿಸುತ್ತಾರೆ. ಮೀಮಾಂಸಕರು ನ್ಯಾಯಕ್ಕೆ ಮೂರು ಅವಯವಗಳು ಸಾಕೆಂದು ಭಾವಿಸುತ್ತಾರೆ.

**ಭಾರತೀಯ ತರ್ಕ ಪರಂಪರೆಯಲ್ಲಿ ಜ್ಞಾನವನ್ನು ಐದು ವಿಧಗಳಲ್ಲಿ ಪಡೆಯಬಹುದು.**

1. **ಪ್ರತ್ಯಕ್ಷ:** ಇಂದ್ರಿಯಾನುಭವದಿಂದ ಪಡೆಯುವ ಜ್ಞಾನ.
2. **ಅನುಮಾನ:** ಆಲೋಚನೆಯಿಂದ ಪಡೆಯುವ ಜ್ಞಾನ
3. **ಉಪಮಾನ (ಹೋಲಿಕೆ):** ಅನುರೂಪತೆಯ ಆಧಾರದ ಮೇಲೆ ಪಡೆಯುವ ಜ್ಞಾನ
4. **ಶಬ್ದ (ಪ್ರಮಾಣ):** ಪರಿಣಿತರಿಂದ ಪಡೆಯುವ ಜ್ಞಾನ
5. **ಅರ್ಥಪತ್ತಿ:** ಇಂದ್ರಿಯಗಮ್ಯವಲ್ಲದ ವಸ್ತು ಅಥವಾ ವಿಷಯವನ್ನು ಇನ್ನೊಂದು ವಸ್ತು ಅಥವಾ ವಿಷಯವನ್ನು ವಿವರಿಸುವುದಕ್ಕೆ ಊಹಿಸಿದ ವಿಧಾನ

**ಭಾರತೀಯ ತರ್ಕ ಸಂಪ್ರದಾಯದಂತೆ ಅನುಮಾನ ಐದು ಅವಯವ(ವಾಕ್ಯ)ಗಳನ್ನು ಹೊಂದಿದೆ.**

1. **ಪ್ರತಿಜ್ಞಾ:** ಯಾವುದನ್ನು ವಿವರಿಸಬೇಕಾಗಿದೆಯೋ ಅಥವಾ ಸಮರ್ಥಿಸಬೇಕಾಗಿದೆಯೋ ಅದು.
2. **ಹೇತು:** ಕಾರಣ ಅಥವಾ ಸಾಧಕ
3. **ಉದಾಹರಣ:** ಕಾರಣಕ್ಕೂ (ಹೇತುವಿಗೂ) ಸಾಧ್ಯಕ್ಕೂ ಇರುವ ಅವಿನಾಭಾವ ಸಂಬಂಧ

4. **ಉಪನಯ:** ಅವಿನಾಭಾವ ಸಂಬಂಧದ ನಿದರ್ಶನವನ್ನು ಸೂಚಿಸುತ್ತದೆ.
5. **ನಿಗಮನ:** ತೀರ್ಮಾನ ವಾಕ್ಯವಾಗಿರುತ್ತದೆ.

ಈ ಮೇಲಿನ ಅನುಮಾನದಲ್ಲಿ ಐದು ವಾಕ್ಯ **(ಅವಯವ)** ಗಳಿರುವುದರಿಂದ **'ಪಂಚಾವಯವನ್ಯಾಯ'** ಎಂದು ಕರೆಯಲಾಗುತ್ತದೆ. **'ಪಂಚಾವಯವನ್ಯಾಯ'**ಕ್ಕೆ ಭಾರತೀಯರು ಸಾಮಾನ್ಯವಾಗಿ ಈ ಉದಾಹರಣೆಯನ್ನು ಕೊಡುತ್ತಾರೆ.

1. **ಪ್ರತಿಜ್ಞಾ:** ಎದುರಿನ ಬೆಟ್ಟದಲ್ಲಿ ಬೆಂಕಿ ಇದೆ.
2. **ಹೇತು/ಕಾರಣ/ಸಾಧಕ:** ಏಕೆಂದರೆ ಅದರಲ್ಲಿ ಹೊಗೆ ಇದೆ.
3. **ಉದಾಹರಣ:** ಹೊಗೆ ಯಾವುದರಲ್ಲಿದೆಯೋ ಅದರಲ್ಲಿ ಬೆಂಕಿ ಇದೆ.
4. **ಉಪನಯ:** ಈ ಬೆಟ್ಟ ಬೆಂಕಿಯಿಂದ ವ್ಯಾಪ್ತವಾದ ಹೊಗೆಯುಳ್ಳದ್ದು.
5. **ನಿಗಮನ:** ಎದುರಿನ ಬೆಟ್ಟದಲ್ಲಿ ಬೆಂಕಿ ಇದೆ.

ಈ ಉದಾಹರಣೆಯಲ್ಲಿ ಸಾಧಿಸಬೇಕಾದ ವಿಷಯ ಪರ್ವತ ಬೆಂಕಿ ಉಳ್ಳದ್ದು. ಆದ್ದರಿಂದ ಅದು ಪ್ರತಿಜ್ಞಾ, ಹೊಗೆ ಇರುವುದರಿಂದ ಎಂಬುದು ಹೇತು ಅಥವಾ ಆಧಾರವನ್ನು ಸೂಚಿಸುತ್ತದೆ. ಹೊಗೆ ಯಾವುದರಲ್ಲಿದೆಯೋ ಅದರಲ್ಲಿ ಬೆಂಕಿ ಇದೆ ಎಂಬುದು ಹೇತು ಮತ್ತು ಸಾಧ್ಯದ ನಡುವೆ ಇರುವ ಸಂಬಂಧವನ್ನು ಸೂಚಿಸುತ್ತದೆ.

ಈ ಮೇಲಿನ ಉದಾಹರಣೆಯಲ್ಲಿ ಯಾವುದರ ಬಗ್ಗೆ ವಿಚಾರ ಮಾಡುತ್ತೇವೆಯೋ ಅದಕ್ಕೆ **ಪಕ್ಷಪದ** ಎಂದು ಹೆಸರು. ಬೆಟ್ಟ ಇದರ ಪಕ್ಷವಾಗಿದೆ. ಪಕ್ಷದಲ್ಲಿ ಏನಿದೆ ಎಂದು ಸಾಧಿಸಲು ಪ್ರಯತ್ನಿಸುತ್ತೇವೆಯೋ ಅದು ಸಾಧ್ಯ ಅಥವಾ ಲಿಂಗಿ ಎಂದಾಗುತ್ತದೆ. ಬೆಂಕಿ ಇದೆ ಎಂದು ಈ ಉದಾಹರಣೆಯಲ್ಲಿ ಸಾಧಿಸಲು ಪ್ರಯತ್ನಿಸುತ್ತೇವೆ. ಆದ್ದರಿಂದ ಬೆಂಕಿ **ಸಾಧ್ಯಪದ**ವಾಗುತ್ತದೆ. ಯಾವುದರ ಆಧಾರದ ಮೇಲೆ ಸಾದ್ಯವನ್ನು ಸಾಧಿಸುತ್ತೇವೆಯೋ ಅದು **ಹೇತು** ಎಂದು ಆಗುತ್ತದೆ. ಪಕ್ಷಕ್ಕೂ ಅಂದರೆ ಬೆಟ್ಟಕ್ಕೂ ಲಿಂಗಿ ಅಂದರೆ ಬೆಂಕಿಗೂ ಮಧ್ಯವರ್ತಿಯಾಗಿ ಅವೆರಡಕ್ಕೂ ಸಂಬಂಧ ಏರ್ಪಡುವುದು ಹೇತು ಅಥವಾ ಹೊಗೆ. ಈ ಮೂರು ಪದಗಳು ಪಾಶ್ಚಿಮಾತ್ಯ ತ್ರಿವಾಕ್ಯಾನುಮಾನದ ಪಕ್ಷಪದ, ಸಾಧ್ಯಪದ ಮತ್ತು ಮಧ್ಯಮಪದಗಳಿಗೆ ಸಮಾನವಾದ ಪದಗಳಾಗಿವೆ.

ಭಾರತೀಯ ನ್ಯಾಯದ ಅವಯವಗಳಾದ ಪ್ರತಿಜ್ಞಾ ಮತ್ತು ಉಪನಯಗಳನ್ನು ಬಿಟ್ಟು ಮೂರನೇಯದನ್ನು ಮೊದಲನೇ ಪ್ರತಿಜ್ಞೆಯನ್ನಾಗಿಯೂ ಅಂದರೆ ಸಾಧ್ಯವಾಕ್ಯವಾಗಿಯೂ ಎರಡನೆಯದನ್ನು ಪಕ್ಷವಾಕ್ಯವಾಗಿಯೂ ಐದನೇಯದನ್ನು ತೀರ್ಮಾನವಾಗಿಯೂ ಜೋಡಿಸಿದರೆ ಅದು ಅರಿಸ್ಟಾಟಲ್‌ನ ತ್ರಿವಾಕ್ಯಾನುಮಾನದ ರೂಪವನ್ನು ಹೊಂದುತ್ತದೆ.

**ಉದಾ:** ಎಲ್ಲೆಲ್ಲಿ ಹೊಗೆ ಇದೆಯೋ ಅಲ್ಲಿ ಬೆಂಕಿ ಇದೆ – **ಸಾಧ್ಯವಾಕ್ಯ**

ಬೆಟ್ಟ ಹೊಗೆಯುಳ್ಳದ್ದು – **ಪಕ್ಷವಾಕ್ಯ**

ಆದ್ದರಿಂದ ಬೆಟ್ಟ ಬೆಂಕಿ ಉಳ್ಳದ್ದು – **ತೀರ್ಮಾನ**

ಮೇಲಿನ ಉದಾಹರಣೆಯಲ್ಲಿ ಹೊಗೆ – **ಮಧ್ಯಮಪದ** (middle term); ಬೆಂಕಿ – **ಸಾಧ್ಯಪದ** (major term) ಮತ್ತು ಬೆಟ್ಟ – **ಪಕ್ಷಪದ** (minor term).

ಅನುಮಾನದಲ್ಲಿ ಹೇತು(ಕಾರಣ) ಮುಖ್ಯವಾಗಿರುತ್ತದೆ. ಅನುಮಾನ ಸಮಂಜಸ–ವಾಗಬೇಕಾದರೆ ಅದು ಸದ್ – ಹೇತುವಾಗಿರಬೇಕು.

**ಉದ್ಯೋತಕ ತಾರ್ಕಿಕರ ಅಭಿಪ್ರಾಯದಂತೆ ಸದ್ – ಹೇತುವಿನ ಲಕ್ಷಣಗಳು**

1. ಹೇತು ಪಕ್ಷದಲ್ಲಿ ಪೂರ್ಣವಾಗಿ ವ್ಯಾಪಿಸಿರಬೇಕು. **(ಪಕ್ಷ ಸತ್ವ)**
   **ಉದಾ:** ಪರ್ವತದ ಮೇಲೆ ಹೊಗೆ ಇರಬೇಕು.
2. ಅದು ಸಾಧ್ಯವಿರುವ ಭಾವಾತ್ಮಕ ನಿದರ್ಶನಗಳಲ್ಲಿ ಇರಬೇಕು. **(ಸಪಕ್ಷ ಸತ್ವ)**
   **ಉದಾ:** ಬೆಂಕಿ ಇರುವ ಕುಲುಮೆಯಲ್ಲಿ ಹೊಗೆಯು ಇರಬೇಕು
3. ಅದು ಸಾಧ್ಯ ಇಲ್ಲದಿರುವ ಅಭಾವಾತ್ಮಕ ನಿದರ್ಶನಗಳಲ್ಲಿ ಇರಬಾರದು. **(ದ್ವಿಪಕ್ಷತ್ವ)**

   **ಉದಾ:** ಬೆಂಕಿ ಇಲ್ಲದ ಕಡೆ ಹೊಗೆಯೂ ಇರಬಾರದು.
   ಈ ಲಕ್ಷಣಗಳಿಲ್ಲದ ಹೇತು ಅಸತ್ ಹೇತುವಾಗುತ್ತದೆ. ಅಸತ್ ಹೇತುವುಳ್ಳ ಅನುಮಾನ ಅಸಮಂಜಸವಾಗುತ್ತದೆ.

**ಭಾರತೀಯ ಅನುಮಾನದ ವರ್ಗೀಕರಣ**

**ಭಾರತೀಯ ನ್ಯಾಯದಲ್ಲಿ ಅನುಮಾನವನ್ನು ಮೂರು ವಿಭಿನ್ನ ರೀತಿಯಲ್ಲಿ ವರ್ಗೀಕರಿಸುತ್ತಾರೆ.**

**ಅನುಮಾನವನ್ನು ಮೂರು ವಿಧವಾಗಿ ವಿಂಗಡಿಸುತ್ತಾರೆ.**

1. ಪೂರ್ವವತ್
2. ಶೇಷವತ್
3. ಸಾಮಾನ್ಯತೋದೃಷ್ಟ

1. **ಪೂರ್ವವತ್:** ಕಾರಣದಿಂದ ಕಾರ್ಯವನ್ನು ಊಹಿಸುವ ಅನುಮಾನ ಅಥವಾ ಪೂರ್ವ ಹೋಲಿಕೆಯೇ ಆಧಾರವಾಗಿರುವ ತರ್ಕ ವಿಧಾನ.

   **ಉದಾ:** ಮೋಡ ಕವಿದ ಆಕಾಶವನ್ನು ನೋಡಿ ಮಳೆ ಬರುವುದೆಂದು ಊಹಿಸುವುದು.

2. **ಶೇಷವತ್:** ಕಾರ್ಯದಿಂದ ಕಾರಣವನ್ನು ಊಹಿಸುವ ಅನುಮಾನ ಅಥವಾ ನಿರಾಕರಣದಿಂದ ಸತ್ಯ ಯಾವುದೆಂಬ ನಿರ್ಣಯಕ್ಕೆ ಬರುವುದು.

   **ಉದಾ:**

   - ಭೂಮಿ ಒದ್ದೆಯಾಗಿರುವುದನ್ನು ನೋಡಿ ಮಳೆಯಾಗಿದೆ ಎಂದು ಊಹಿಸುವುದು.
   - ಯೂಕ್ಲಿಡ್‌ನ ಎಲಿಮೆಂಟ್ಸ್ ಎಂಬ ಗ್ರಂಥದಲ್ಲಿ ನಾವು ಕಾಣುವ ಪರೋಕ್ಷ ಪ್ರಮಾಣದಂತಹುದು.

3. **ಸಾಮಾನ್ಯತೋದೃಷ್ಟ:** ಒಂದು ಸಾಮಾನ್ಯ ತತ್ವವನ್ನು ಪ್ರತ್ಯೇಕ ನಿದರ್ಶನಕ್ಕೆ ಅನ್ವಯಿಸುವುದು ಅಥವಾ

ಇಂದ್ರಿಯ ಗ್ರಾಹ್ಯ ವಸ್ತುಗಳ ಕ್ಷೇತ್ರದಲ್ಲಿ ನಾವು ಕಾಣುವುದರ ಬಲದಿಂದ ಅತೀಂದ್ರಿಯ ವಿಷಯಗಳ ಕ್ಷೇತ್ರದಲ್ಲೂ ಅದಕ್ಕೆ ಸದೃಶ್ಯವಾದ ವಿಷಯಗಳ ಕುರಿತು ತರ್ಕಿಸುವ ವಿಧಾನ.

**ಉದಾ:** ಕೊಡಲಿಯಂತಹ ಒಂದು ಉಪಕರಣವನ್ನು ಬಳಸಲು ಚೇತನ ವಸ್ತುವೊಂದು ಬೇಕು ಎಂಬುದು ನಮಗೆ ತಿಳಿದ ವಿಷಯ. ಈಗ ಮನಸ್ಸು ಅಂತಹುದೊಂದು ಕರಣ ಎಂದು ಭಾವಿಸಿಕೊಂಡು ಅದರ ಹಿಂದೆ ಕರ್ತೃ ಒಂದಿರಬೇಕು ಎಂದು ನಾವು ನಿರ್ಣಯಿಸಬಹದು.. ಆ ಕರ್ತೃವೇ ಆತ್ಮ. ಇಲ್ಲಿ ಆತ್ಮವಾಗಲೀ ಮನಸ್ಸಾಗಲೀ ಪ್ರತ್ಯಕ್ಷ ಗೋಚರವಲ್ಲ.

**ಅನುಮಾನವನ್ನು ಹೇತುವಿನ ಸ್ವಭಾವದ ಮೇಲೆ ಮೂರು ವಿಧವಾಗಿ ವರ್ಗೀಕರಿಸಲಾಗುತ್ತದೆ.**

1. **ಕೇವಲಾನ್ವಯಿ:** ಅನ್ವಯ ಹೇತು ಆಧಾರದ ಮೇಲೆ ನಿರ್ಣಯಕ್ಕೆ ಬರುವುದು

   **ಉದಾ:** ಎಲ್ಲಾ ತಿಳಿಯಬಹುದಾದ ವಸ್ತುಗಳನ್ನು ಹೆಸರಿಸಬಹುದು ಮಡಿಕೆಯು ಒಂದು ಹೆಸರಿಸಬಹುದಾದ ವಸ್ತು. ಆದ್ದರಿಂದ ಮಡಿಕೆಯನ್ನು ಹೆಸರಿಸಬಹುದು.

2. **ಕೇವಲ–ವ್ಯತಿರೇಕಿ:** ವ್ಯತಿರೇಕ ಹೇತುವಿನ ಆಧಾರದ ಮೇಲೆ ನಿರ್ಣಯಕ್ಕೆ ಬರುವುದು.

   **ಉದಾ:** ಯಾವ ವಸ್ತುವು ಇತರ ವಸ್ತುಗಳಿಗಿಂತ ಭಿನ್ನತೆಯನ್ನು ಹೊಂದಿರುವುದಿಲ್ಲವೋ
   ಅದು ಗಂಧವಲ್ಲ. ಭೂಮಿಗೆ ಗಂಧವಿದೆ.ಆದ್ದರಿಂದ ಭೂಮಿಯು ಇತರ ವಸ್ತುಗಳಿಗಿಂತ ಭಿನ್ನವಾಗಿದೆ.

3. **ಅನ್ವಯ ವ್ಯತಿರೇಕಿ:** ಅನ್ವಯ ವ್ಯತಿರೇಕಿ ಹೇತುಗಳ ಆಧಾರದ ಮೇಲೆ ನಿರ್ಣಯಕ್ಕೆ ಬರುವುದು.
   **ಉದಾ:** ಎಲ್ಲಿ ಹೊಗೆ ಇದೆಯೋ ಅಲ್ಲಿ ಬೆಂಕಿ ಇದೆ (ಅಡುಗೆ ಮನೆಯಂತೆ)
   ಎಲ್ಲಿ ಬೆಂಕಿ ಇಲ್ಲವೋ ಅಲ್ಲಿ ಹೊಗೆ ಇಲ್ಲ. (ಸರೋವರದಂತೆ)

**ಅನುಮಾನಗಳನ್ನು ಎರಡು ವಿಧವಾಗಿ ವರ್ಗೀಕರಿಸಲಾಗಿದೆ.**

1. **ಸ್ವಾರ್ಥಾನುಮಾನ:** ತಾನೇ ಆಲೋಚಿಸಿ ನಿರ್ಣಯಕ್ಕೆ ಬರುವ ವಿಧಾನ. ಅಥವಾ ನಮ್ಮ ಮನಸ್ಸಿನಲ್ಲೇ ಇರುವ ಸಂಶಯವನ್ನು ಪರಿಹರಿಸುವ ವಿಧಾನ.

2. **ಪರಾರ್ಥಾನುಮಾನ:** ತಾನು ನಿರ್ಣಯಿಸಿದ್ದನ್ನು ಇನ್ನೊಬ್ಬರ ಅನುಭವಕ್ಕೆ ಬರುವಂತೆ ತಿಳಿಸುವುದು. ಅಥವಾ ಇತರರ ಮನಸ್ಸಿನಲ್ಲಿರುವ ಸಂಶಯವನ್ನು ಪರಿಹರಿಸುವುದು.

ಸ್ವಾರ್ಥಾನುಮಾನಕ್ಕೆ ಮೂರೇ ಅವಯವಗಳು (ವಾಕ್ಯಗಳು) ಸಾಕು. ಆದರೆ ಪರಾರ್ಥಾನುಮಾನಕ್ಕೆ ಐದು ಅವಯವಗಳ (ವಾಕ್ಯಗಳ) ಅವಶ್ಯಕತೆ ಇರುತ್ತದೆ.

**ಭಾರತೀಯ ಅನುಮಾನ (ನ್ಯಾಯ ಅನುಮಾನ) ಮತ್ತು ಅರಿಸ್ಟಾಟಲ್ ತ್ರಿವಾಕ್ಯಾನುಮಾನದ ನಡುವಿನ ಹೋಲಿಕೆ:**

1. ಅರಿಸ್ಟಾಟಲ್ ತ್ರಿವಾಕ್ಯಾನುಮಾನದಲ್ಲಿ ನ್ಯಾಯ ಅನುಮಾನದಲ್ಲಿ ಪಕ್ಷಪದ, ಸಾಧ್ಯಪದ ಮತ್ತು ಮಧ್ಯಮ ಪದಗಳಿವೆ. ಆದರೆ ಇವುಗಳನ್ನು ಬಳಸಿ ರಚಿಸಿರುವ ಆಧಾರ ವಾಕ್ಯ ಮತ್ತು ತೀರ್ಮಾನಗಳು ಭೇರೆ ಬೇರೆಯಾಗಿದೆ.

2. ಅರಿಸ್ಟಾಟಲ್ ತ್ರಿವಾಕ್ಯಾನುಮಾನದಲ್ಲಿ ಮೂರು ವಾಕ್ಯಗಳಿದ್ದರೆ, ನ್ಯಾಯ ಅನುಮಾನದಲ್ಲಿ ಐದು ವಾಕ್ಯಗಳಿವೆ. (ಅರಿಸ್ಟಾಟಲ್ ತ್ರಿವಾಕ್ಯಾನುಮಾನದಲ್ಲಿ ಸಾಧ್ಯವಾಕ್ಯ, ಪಕ್ಷವಾಕ್ಯ ಮತ್ತು ತೀರ್ಮಾನ ಎಂಬ ಮೂರು ವಾಕ್ಯಗಳಿವೆ. ಆದರೆ ನ್ಯಾಯ ಅನುಮಾನದಲ್ಲಿ ಪ್ರತಿಜ್ಞಾ, ಹೇತು, ಉದಾಹರಣ, ಉಪನಯ ಮತ್ತು ನಿಗಮನ ಎಂಬ ಐದು ವಾಕ್ಯಗಳಿವೆ.)

3. ಅರಿಸ್ಟಾಟಲ್ ತ್ರಿವಾಕ್ಯಾನುಮಾನದಲ್ಲಿ ನಾಲ್ಕು ಆಕೃತಿಗಳು ಮತ್ತು ಹತ್ತೊಂಬತ್ತು ಉಪವಿಧಗಳಿವೆ. (ನ್ಯಾಯ ಅನುಮಾನದಲ್ಲಿ ಇಂತಹ ಆಕೃತಿಗಳು ಮತ್ತು ಉಪವಿಧಗಳು ಇಲ್ಲ.) ಈ ರೀತಿಯ ವಿಶ್ಲೇಷಣೆ ಭಾರತೀಯ ನ್ಯಾಯ ಅನುಮಾನದಲ್ಲಿ ಕಂಡುಬರುವುದಿಲ್ಲ. ಏಕೆಂದರೆ ತರ್ಕದಲ್ಲಿ ಸಾಧಿಸಬೇಕಾದದ್ದು ಜ್ಞಾನ.

4. ಅರಿಸ್ಟಾಟಲ್ ತ್ರಿವಾಕ್ಯಾನುಮಾನದಲ್ಲಿ A, E, I, O ಎಂಬ ತರ್ಕ ವಾಕ್ಯಗಳಿರುತ್ತದೆ. ಆದರೆ ಭಾರತೀಯ ನ್ಯಾಯ ಅನುಮಾನದಲ್ಲಿ ಈ ರೀತಿಯ ತರ್ಕವಾಕ್ಯಗಳು ಕಂಡುಬರುವುದಿಲ್ಲ. ಭಾರತೀಯ ನ್ಯಾಯ ಅನುಮಾನದಲ್ಲಿ ಕೇವಲ ಭಾವಾತ್ಮಕ ಅಂಶಗಳನ್ನು ಮಾತ್ರ ಪ್ರತಿಪಾದಿಸುತ್ತದೆ. ನಿಷೇಧಾತ್ಮಕ ತರ್ಕವಾಕ್ಯಗಳ ಪ್ರತಿಪಾದನೆ ಇಲ್ಲ. ನಿಷೇಧಾತ್ಮಕ ಭಾವವನ್ನು ಭಾರತೀಯರು ಭಾವಾತ್ಮಕ ವಾಕ್ಯವಾಗಿಯೇ ಉಪಯೋಗಿಸುತ್ತಾರೆ. ಪಾಶ್ಚಾತ್ಯ ತಾರ್ಕಿಕರು **"ಇಲ್ಲಿ ಘಟ ಇರುವುದಿಲ್ಲ"** ಎಂದು ಹೇಳುವುದನ್ನು ಭಾರತೀಯ ತಾರ್ಕಿಕರು **"ಇಲ್ಲಿ ಘಟಾಬಾವ ಇದೆ"** ಎಂದು ಹೇಳುತ್ತಾರೆ.

5. ಪಾಶ್ಚಾತ್ಯ ತಾರ್ಕಿಕರು ಅನುಗಮನ ಮತ್ತು ನಿಗಮನ ಇವು ಬೇರೆ ಬೇರೆಯಾದ ವಿಧಾನಗಳೆಂದು ಹೇಳುತ್ತಾರೆ. ತ್ರಿವಾಕ್ಯಾನುಮಾನವನ್ನು ಪಾಶ್ಚಾತ್ಯರು ಪೂರ್ಣವಾಗಿ ನಿಗಮನ ಎಂದು ಭಾವಿಸಿದ್ದರಿಂದ ಅದು ಮೂರು ತರ್ಕವಾಕ್ಯಗಳ ನ್ಯಾಯವಾಯಿತು. ಭಾರತೀಯ ತಾರ್ಕಿಕರ ಅಭಿಪ್ರಾಯದಲ್ಲಿ ನಿಗಮನ ಮತ್ತು ಅನುಗಮನಗಳು ಒಂದನ್ನು ಬಿಟ್ಟು ಇನ್ನೊಂದು ಇರುವುದಿಲ್ಲ. ಅವು ಒಂದಕ್ಕೊಂದು ಪೂರಕವಾಗಿದ್ದು ಜ್ಞಾನವನ್ನು ಪೂರ್ಣಗೊಳಿಸುತ್ತದೆ.

6. ಅರಿಸ್ಟಾಟಲ್ ತ್ರಿವಾಕ್ಯಾನುಮಾನ ಮತ್ತು ಭಾರತೀಯ ನ್ಯಾಯ ಅನುಮಾನವನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಇವೆರಡೂ ವಿಧಾನಗಳ ತಳಹದಿಯ ತತ್ವ ಒಂದೇ ಎಂದು ಸ್ಪಷ್ಟವಾಗುತ್ತದೆ. ಆದರೆ ಈ ತತ್ವವನ್ನು ವ್ಯಕ್ತಪಡಿಸುವ ರೂಪ ಮಾತ್ರ ಭಿನ್ನವಾಗಿದೆ.

7. ಭಾರತೀಯರ ಐದು ಅವಯವಗಳ ನ್ಯಾಯವನ್ನು ಅರಿಸ್ಟಾಟಲ್‌ನ ಮೂರು ಅವಯವಗಳ ನ್ಯಾಯದ ರೂಪಕ್ಕೆ ಸುಲಭವಾಗಿ ತರಬಹುದು. ಹಾಗೆಯೇ ಅರಿಸ್ಟಾಟಲ್‌ನ ಮೂರು ಅವಯವಗಳ ನ್ಯಾಯದ ರೂಪವನ್ನು ಭಾರತೀಯರ ಐದು ಅವಯವಗಳ ನ್ಯಾಯದ ರೂಪಕ್ಕೆ ತರಬಹುದು.

   **ಅರಿಸ್ಟಾಟಲ್ ತ್ರಿವಾಕ್ಯಾನುಮಾನಕ್ಕೆ ಉದಾಹರಣೆ:**

   **ಸಾಧ್ಯವಾಕ್ಯ:** ಎಲ್ಲಾ ಮಾನವರೂ ಮೃತ್ಯರು.

   **ಪಕ್ಷವಾಕ್ಯ:** ಸಾಕ್ರೆಟಿಸ್ ಒಬ್ಬ ಮಾನವ

   **ತೀರ್ಮಾನ:** ಆದ್ದರಿಂದ ಸಾಕ್ರೆಟಿಸ್ ಮರ್ತ್ಯ.

ಅರಿಸ್ಟಾಟಲ್ ನ್ಯಾಯದ ಮೂರು ಅವಯವಗಳಲ್ಲಿ ಸಾಧ್ಯವಾಕ್ಯವನ್ನು ಮೂರನೇಯದಾಗಿಯೂ ಪಕ್ಷವಾಕ್ಯವನ್ನು ಎರಡನೇಯದಾಗಿಯೂ ನಿರ್ಣಯವನ್ನು ಐದನೇಯದಾಗಿಯೂ ಮಾಡಿ, ಅದಕ್ಕೆ ಪ್ರತಿಜ್ಞಾ ಮತ್ತು ಉಪನಯಗಳನ್ನು

ಕ್ರಮವಾಗಿ ಮೊದಲನೇಯ ಮತ್ತು ನಾಲ್ಕನೆಯ ಅವಯಯವಗಳಾಗಿ ಸೇರಿಸಿದರೆ, ಅದು ಭಾರತೀಯರ **"ಪಂಚಾವಯವ ನ್ಯಾಯ"**ವಾಗುತ್ತದೆ.

**ಭಾರತೀಯರ "ಪಂಚಾವಯವ ನ್ಯಾಯ"ದ ಉದಾಹರಣೆ:**

**ಪ್ರತಿಜ್ಞಾ:** ಸಾಕ್ರೆಟಿಸ್ ಮರ್ತ್ಯ

**ಹೇತು:** ಮನುಷ್ಯನಾದುದರಿಂದ

**ಉದಾಹರಣ:** ಯಾರು ಮನುಷ್ಯರೋ ಅವರು ಮರ್ತ್ಯರು

**ಉಪನಯ:** ಸಾಕ್ರೆಟಿಸ್ ಮನುಷ್ಯ

**ನಿಗಮನ:** ಸಾಕ್ರೆಟಿಸ್ ಮರ್ತ್ಯ

## ಮಾದರಿ ಪ್ರಶ್ನೆಗಳು

**ಒಂದು ಅಂಕದ ಪ್ರಶ್ನೆಗಳು:**

1. ಭಾರತೀಯ ತರ್ಕಶಾಸ್ತ್ರದ ಪಿತಾಮಹ ಯಾರು?
2. ಭಾರತೀಯ ತರ್ಕಶಾಸ್ತ್ರದ ಮೂಲಗ್ರಂಥ ಯಾವುದು?
3. ಭಾರತೀಯ ನ್ಯಾಯದರ್ಶನದ ಪ್ರಕಾರ ಅನುಮಾನದ ಅವಯವ (ವಾಕ್ಯ)ಗಳು ಎಷ್ಟು?
4. ಪ್ರತ್ಯಕ್ಷ ಎಂದರೇನು?
5. ಉಪಮಾನ ಎಂದರೇನು?
6. ಪ್ರತಿಜ್ಞಾ ಎಂದರೇನು?
7. ಹೇತು ಎಂದರೇನು?
8. ಪಂಚಾವಯವ ನ್ಯಾಯವನ್ನು ವ್ಯಾಖ್ಯಾನಿಸಿ.
9. ಪೂರ್ವವತ್ ಅನುಮಾನವನ್ನು ನಿರೂಪಿಸಿ.
10. ಶೇಷವತ್ ಅನುಮಾನ ಎಂದರೇನು?
11. ಸಾಮಾನ್ಯತೋದೃಷ್ಟ ಅನುಮಾನ ಎಂದರೇನು?
12. ಕೇವಲಾನ್ವಯಿ ಅನುಮಾನ ಎಂದರೇನು?
13. ಕೇವಲ ವ್ಯತಿರೇಕಿ ಅನುಮಾನವನ್ನು ವ್ಯಾಖ್ಯಾನಿಸಿ.
14. ಅನ್ವಯ–ವ್ಯತಿರೇಕಿ ಅನುಮಾನ ಎಂದರೇನು?
15. ಸ್ವಾರ್ಥಾನುಮಾನ ಎಂದರೇನು?
16. ಪರಾರ್ಥಾನುಮಾನ ಎಂದರೇನು?

17. ಸ್ವಾರ್ಥಾನುಮಾನಕ್ಕೆ ಎಷ್ಟು ಅವಯವಗಳ ಅವಶ್ಯಕತೆ ಇದೆ?
18. ಪರಾರ್ಥಾನುಮಾನಕ್ಕೆ ಎಷ್ಟು ಅವಯವಗಳ ಅವಶ್ಯಕತೆ ಇದೆ?

**ಎರಡು ಅಂಕಗಳ ಪ್ರಶ್ನೆಗಳು:**

19. ಭಾರತೀಯ ಅನುಮಾನದ (ನ್ಯಾಯ ಅನುಮಾನ) ಪಂಚಾವಯವಗಳನ್ನು ಹೆಸರಿಸಿ
20. ಅನುಮಾನವನ್ನು ಹೇತುವಿನ ಸ್ವಭಾವದ ಮೇಲೆ ಎಷ್ಟು ವಿಧವಾಗಿ ವರ್ಗೀಕರಿಸಲಾಗಿದೆ?

**ಐದು ಅಂಕಗಳ ಪ್ರಶ್ನೆಗಳು:**

21. ಉದ್ಯೋತಕರ ಪ್ರಕಾರ ಸದ್–ಹೇತುವಿನ ಲಕ್ಷಣಗಳು ಯಾವುವು? ಉದಾಹರಣೆ ಕೊಡಿ.
22. ಭಾರತೀಯ ನ್ಯಾಯ (ನ್ಯಾಯ ಅನುಮಾನ) ದಲ್ಲಿ ಸದ್–ಹೇತುವಿನ ಪಾತ್ರವೇನು? ಸದ್–ಹೇತುವಿನ ಲಕ್ಷಣಗಳನ್ನು ತಿಳಿಸಿ.

**ಹತ್ತು ಅಂಕಗಳ ಪ್ರಶ್ನೆಗಳು:**

23. ಭಾರತೀಯ ನ್ಯಾಯ (ನ್ಯಾಯ ಅನುಮಾನ)ಕ್ಕೂ ಅರಿಸ್ಟಾಟಲ್‌ನ ತ್ರಿವಾಕ್ಯಾನುಮಾನಕ್ಕೂ ಇರುವ ಹೋಲಿಕೆಯನ್ನು ವಿವರಿಸಿ.

❖ ❖ ❖ ❖ ❖

# ಮಾದರಿ ಪ್ರಶ್ನೆ ಪತ್ರಿಕೆ

**ಸಮಯ : 3.15 ಗಂಟೆಗಳು** **ಗರಿಷ್ಠ ಅಂಕ : 100**

**1. ಕೆಳಗಿನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ :** **1 x 10=10**

1. ತರ್ಕಶಾಸ್ತ್ರದ ಅಧ್ಯಯನದ ವಿಷಯವೇನು ?
2. ಭಾಷೆ ಎಂದರೇನು?
3. ನಿರ್ಣಯದ ವಾಖ್ಯೆ ಕೊಡಿ.
4. ತರ್ಕವಾಕ್ಯ / ತಾರ್ಕಿಕ ವಾಕ್ಯ ಎಂದರೇನು ?
5. ಅವ್ಯವಹಿತ ಅನುಮಾನ ಎಂದರೇನು ?
6. ನಿಷೇಧಾತ್ಮಕ ನಿರೂಪಣೆ ಎಂದರೇನು ?
7. ಸಂಯೋಜನೆ ಎಂದರೇನು ?
8. ಆಲೋಚನೆಯ ಮೂಲ ನಿಯಮ ಎಂದರೇನು ?
9. ಭಾರತೀಯ ತರ್ಕಶಾಸ್ತ್ರದ ಮೂಲ ಗ್ರಂಥ ಯಾವುದು ?
10. "ಪ್ರತ್ಯಕ್ಷ" ಎಂದರೇನು ?

**II. ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿ :** **2 x 10=20**

11. ಆಲೋಚನೆಯ ರೂಪ ಮತ್ತು ವಸ್ತು ಎಂದರೇನು ?
12. ಭಾಷೆಯ ಉದ್ದೇಶಗಳನ್ನು ಹೆಸರಿಸಿ.
13. ಸರಳ ಮತ್ತು ಸಂಕೀರ್ಣ ಪದ ಎಂದರೇನು ?
14. ಮೂರ್ತ ಮತ್ತು ಅಮೂರ್ತ ಪದಗಳಿಗೆ ಒಂದು ಉದಾಹರಣೆ ಕೊಡಿ.
15. ASEBINOP ಪದವನ್ನು ವಿಸ್ತರಿಸಿ.
16. ನಿರುಪಾಧಿಕ ತರ್ಕವಾಕ್ಯಗಳ ವರ್ಗೀಕರಣ ಆಧಾರವನ್ನು ಹೆಸರಿಸಿ.
17. ನಿರುಪಾಧಿಕ ತ್ರಿವಾಕ್ಯನುಮಾನದಲ್ಲಿಯ ಮೂರು ಪದಗಳನ್ನು ಹೆಸರಿಸಿ.
18. ಮಿಶ್ರ ತ್ರಿವಾಕ್ಯಾನುಮಾನದಲ್ಲಿಯ ವಿಧಗಳು ಯಾವುವು ?
19. ಅಲಂಕಾರಿಕ ನಿರೂಪಣೆಗೆ ಎರಡು ಉದಾಹರಣೆಗಳನ್ನು ಕೊಡಿ.

20. ತಾರ್ಕಿಕ ನಿರೂಪಣೆ ಎಂದರೇನು ?

21. ವಿಮಧ್ಯ ನಿಯಮ ಎಂದರೇನು ?

22. ಭಾರತೀಯ ನ್ಯಾಯದರ್ಶನದ ಪ್ರಕಾರ ಪಂಚಾವಯವಗಳನ್ನು ಹೆಸರಿಸಿ.

**III ಕೆಳಗಿನ ಯಾವುದಾದರೂ ನಾಲ್ಕಕ್ಕೆ 10–15 ವಾಕ್ಯಗಳಲ್ಲಿ ಟಿಪ್ಪಣಿ ಬರೆಯಿರಿ : 4 x 5 =20**

23. ವಿವೇಚನಾತ್ಮಕ ಚಿಂತನೆಯ ಅವಶ್ಯಕತೆ.

24. ತರ್ಕಶಾಸ್ತ್ರ ಮತ್ತು ಭಾಷೆಯ ನಡುವಿನ ಸಂಬಂಧ.

25. ತಾರ್ಕಿಕ ವಾಕ್ಯದ ಭಾಗಗಳು.

26. ತ್ರಿವಿಧ ತಾರ್ಕಿಕ ವಾಕ್ಯಗಳ ವರ್ಗೀಕರಣ.

27. ಯೂಲರನ ವೃತ್ತಗಳು.

28. ಸಂಯೋಜನೆಯ ಸತ್ಯಾತಾ ಕೋಷ್ಠಕ.

**IV. ಕೆಳಗಿನ ಯಾವುದಾದರೂ ನಾಲ್ಕು ವಾದಗಳನ್ನು ಪರಿಶೀಲಿಸಿ ಮತ್ತು ವಿವರಿಸಿ. 5 x 4=20**

29. ಎಲ್ಲ ವೈದ್ಯರು ಪ್ರಾಮಾಣಿಕರು.

ಎಲ್ಲ ವಕೀಲರು ಪ್ರಾಮಾಣಿಕರು.

∴ ಎಲ್ಲ ವಕೀಲರು ವೈದ್ಯರು.

30. ಒಬ್ಬನು ಕಿವುಡನಾಗಿದ್ದರೆ, ಜೋರಾಗಿ ಮಾತನಾಡುತ್ತಾನೆ.

ಈ ಮನುಷ್ಯನು ಜೋರಾಗಿ ಮಾತನಾಡುತ್ತಾನೆ.

∴ ಈ ಮನುಷ್ಯ ಕಿವುಡನಾಗಿದ್ದಾನೆ.

31. ಎಲ್ಲ ಹಸುಗಳು ಚತುಷ್ಪಾದಿಗಳಲ್ಲ.

ಯಾವ ನಾಯಿಗಳು ಹಸುಗಳಲ್ಲ.

∴ ಯಾವ ನಾಯಿಗಳು ಚತುಷ್ಪಾದಿಗಳಲ್ಲಿ.

32. ಎಲ್ಲ ಚಳಿಯನ್ನು ಬೆಂಕಿಯಿಂದ ಹೋಗಲಾಡಿಸಬಹುದು.

ಈತನ ರೋಗ ಚಳಿ.

∴ ಈತನ ರೋಗವನ್ನು ಬೆಂಕಿಯಿಂದ ಹೋಗಲಾಡಿಸಬಹುದು.

33. ಮಳೆ ಬಂದರೆ, ಭೂಮಿ ತಣ್ಣಗಿರುತ್ತದೆ.

ಮಳೆ ಬಂದಿಲ್ಲ.

∴ ಭೂಮಿ ತಣ್ಣಗಿಲ್ಲ.

34. ಯಾವ ಮಾನವರು ಪರಿಪೂರ್ಣರಲ್ಲ.

ಎಲ್ಲಾ ಮಾನವರು ಪ್ರಾಣಿಗಳು.

∴ ಯಾವ ಪ್ರಾಣಿಗಳು ಪರಿಪೂರ್ಣರಲ್ಲ.

**V.A. ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ : 10 X 1 = 10**

35. ತಾರ್ಕಿಕ ನಿರೂಪಣೆಯ ನಿಯಮಗಳನ್ನು ವಿವರಿಸಿ.

36. ಆಲೋಚನೆಯ ಮೂಲ ನಿಯಮಗಳನ್ನು ವಿವರಿಸಿ.

37. ಸದ್ ಹೇತುವಿನ ಲಕ್ಷಣಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

**B. ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ : 10 X 1 =10**

38. ತರ್ಕಶಾಸ್ತ್ರದ ವ್ಯಾಪ್ತಿಯನ್ನು ವಿವರಿಸಿ.

39. ವಿರೋಧ ತಾರ್ಕಿಕ ವಾಕ್ಯಗಳನ್ನು ಚಚ್ಚೌಕದ ಮೂಲದ ಉದಾಹರಣೆಯೊಂದಿಗೆ ವಿವರಿಸಿ.

**V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ : 2 X 5 = 10**

40. ಮಾನವನ ಜೀವನದಲ್ಲಿ ವಿಚಾರದ ಪಾತ್ರವನ್ನು ವಿವರಿಸಿ.

41. ವ್ಯವಹಿತ ಮತ್ತು ಅವ್ಯವಹಿತ ಅನುಮಾನದ ಮಧ್ಯ ಇರುವ ಐದು ವ್ಯತ್ಯಾಸಗಳನ್ನು ಬರೆಯಿರಿ.

42. ತರ್ಕಶಾಸ್ತ್ರವು ಭಾಷೆಯ ಬೆಳವಣಿಗೆಗೆ ಸಹಾಯಕವಾಗುತ್ತದೆ. ನಿಮ್ಮ ಅಭಿಪ್ರಾಯವನ್ನು ತಿಳಿಸಿ.

# ಮಾದರಿ ಉತ್ತರಗಳು

**I ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸಿ : 1 x 10= 10**

1. ತರ್ಕಶಾಸ್ತ್ರದ ಅಧ್ಯಯನದ ವಿಷಯ ಆಲೋಚನೆ.
2. ಮನಸ್ಸಿನಲ್ಲಿರುವ ಭಾವನೆಗಳನ್ನು ಭಾಷೆಯ ಮೂಲಕ ವ್ಯಕ್ತಪಡಿಸುವುದು.
3. ನಿರ್ಣಯ ಎಂದರೆ ಆಲೋಚನೆಯ ಒಂದು ಸರಳ ರೂಪ.
4. ಆಲೋಚನೆಯನ್ನು ಶಬ್ದಗಳ ಮೂಲಕ ವ್ಯಕ್ತಪಡಿಸುವುದು.
5. ಒಂದೇ ಒಂದು ಗೃಹೀತವಾಕ್ಯದಿಂದ ಅನುಮಾನವನ್ನು ಊಹಿಸುವುದು.
6. ಗೌತಮರ "ನ್ಯಾಯಸೂತ್ರ".
7. ಒಂದೇ ಒಂದು ಗೃಹೀತವಾಕ್ಯದಿಂದ ಅನುಮಾನವನ್ನು ಊಹಿಸುವುದು
8. ಆಲೋಚನೆಯನ್ನು ಭಾವಾತ್ಮಕವಾಗಿ ಹೇಳದೆ ನಿಷೇಧಾತ್ಮಕವಾಗಿ ಹೇಳುವುದನ್ನು ನಿಷೇಧಾತ್ಮಕ ನಿರೂಪಣೆ ಎಂದು ಕರೆಯುತ್ತಾರೆ.
9. ಎರಡು ಹೇಳಿಕೆಗಳನ್ನು "ಮತ್ತು" ಎನ್ನುವ ಪದದಿಂದ ಒಟ್ಟುಗೂಡಿಸುವುದು
10. ಇಂದ್ರೀಯಗಳಿಂದ ಪಡೆಯುವ ಜ್ಞಾನ.

**II ಕೆಳಗಿನ ಯಾವುದಾದರೂ ಹತ್ತು ಪ್ರಶ್ನೆಗಳಿಗೆ ಉತ್ತರಿಸಿ : 2 x 10=20**

11. ಯಾವುದನ್ನು ಕುರಿತು ಆಲೋಚಿಸುತ್ತೇವೆಯೋ ಅದು ವಸ್ತು. ಆ ವಸ್ತುವನ್ನು ಹೇಗೆ ಅಭ್ಯಾಸ ಮಾಡುತ್ತೇವೆ ಎನ್ನುವುದು ರೂಪ.
12. ವರ್ಣಾತ್ಮಕ, ಭಾವನಾತ್ಮಕ, ಕ್ರಿಯಾತ್ಮಕ, ಪ್ರಶ್ನಾರ್ಥಕ.
13. ಸರಳವಾಕ್ಯ ಎಂದರೆ ಒಂದೇ ಒಂದು ಸರಳ ಹೇಳಿಕೆಗಳನ್ನು ಒಳಗೊಂಡಿರುವ ವಾಕ್ಯ. ಸಂಯುಕ್ತ ವಾಕ್ಯ ಎಂದರೆ ಎರಡು ಅಥವಾ ಹೆಚ್ಚು ಹೇಳಿಕೆಗಳನ್ನು ಒಳಗೊಂಡಿರುವ ವಾಕ್ಯ.
14. ವಸ್ತುವಾಚಕ ಪದ –ಕಾಲೇಜ್

    ಭಾವವಾಚಕ ಪದ – ಪ್ರಾಮಾಣಿಕತೆ
15. ASEBINOP

    A – ತಾರ್ಕಿಕ ವಾಕ್ಯದಲ್ಲಿ ಉದ್ದೇಶ ಪದ ವ್ಯಾಪ್ತಿ

    E – ತಾರ್ಕಿಕ ವಾಕ್ಯದಲ್ಲಿ ಎರಡು ಪದಗಳು ವ್ಯಾಪ್ತಿ

    I – ತಾರ್ಕಿಕ ವಾಕ್ಯದಲ್ಲಿ ಎರಡು ಪದಗಳು ಅವ್ಯಾಪ್ತಿ.

    O – ತಾರ್ಕಿಕ ವಾಕ್ಯದಲ್ಲಿ ವಿಧೇಯ ಪದ ಮಾತ್ರ ವ್ಯಾಪ್ತಿ.

16. ಸಂಬಂಧ, ಪರಿಮಾಣ ಮತ್ತು ಗುಣ.

17. ಸಾಧ್ಯಪದ, ಪಕ್ಷಪದ ಮತ್ತು ಮಧ್ಯಮ ಪದ.

18. ಮಿಶ್ರ ತ್ರಿವಾಕ್ಯಾನುಮಾನದ ವಿಧಗಳ – ಮಿಶ್ರ ಕಾಲ್ಪನಿಕ, ಮಿಶ್ರ ವೈಕಲ್ಪಿಕ

19. ವಸ್ತುವಾಚಕ ಪದ – ಕಾಲೇಜ್

ಭಾವವಾಚಕ ಪದ – ಪ್ರಮಾಣಿಕತೆ

20. ನಿರೂಪಿಸಿರುವ ಪದ ಮತ್ತು ನಿರೂಪಿಸುವ ಪದಗಳ ನಡುವಿನ ಸಂಬಂಧವನ್ನು ತಿಳಿಸುವುದೇ ತಾರ್ಕಿಕ ನಿರೂಪಣೆ.

21. ವಿಮಧ್ಯ ನಿಯಮದ ಪ್ರಕಾರ ಎರಡು ದೃವ ನಿಯಮಗಳು ಒಂದೇ ಬಾರಿ ಅಸತ್ಯವಾಗಲು ಸಾಧ್ಯವಿಲ್ಲ.

22. 1. ಪ್ರತಿಜ್ಞ 2. ಹೇತು 3. ಉಪಮಾನ 4. ಉದಾಹರಣ 5. ನಿಗಮನ

**III ಕೆಳಗಿನ ಯಾವುದಾದರೂ ನಾಲ್ಕಕ್ಕೆ ಟಿಪ್ಪಣಿ ಬರೆಯಿರಿ : 5 X 4=20**

23. 1. ವಿವೇಚನಾತ್ಮಕ ಚಿಂತನೆಯ ಅರ್ಥ.

2. ವಿವೇಚನಾತ್ಮಕ ಚಿಂತನೆಯಿಂದ ಪ್ರಾಣಿಗಳಿಗಿಂತ ಮನುಷ್ಯ ಹೇಗೆ ಭಿನ್ನ.

3. ವಿವೇಚನಾತ್ಮಕ ಚಿಂತನೆಯಿಂದ ತನ್ನ ದೈನಂದಿನ ಸಮಸ್ಯಗಳನ್ನು ಹೇಗೆ ಪರಿಹರಿಸಿಕೊಳ್ಳುತ್ತಾನೆ ಎಂಬುದರ ವಿವರಣೆ ಇರಬೇಕು.

24. ತರ್ಕಶಾಸ್ತ್ರವು ಸಮಂಜಸ ಆಲೋಚನೆಯ ಬಗ್ಗೆ ಜ್ಞಾನ ನೀಡುತ್ತದೆ. ನಾವು ಆಲೋಚಿಸಿದ ವಿಷಯವನ್ನು ಮತ್ತೊಬ್ಬರಿಗೆ ತಿಳಿಸಲು ನಮಗೆ ಭಾಷೆಯ ಅಗತ್ಯವಿದೆ. ನಮ್ಮ ಆಲೋಚನೆ, ಭಾವನೆ ಮತ್ತು ಅನುಭವವನ್ನು ಮತ್ತೊಬ್ಬರಿಗೆ ತಿಳಿಸಲು ಅಗತ್ಯವಾಗಿ ಬೇಕಾದ ಸಾಧನವೇ ಭಾಷೆ. ಈ ಕಾರಣದಿಂದ ತರ್ಕಶಾಸ್ತ್ರ ಮತ್ತು ಭಾಷೆಯ ನಡುವೆ ಸಂಬಂಧವಿದೆ.

25. ತಾರ್ಕಿಕ ವಾಕ್ಯದ ಭಾಗಗಳು :

1. ಉದ್ದೇಶ ಪದ

2. ವಿಧೇಯ ಪದ

3. ಸಂಯೋಜಕ ಪದ

ಉದಾ : ಎಲ್ಲಾ ವಿಜ್ಞಾನಿಗಳು ಪ್ರಾಮಾಣಿಕರಾಗಿರುತ್ತಾರೆ.

ವಿಜ್ಞಾನಿಗಳು – ಉದ್ದೇಶಪದ

ಪ್ರಾಮಾಣಿಕ – ವಿಧೇಯ ಪದ

ಆಗಿರುತ್ತಾರೆ – ಸಂಯೋಜಕ ಶಬ್ದ

26. ತ್ರಿವಿಧ ತಾರ್ಕಿಕ ವಾಕ್ಯಗಳು

1. ನಿರಪೇಕ್ಷ ತಾರ್ಕಿಕ ವಾಕ್ಯದ ಅರ್ಥ ಮತ್ತು ಉದಾಹರಣೆಯನ್ನು ಬರೆಯಬೇಕು.

2. ಕಾಲ್ಪನಿಕ ವಾಕ್ಯದ ಅರ್ಥ ಮತ್ತು ಉದಾಹರಣೆ.

3. ವೈಕಲ್ಪಿಕವಾಕ್ಯದ ಅರ್ಥ ಮತ್ತು ಉದಾಹರಣೆಗಳಿರಬೇಕು.

27. ಯೂಲರನ ವೃತ್ತಗಳು – ನಿರಪೇಕ್ಷ ವಾಕ್ಯದ ನಾಲ್ಕು ವಾಕ್ಯಗಳು ಮತ್ತು ಅದರ ವೃತ್ತಗಳು ಮತ್ತು ಉದಾಹರಣೆಗಳು – ಚಿಹ್ನೆಗಳು ಇರಬೇಕು.

28. ಸಂಯೋಜನೆಯ ಸತ್ಯಾತಕೋಷ್ಟಕ:

ಸಂಯೋಜನೆಯ ಅರ್ಥ ಮತ್ತು ಉದಾಹರಣೆಯನ್ನು ನೀಡಿ ಈ ಕೆಳಗಿನ ಕೋಷ್ಟಕ ಬರೆದಿರಬೇಕು.

| P | Q | P.Q |
|---|---|---|
| T | T | T |
| T | F | F |
| F | T | F |
| F | F | F |

**B. ಈ ಕೆಳಗಿನ ನಾಲ್ಕು ವಾದಗಳನ್ನು ಪರೀಕ್ಷಿಸಿ ಮತ್ತು ವಿವರಿಸಿ : 5 X 4= 20**

29. ಎಲ್ಲಾ ವೈದ್ಯರು (P) ಪ್ರಾಮಾಣಿಕರು (M). – $\overset{4}{P}A\overset{X}{M}$

ಎಲ್ಲಾ ನ್ಯಾಯವಾದಿಗಳು (S) ಪ್ರಾಮಾಣಿಕರು (M) – $\overset{4}{S}A\overset{X}{M}$

ನ್ಯಾಯಾವಾದಿಗಳು (S) ವೈದ್ಯರು (P). – $\overset{4}{S}A\overset{X}{P}$

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇಲ್ಲಿ 'ಮಧ್ಯಮ' ಪದದ ಅವ್ಯಾಪ್ತ ದೋಷವನ್ನು ಹೊಂದಿದೆ. ನಿರಪೇಕ್ಷ ವ್ಯವಹಿತ ಅನುಮಾನದ ಮೂರನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗಿದೆ.

30. ಒಬ್ಬನು ಕಿವುಡನಾಗಿದ್ದರೆ, ಜೋರಾಗಿ ಮಾತನಾಡುತ್ತಾನೆ.

ಈ ಮನುಷ್ಯ ಜೋರಾಗಿ ಮಾತನಾಡುತ್ತಾನೆ.

ಈ ಮನುಷ್ಯ ಕಿವುಡನಾಗಿದ್ದಾನೆ.

ಈ ತ್ರಿವಾಕ್ಯಾನುಮಾನವು ಕಾಲ್ಪನಿಕ ತ್ರಿವಾಕ್ಯನುಮಾನ "ಪೂರ್ವಾಂಗ ನಿರಾಕರಣೆ"ಯ ದೋಷಕ್ಕೆ ಗುರಿಯಾಗಿದೆ.

M P

31. ಎಲ್ಲಾ ಹಸುಗಳು ಚತುಷ್ಪಾದಿಗಳು – $\overset{4}{M}A\overset{x}{P}$

S M

ಯಾವ ನಾಯಿಗಳು ಹಸುಗಳಲ್ಲ – $\overset{4}{S}E\overset{4}{M}$

S P

ಯಾವ ನಾಯಿಗಳು ಚತುಷ್ಪಾದಿಗಳಲ್ಲ – $\overset{4}{S}E\overset{4}{P}$

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇದು 'ಸಾಧ್ಯಪದ ಅತಿವ್ಯಾಪ್ತಿ ದೊಷಕ್ಕೆ ಗುರಿಯಾಗಿದೆ. ನಿರಪೇಕ್ಷ ವ್ಯವಹಿತ ಅನುಮಾನದ ನಾಲ್ಕನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ. ಈ ತ್ರಿವಾಕ್ಯನುಮಾನದಲ್ಲಿ ಆಧಾರವಾಕ್ಯದಲ್ಲಿ ಅವ್ಯಾಪ್ತವಾಗಿರುವ ಪದವು ತೀರ್ಮಾನದಲ್ಲಿ ವ್ಯಾಪ್ತವಾಗಿದೆ.

M P

32. ಎಲ್ಲಾ ಚಳಿಯನ್ನು ಬೆಂಕಿಯಿಂದ ಹೋಗಲಾಡಿಸಬಹುದು.

S M

ಈತನ ರೋಗ ಚಳಿ.

S P

ಈತನ ರೋಗವನ್ನು ಬೆಂಕಿಯಿಂದ ಹೋಗಲಾಡಿಸಬಹುದು.

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇಲ್ಲಿ "ದ್ವಂದ್ವಾರ್ಥ ಮಧ್ಯಮ ಪದ" ದೋಷವು ಉಂಟಾಗಿದೆ. ನಿರಪೇಕ್ಷ ವ್ಯವಹಿತ ಅನುಮಾನದ ಒಂದನೆಯ ನಿಯಮವನ್ನು ಉಲ್ಲಂಘಿಸಿದಗ ಈ ದೋಷವು ಉಂಟಾಗುತ್ತದೆ.

33. ಮಳೆ ಬಂದರೆ, ಭೂಮಿ ತಣ್ಣಗಿರುತ್ತದೆ.

ಮಳೆ ಬಂದಿಲ್ಲ.

ಭೂಮಿ ತಣ್ಣಗಿಲ್ಲ.

ಈ ವಾದವು ಅಸಮಂಜಸವಾಗಿದೆ. ಇಲ್ಲಿ 'ಪೂರ್ವಾಂಗದ ನಿರಾಕರಣೆಯ ದೋಷವು ಉಂಟಾಗಿದೆ. ಕಾಲ್ಪನಿಕ ವ್ಯವಹಿತ ಅನುಮಾನದ ಒಂದನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗುತ್ತದೆ.

34. ಯಾವ ಮಾನವರು ಪರಿಪೂರ್ಣರಲ್ಲ.

ಎಲ್ಲಾ ಮಾನವರು ಪ್ರಾಣಿಗಳು.

ಯಾವ ಪ್ರಾಣಿಗಳು ಪರಿಪೂರ್ಣರಲ್ಲ.

ಈ ವಾದವು ಅಸಮಂಜಸವಾಗಿದೆ. ಏಕೆಂದರೆ ಇದು ಪಕ್ಷಪದ ಅತಿವ್ಯಾಪ್ತಿ ದೋಷಕ್ಕೆ ಗುರಿಯಾಗಿದೆ. ನಿರಪೇಕ್ಷ ವ್ಯಾವಹಿತ ಅನುಮಾನದ ನಾಲ್ಕನೆಯ ನಿಯಮವನ್ನು ಉಲ್ಲಂಘಿಸಿದಾಗ ಈ ದೋಷವು ಉಂಟಾಗಿದೆ.

**IV. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ : 5 X 2 = 10**

35. ತಾರ್ಕಿಕ ನಿರೂಪಾಣೆಯ ಅರ್ಥ ಬರೆಯಬೇಕು.

ನಿಯಮಗಳು :

1. ಜಾತಿ ಅಥವಾ ವರ್ಗಗಳನ್ನು ಪ್ರತಿನಿಧಿಸಿರಬೇಕು.
2. ನಿರೂಪಿತ ಪದ ಮತ್ತು ನಿರೂಪಿಸಿರುವ ಪದಗಳು ಸಮವಾಗಿರುವುದು.
3. ಉದ್ದೇಶ ಪದಕ್ಕೆ ಪರ್ಯಾಯ ಪದಗಳನ್ನು ಬಳಸಬಾರದು.
4. ನಿರೂಪಣೆಯು ಸಾಮಾನ್ಯವಾಗಿ ಭಾವಾತ್ಮಕವಾಗಿರಬೇಕು.
5. ನಿರೂಪಣೆಯಲ್ಲಿ ಅಲಂಕಾರಿಕ ಕ್ಲಿಷ್ಠ – ದ್ವಂದ್ವಾರ್ಥಗಳು ಬಳಸಬಾರದು.

36. 1. **ಅನನ್ಯತಾ ನಿಯಮ :** ಈ ನಿಯಮವು ಸಹಜವಾಗಿ 'ಎ' ಯು 'ಎ' ಆಗಿರುತ್ತದೆ ಅಥವಾ 'ಎ' ವಸ್ತು ಎಷ್ಟಾಗಿರುತ್ತದೆ ಅಥವಾ ಎಷ್ಟುರುತ್ತಿದೆ ಎಂದು ಹೇಳುತ್ತದೆ. ಉದಾ : ಸಾಕ್ರೆಟಿಸ್, ಶೈಶವ, ಬಾಲ್ಯ, ಯೌವನ ಮುಂತಾದ ಅವಸ್ಥೆಗಳನ್ನು ಅನುಭವಿಸಿದರು. ಈ ಎಲ್ಲಾ ಅವಸ್ಥೆಗಳು ಸಾಕ್ರೆಟಿಸ್ ಆಗಿಯೇ ಇರುತ್ತವೆ ಎಂದು ತಿಳಿಸಬಹುದು.

2. **ಧ್ರುವ ವಿರೋಧ ನಿಯಮ :** ಧ್ರುವ ವಿರೋಧ ನಿಯಮದ ತತ್ವಗಳನ್ನು ಹಲವು ರೀತಿಯಲ್ಲಿ ತಿಳಿಸಲಾಗಿದೆ. 'ಎ' ಎಂಬ ವನ್ನು 'ಎ' ಆಗಿಯು 'ಎ' ಅಲ್ಲದೆಯು, ಎಂದು ಆಗಿರಲಾರದು ಅಥವಾ 'ಎ' ಆಗಿರುತ್ತದೆ ಮತ್ತು 'ಎ' ಅಗಿರುವುದಲ್ಲಿ ಎಂದು ಅಥವಾ ಎ ಇಲ್ಲಾ ಎಂಬ ವಿರೋಧವನ್ನು ತಿಳಿಸುತ್ತದೆ.

3. **ವಿಮಧ್ಯ ನಿಯಮ :** ವಿಮಧ್ಯ ನಿಯಮದ ಪ್ರಕಾರ ಎರಡು ಧೃವ ವಿರೋಧ ತರ್ಕವಾಕ್ಯಗಳು ಒಂದೇ ಬಾರಿಗೆ ಅಸತ್ಯವು ಆಗಿರುವುದಿಲ್ಲ ಅಥವಾ ಸತ್ಯವೂ ಆಗಿರುವುದಿಲ್ಲ. ಒಂದು ಅಸತ್ಯವಾದರೆ ಮತ್ತೊಂದು ಸತ್ಯವಾಗಿರಬೇಕು. ಒಂದು ಸತ್ಯವಾದರೆ ಮತ್ತೊಂದು ಅಸತ್ಯವಾಗಿರಬೇಕು. ಉದಾ : ಜವಹರಲಾಲ್ ನೆಹರು ಬದುಕಿದ್ದಾರೆ ಎಂದರೆ ಅದು ಸತ್ಯವಾಗಿದೆ.

37. ಸದ್ ಹೇತುವಿನ ನಾಲ್ಕು ಲಕ್ಷಣಗಳಲ್ಲಿ – ಹೇತುವಿನ ಅರ್ಥ, ಪಕ್ಷ ಧರ್ಮಾತ್ಮ, ಸಪಕ್ಷತ್ವ, ವಿಪಕ್ಷತ್ವಗಳನ್ನು ವಿವರಿಸಿರಬೇಕು.

**B. ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದಕ್ಕೆ ಉತ್ತರಿಸಿ. 10 X 1 = 10**

38. ತರ್ಕಶಾಸ್ತ್ರದ ಅರ್ಥ – ತರ್ಕಶಾಸ್ತ್ರವು ವಿವೇಚನಾತ್ಮಕ ಚಿಂತನೆಯ ಜೊತೆಗೆ ಸಮಂಜಸವಾದ ಆಲೋಚನೆಯ ಚಿಂತನೆಯನ್ನು ಹೇಗೆ ಬೆಳೆಸುತ್ತದೆ ಎಂಬುದನ್ನು ವಿವರಿಸಬೇಕು.

39. ತಾರ್ಕಿಕ ವಾಕ್ಯಗಳ ವಿರೋಧ ಸಂಬಂಧ : ನಿರಪೇಕ್ಷ ತಾರ್ಕಿಕ ವಾಕ್ಯದ ಅರ್ಥ ಮತ್ತು ವಿರೋಧ ಸಂಬಂಧದ ಅರ್ಥ, ಚೌಕವನ್ನು ರಚಿಸಿ, ಉದಾಹರಣೆಗಳೊಂದಿಗೆ ನಾಲ್ಕು ರೀತಿಯ ವಿರೋಧ ಸಂಬಂಧಗಳನ್ನು ವಿವರಿಸಿರಬೇಕು.

**V. ಈ ಕೆಳಗಿನ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ : 5 X 2 = 10**

40. ವಿದ್ಯಾರ್ಥಿಯ ಬುದ್ಧಿಶಕ್ತಿ, ಕೌಶಲ್ಯವನ್ನು ಆಧರಿಸಿ ಅಂಕಗಳನ್ನು ನೀಡುವುದು.

41. ವಿದ್ಯಾರ್ಥಿಯ ಬುದ್ಧಿಶಕ್ತಿ, ಕೌಶಲ್ಯವನ್ನು ಆಧರಿಸಿ ಅಂಕಗಳನ್ನು ನೀಡುವುದು.

42. ವಿದ್ಯಾರ್ಥಿಯ ಬುದ್ಧಿಶಕ್ತಿ, ಕೌಶಲ್ಯವನ್ನು ಆಧರಿಸಿ ಅಂಕಗಳನ್ನು ನೀಡುವುದು.

❖ ❖ ❖ ❖ ❖

# GLOSSARY/ಪಾರಿಭಾಷಿಕ ಶಬ್ಧ

A

| | |
|---|---|
| Abstract | ಭಾವ ವಾಚಕ ಪದ |
| Accidence | ತಾತ್ಕಾಲಿಕ, ವಿಶೇಷಣ |
| Accidental definition | ಆಗುಂತಿಕ ಗುಣ ವಾಖ್ಯೆ |
| Affirmative | ಭಾವಾತ್ಮಕ, ನಿಶ್ಚಿತಾರ್ಥಕ |
| Alternative | ವಿಕಲ್ಪ |
| Ambigious | ದ್ವಂದ್ವಾರ್ಥ, ಉಭಯಾರ್ಥ |
| Analysis | ವಿಶ್ಲೇಷಣೆ |
| Antecedent | ಪೂರ್ವಾಂಗ / ಕಾರಣಾಂಗ |
| Art | ಕಲೆ |
| Assumption | ಕಲ್ಪಿತ ವಿಚಾರ |
| Attribute | ಗುಣ, ಗುಣ ವಿಶೇಷ |

B

| | |
|---|---|
| Biological | ಜೈವಿಕ |

C

| | |
|---|---|
| Categorical | ನಿರುಪಾಧಿಕ, ನಿರಪೇಕ್ಷ |
| Circle in definition | ನಿರೂಪಣಾ ವೃತ್ತ |
| Classification | ವರ್ಗೀಕರಣ |
| Clear thinking | ಸ್ಪಷ್ಟ ಚಿಂತನೆ |
| Cognition | ಸುಜ್ಞಾನ |
| Collective term | ಸಮಷ್ಠಿ ಪದ |
| Composite term | ಸಂಯುಕ್ತ ಪದ |
| Compound proposition | ಸಂಯುಕ್ತ ತರ್ಕವಾಕ್ಯ |
| Conceiving | ಊಹಿಸುವಿಕೆ, ಸಂಕಲ್ಪಿಸುವಿಕೆ |
| Concept | ಭಾವನೆ, ಕಲ್ಪನೆ |
| Conception | ಕಲ್ಪನೆ, ಸಂಕಲ್ಪ |
| Conclusion | ತೀರ್ಮಾನ, ನಿರ್ಣಯ |
| Concrete | ಮೂರ್ತ |
| Conditional proposition | ಸಾಪೇಕ್ಷ / ಸೋಪಾಧಿಕ ತರ್ಕವಾಕ್ಯಗಳು |
| Conjunctive proposition | ಸಂಯೋಜಕ ತರ್ಕವಾಕ್ಯಗಳು |
| Connotative term | ಸುಗುಣವಾಚಕ ಪದ |

| | |
|---|---|
| Consequent term | ಕಾರ್ಯಾಂಗ / ಉತ್ತರಾಂಗ |
| Contrary opposition | ಅತ್ಯಂತ ವಿರೋಧ / ವಿಪರೀತ ವಿರೋಧ |
| Contradictory opposition | ಉಪವಿರೋಧ / ಅನುವಿಪರೀತ ವಿರೋಧ |
| Conversion | ಪರಿವರ್ತನೆ |
| Conversion per accidents | ತಾತ್ಕಾಲಿಕ ಪರಿವರ್ತನೆ |

**D**

| | |
|---|---|
| Deduction | ನಿಗಮನ |
| Deductive logic | ನಿಗಮನ ತರ್ಕ |
| Deductive inference | ನಿಗಮನ ಅನುಮಾನ |
| Definition | ವ್ಯಾಖ್ಯೆ, ನಿರೂಪಣೆ |
| Differentia | ವೈಲಕ್ಷಣ, ವಿಶೇಷ ಲಕ್ಷಣ |
| Disjunctive proposition | ವೈಕಲ್ಪಿಕ / ಪರ್ಯಾಯಾತ್ಮಕ ತರ್ಕವಾಕ್ಯ |
| Distribution | ವ್ಯಾಪ್ತಿ |
| Disjunctive Syllogism | ವೈಕಲ್ಪಿಕ / ಪರ್ಯಾಯಾತ್ಮಕ ತ್ರಿವಾಕ್ಯಾನುಮಾನ |

**E**

| | |
|---|---|
| Eduction | ವಿವಕ್ಷಿತ, ಅನುಮಾನ / ನಿಷ್ಕರ್ಷಣ |
| Ethics | ನೀತಿ ಶಾಸ್ತ್ರ |
| Excluded middle | ವಿಮಧ್ಯ ಪದ |

**F**

| | |
|---|---|
| Fallacy | ತರ್ಕದೋಷ |
| False form of thought | ಆಲೋಚನೆಯ ಅಸತ್ಯರೂಪ |
| False matter of thought | ಆಲೋಚನೆಯ ಅಸತ್ಯ ವಿಷಯ |
| Fallacy of Ambigious major | ದ್ವಂದ್ವಾರ್ಥ ಸಾಧ್ಯಪದ ದೋಷ |
| Fallacy of ambigious middle | ದ್ವಂದ್ವಾರ್ಥ ಮಧ್ಯಮ ಪದ ದೋಷ |
| Fallacy of ambigious minor | ದ್ವಂದ್ವಾರ್ಥ ಪಕ್ಷಪದ ದೋಷ |
| Fallacy of four terms | ನಾಲ್ಕು ಪದಗಳ ದೋಷ |
| Fallacy of equivocation | ದ್ವಂದ್ವಾರ್ಥ ಪದ ದೋಷ |
| Fallacy of illicit major | ಸಾಧ್ಯ ಪದ ಅತಿವ್ಯಾಪ್ತಿ ದೋಷ |
| Fallacy of illicit minor | ಪಕ್ಷಪದ ಅತಿವ್ಯಾಪ್ತಿ ದೋಷ |
| Fallacy of negation | ನಿಷೇಧಾತ್ಮಕ ವ್ಯಾಖ್ಯೆ ದೋಷ |

| | |
|---|---|
| Fallacy of undistributed middle | ಮಧ್ಯಮ ಪದ ಅವ್ಯಾಪ್ತಿ ದೋಷ |
| Feeling (noun ) | ಭಾವನೆ |
| Feeling (verb) | ಅನುಭವಿಸು, ಅನಿಸುವುದು |
| Figurative | ಅಲಂಕಾರಿಕ |
| Figurative definition | ಉಪಮ ನಿರೂಪಣೆ |
| Figure | ಆಕೃತಿ |
| Form | ರೂಪ |
| Formal validity | ರೂಪಾತ್ಮಕ ಸತ್ಯತೆ / ಸಿಂಧುತ್ವ |
| Formal science | ರೂಪಾತ್ಮಕ ವಿಜ್ಞಾನ |

**G**

| | |
|---|---|
| Generic property | ಜಾತಿ, ಉಪಲಬ್ಧ ವಿಶೇಷಣ |
| Genera (plural) | ಜಾತಿಗಳು |
| Genus (singular) | ಜಾತಿ |
| Grammer | ವ್ಯಾಕರಣ, ವ್ಯಾಕರಣ ಶಾಸ್ತ್ರ |

**H**

| | |
|---|---|
| Hypothetical | ಹೇತ್ವಾಶ್ರಿತ / ಕಾಲ್ಪನಿಕ |
| Hypothetical Syllogism | ಕಾಲ್ಪನಿಕ / ಹೇತ್ವಾಶ್ರಿತ ವ್ಯವಹಿತ ಅನುಮಾನ |

**I**

| | |
|---|---|
| Idea | ಕಲ್ಪನೆ / ಭಾವನೆ |
| Immediate inference | ಪ್ರತ್ಯಕ್ಷ ಅನುಮಾನ |
| Indian logic | ಭಾರತೀಯ ಅವ್ಯವಹಿತ ಅನುಮಾನ |
| Inductive inference | ಅನುಗಮನ / ವಿಗಮನ ಅನುಮಾನ |
| Induction | ವಿಗಮನ, ಅನುಗಮನ |
| Inductive logic | ವಿಗಮನ, ಅನುಗಮನ ತರ್ಕ |

**J**

| | |
|---|---|
| Judgement | ನಿರ್ಣಯ, ಪ್ರತಿಜ್ಞೆ |

**K**

| | |
|---|---|
| Knowledge | ಜ್ಞಾನ |

**L**

| | |
|---|---|
| Language | ಭಾಷೆ |

| | |
|---|---|
| Law | ನಿಯಮ |
| Lexical definition | ಅರ್ಥಕೋಷಿಯ ನಿರೂಪಣೆ |
| Law of excluded middle | ವಿಮಧ್ಯ ನಿಯಮ |
| Law of identity | ಅನನ್ಯತಾ ನಿಯಮ |
| Law of non-contradiction | ವಿರೋಧ ನಿಯಮ |
| Laws of thought | ಆಲೋಚನೆಯ ಮೂಲ ನಿಯಮ |
| Lexical definition | ಅರ್ಥಕೋಷಿಯ ನಿಯಮ |
| Logical definition | ತಾರ್ಕಿಕ ನಿರೂಪಣೆ |

**M**

| | |
|---|---|
| Major premise | ಸಾಧ್ಯ ವಾಕ್ಯ |
| Major term | ಸಾಧ್ಯ ಪದ |
| Middle term | ಮಧ್ಯಮ ಪದ |
| Minor premise | ಪಕ್ಷವಾಕ್ಯ |
| Minor term | ಪಕ್ಷ ಪದ |
| Material | ವಿಷಯಾತ್ಮಕ |
| Material logic | ವಿಷಯಾತ್ಮಕ ತರ್ಕ |
| Matter | ವಸ್ತು / ವಿಷಯ |
| Matter of thought | ಆಲೋಚನೆಯ ವಿಷಯ |
| Mediate inference | ಅಪ್ರತ್ಯಕ್ಷ ಅನುಮಾನ |
| Mixed Syllogism | ಮಿಶ್ರತ್ರಿವಾಕ್ಯಾನುಮಾನ/ ವ್ಯವಹಿತ ಅನುಮಾನ |

**N**

| | |
|---|---|
| Name | ನಾಮಪದ |
| Narrow definition | ಸಂಕುಚಿತ ನಿರೂಪಣೆ |
| Negative | ನಿಷೇಧಾತ್ಮಕ |
| Negative definition | ನಿಷೇಧಾತ್ಮಕ ನಿರೂಪಣೆ |
| Nominal definition | ಸ್ವನಿರ್ಮಿತ ನಿರೂಪಣೆ |
| Non connotative term | ಅಗುಣವಾಚಕ ಪದ |

**O**

| | |
|---|---|
| Object | ವಸ್ತು |
| Obscure | ಅಸ್ಪಷ್ಟ |
| Obscure definition | ಅಸ್ಪಷ್ಟ ನಿರೂಪಣೆ |
| Observation | ಅವಲೋಕನ |

| | |
|---|---|
| Obversion | ಪ್ರತಿವರ್ತನೆ |
| Opposition of proposition | ತಾರ್ಕಿಕ ವಾಕ್ಯಗಳ ವಿರೋದ |
| **P** | |
| Particular | ಅಪೂರ್ಣವ್ಯಾಪಕ |
| Positive science | ವಾಸ್ತವಿಕ ಶಾಸ್ತ್ರ |
| Positive term | ಭಾವಾತ್ಮಕ / ನಿಶ್ಚಿತಾರ್ಥಕ ಪದ |
| Predicable | ಅನ್ವಯ, ಅಭೇದೀಯ, ವಿಧೇಯ |
| Predicate | ವಿಧೇಯ |
| Predicate term | ವಿಧೇಯ ಪದ |
| Premise | ಆಧಾರ ವಾಕ್ಯ |
| Proper name | ಅಂಕಿತನಾಮ |
| Property | ಉಪಲಬ್ಧ – ವಿಶೇಷಣ |
| Psychology | ಮನಃಶಾಸ್ತ್ರ |
| **Q** | |
| Qualitative | ಗುಣಸೂಚಕ |
| Quantitative | ಪ್ರಮಾಣ ಸೂಚಕ |
| **R** | |
| Reason | ವಿಚಾರ |
| Redundant definition | ಪುನರುಕ್ತಿ, ನಿರೂಪಣೆ |
| Relative term | ಸಂಬಂಧ ಸೂಚಕ ಪದ |
| Rules | ನಿಯಮಗಳು |
| S | |
| Simple conversion | ಸರಳ ಪರಿವರ್ತನೆ |
| Singular term | ವಿಶಿಷ್ಟ ಪದ |

| | |
|---|---|
| Statement | ಹೇಳಿಕೆ / ನಿರೂಪಣೆ |
| Subclass | ಉಪಜಾತಿ / ಉಪವರ್ಗ |
| Subject term | ಉದ್ದೇಶಪದ / ವಿಶೇಷ್ಯ ಪದ |
| Summum genus | ಸರ್ವೋತ್ಕೃಷ್ಟ ಜಾತಿ |
| Syllogism | ವ್ಯವಹಿತ ಅನುಮಾನ / ತ್ರಿವಾಕ್ಯಾನುಮಾನ |
| Symbolic logic | ಸಾಂಕೇತಿಕ ತರ್ಕಶಾಸ್ತ್ರ |
| Symbolic thinking | ಸಾಂಕೇತಿಕ ಆಲೋಚನೆ |
| Synonymous | ಪರ್ಯಾಯ |

**T**

| | |
|---|---|
| Term | ಪದ |
| Too narrow definition | ಅಲ್ಪವ್ಯಾಪಕ ವ್ಯಾಖ್ಯೆ / ಸಂಕುಚಿತ ನಿರೂಪಣೆ |
| Too wide definition | ಅತಿವ್ಯಾಪಕ ವ್ಯಾಖ್ಯೆ / ಅತೀವ ನಿಯಮ |
| Traditional logic | ಸಾಂಪ್ರದಾಯಿಕ ತರ್ಕಶಾಸ್ತ್ರ |
| True | ಸತ್ಯ / ನಿಜ |
| Truth | ಸತ್ಯತೆ |
| True judgement | ಸತ್ಯ ನಿರ್ಣಯ |
| True matters | ನಿಜ ಸಂಗತಿಗಳು / ನಿಜ ವಿಷಯಗಳು |
| Truth table | ಸತ್ಯತಾ ಕೋಷ್ಟಕ |
| Truth value | ಸತ್ಯತಾ ಮೌಲ್ಯ |

**U**

| | |
|---|---|
| Universal proposition | ಪೂರ್ಣವ್ಯಾಪಕ ತರ್ಕವಾಕ್ಯ |
| Universal affirmative | ಪೂರ್ಣವ್ಯಾಪಕ ಭಾವಾತ್ಮಕ |
| Universal negative | ಪೂರ್ಣವ್ಯಾಪಕ ನಿಷೇಧಾತ್ಮಕ |

**V**

| | |
|---|---|
| Vagueness | ಅಸ್ಪಷ್ಟತೆ |
| Validity | ಸಮಂಜಸತೆ / ಸಿಂಧುತ್ವ / ಸಮರ್ಪಕತೆ |
| Values | ಮೌಲ್ಯಗಳು |
| Verb | ಕ್ರಿಯಾಪದ |
| Verbal | ಶಾಬ್ದಿಕ |

**W**

| | |
|---|---|
| Willing | ಇಚ್ಛಿಸುವುದು / ಇಚ್ಛಾಶಕ್ತಿ |
| Words | ಪದಗಳು |

# ಗ್ರಂಥ ಋಣ


1. Introduction to Logic , 11th Edition - Irving M. Copi and Carl Cohen
2. Introduction to Logic and Scientific Method - M.R. Cohen and E. Nagel
3. Introduction to Modern Logic - L. Susan Stebbing
4. Elementary Modern Logic - K.T.Jahagirdar and S.G.Mudgal
5. Elements of Logic and Scientific Method - C.V. Srinivasmurthy
6. Outlines of Indian Philosophy - M. Hiriyanna
7. Indian Philosophy, Vol. 1 & 2 – Dr. Radhakrishnan
8. Deductive Logic – Dr. B.N. Roy
9. ಆಧುನಿಕ ತರ್ಕಶಾಸ್ತ್ರ ಪರಿಚಯ, ಭಾಗ 1 & 2 – ಡಾ. ಕೆ. ಬಿ. ರಾಮಕೃಷ್ಣ ರಾವ್
10. ತರ್ಕಶಾಸ್ತ್ರ (ನಿಗಮನ) – ರವೀಂದ್ರ ಕೊಪ್ಪರ್
11. ತರ್ಕಶಾಸ್ತ್ರ (ನಿಗಮನ ಭಾಗ –I) – ಪ್ರೋ. ಎನ್. ಜಿ. ಮಹಾದೇವಪ್ಪ
12. ತರ್ಕಶಾಸ್ತ್ರ, ಭಾಗ 1 & 2 – ಹನುಮಂತರಾವ್ ಜಿ.
13. ಭಾರತೀಯ ತತ್ವಶಾಸ್ತ್ರದ ರೂಪು–ರೇಷೆಗಳು – ಡಾ. ಪ್ರಭುಶಂಕರ್ (ಅನುವಾದ), ಮೂಲ – ಎಂ. ಹಿರಿಯಣ್ಣ
14. ಭಾರತೀಯ ತತ್ವಶಾಸ್ತ್ರದ ಮೂಲಾಂಶಗಳು – ಡಾ. ಕೆ. ಬಿ. ರಾಮಕೃಷ್ಣ ರಾವ್ (ಅನುವಾದ), ಮೂಲ – ಎಂ. ಹಿರಿಯಣ್ಣ
15. ತರ್ಕಶಾಸ್ತ್ರ ನಿಗಮನ – ಡಾ. ಕೆ.ಸಿ. ಮರಿಯಪ್ಪ, ಶಿವಯೋಗಿ ಪ್ಯಾಟಿಶೆಟ್ಟರ್, ನಾಗರಾಜ್ ಅರಸ್

## BLUE PRINT OF MODEL QUESTION PAPER

Subject: LOGIC Year: 2013-14

Subject Code: 23 Maximum Marks: 100 Time: 3.15 Hours

| Sl. No. | Objectives | No. of hours allotted | Marks allotted | Knowledge | | Understanding | | | Application | | Skill | Total No of Questions | | | |
|---|---|---|---|---|---|---|---|---|---|---|---|---|---|---|---|
| | Questions carrying marks | | | 1 | 2 | 1 | 2 | 5 | 2 | 5 | 10 | 1 | 2 | 5 | 10 |
| | Units / Sub units | | | VSA | SA | VSA | SA | LA | SA | LA | ET | VSA | SA | LA | ET |
| 1 | Nature of logic | 15 | 12 | 1 | 1 | | | 1 | | 1+1 | 1 | 1 | 1 | 1+1 | 1 |
| 2 | Logic and Language | 06 | 08 | 1 | 1 | | | 1+1 | | | | 1 | 1 | 1+1 | |
| 3 | Judgment sentence, and Logical proposition | 15 | 10 | 1 | 1 | | 1 | 1 | | | | 1 | 2 | 1 | |
| 4 | Traditional Classification of proposition | 16 | 12 | 1 | 1 | 1 | 1 | 1 | | 1 | | 2 | 2 | 2 | |
| 5 | Kinds of Deductive inference | 45 | 30 | 1 | 1 | | 1 | 2+1 | | 2<br>1 | 1 | 1 | 2 | 6+1 | 1 |
| 6 | Logical Definition | 05 | 04 | 1 | 1 | | 1 | 1 | | | | 1 | 2 | 1 | |
| 7 | Modern and symbolic logic | 10 | 08 | 1 | 1 | 1 | | 1 | | 1 | | 2 | 1 | 2 | |
| 8 | Basic Elements of Indian Logic | 08 | 06 | 1 | 1 | | | 1 | | | | 1 | 1 | 1 | |
| | General questions | | 10 | | | | | | | | | 10 | 12 | 18 | 2 |
| | **Sub-Total** | | | 8 | 16 | 2 | 8 | 55 | | 35 | 20 | 10 | 24 | 90 | **20** |
| | **Total** | 120 | 100 | **24** | | **65** | | | **35** | | **20** | **42** | | | |